ADJOURNMENT MOTION.

Mr. SPEAKER.—I have already informed the House that an adjournment motion has been tabled by the Hon'ble Sri Mohamed Imam. Today being the day allotted for Supplementary Grants, usually no other business will be transacted today. If the House desires, I will take up the adjournment motion, so far as the question of its admission is concerned. Otherwise, we may take it up tomorrow.

Sri K. HANUMANTHAIYA (Chief Minister).—We may adhere to the Rules.

Mr. SPEAKER.—May I point out to the Hon'ble Leader of the Opposition that even with regard to admissibility of adjournment motion, there may be so many members desiring to speak. So, much of the time may be taken away. Today being the day allotted for Supplementary Demands, many of the Hon'ble Members have sent cut motions. Therefore, why should we not give them sufficient opportunity to speak on their cut motions ?

Sri J. MOHAMED IMAM (Jagalur).—I do not want to assert my right. I will leave it to the House.

Sri K. PRABHAKAR (Nelamangala—Scheduled Castes).—The adjournment motion may be taken up tomorrow.

Mr. SPEAKER.—Yes.

Disposal of Questions

Mr. SPEAKER.—Yesterday, some Hon'ble Members referred to the large number of questions which are not reached during question hour. Several suggestions were put forward and I observed that I would make a statement today.

I have made a considered statement on this subject during the last session on the 22nd March of this year and I invite the attention of the Hon'ble Members to the same. As I observed on that occasion, in no legislature is the question hour extended beyond one hour. Within that one hour on the average 44 questions are disposed of in the House of Commons in England and about 38 in the Lok Sabha. We have also to remember that in these Parliaments answers are read out which takes some time. In our Legislature we usually have only 25 to 30 questions put down for a day.

There is no provision in our rules to carry over to the next day questions not taken up on the particular day. The only way therefore by which we can dispose of a larger number of questions is to ask a small number of supplementaries. In England not more than one or two supplementaries are permitted usually and in the Lok Sabha the average is about three supplementaries.

Hon'ble Members have also to remember that if a small number of questions are put down for a day the result would be that at the end of the session a large number of questions would remain unanswered.

I would therefore request Hon'ble Members to try to reduce the supplementaries on each question so that all the questions on the order paper may be taken up.

I have however arranged that a smaller number of questions may be put down for each day.

A suggestion was made that the question relating to the different Ministers may be put down in rotation. I have arranged for this also.

I hope that with the co-operation of all the Hon'ble Members it will be possible for us to dispose of all the questions on the order paper every day.

DEMAND FOR ADDITIONAL AND SUPPLEMENTARY GRANTS FOR 1955-56.

Mr. SPEAKER.—Now demands will be taken up. Before taking up these demands, I also want to know the opinion of the Hon'ble Members as to how these demands can be discussed. There are 19 demands and a large number of cut motions are also tabled by the Hon'ble Members. Therefore, if the Hon'ble Members can give me their opinion about the procedure to be adopted in disposing of the demands, it will be helpful.

A MEMBER.—Please allot some time for every Demand.

Sri V. M. MASCARENHAS (St. John's-Hill).—We can give 15 to 20 minutes for each demand.

Sri A. V. NARASIMHA REDDY (Bangalore South).—It may not be rational to allot equal time for each demand because some of them are important and some of them are not important, The Chair may adjust the time by using its discretion.

ಶ್ರೀ ಟಿ. ಮರಿಯಪ್ಪ (ಮೈಸೂರು ಉತ್ತರ).—ಒಂದು ಗಂಟೆಯಿಂದ ಎರಡು ಗಂಟೆಯವರೆಗೆ ಇಷ್ಟು ಡಿಮ್ಯಾಂಡ್ಸ್ ಎಂದು ನಿಗದಿ ಮಾಡಬಹುದು.

Mr. SPEAKER.—Can I take it that it is the opinion of the Hon'ble Members to allot a certain number of demands for an hour and then put to vote all the demands if some of them are not covered by that time ?

HON'BLE MEMBERS.—Yes.

Mr. SPEAKER.—I want to bring to the notice of the Hon'ble Members that I have allotted the following time for these demands:—

	From
Demand No. 4	1-15 P.M. to 1-45 P.M.
Demand No. 6	1.45 P.M. to 2 P.M.
Demand No. 8	2 P.M. to 2-15 P.M.
Demand No. 11	2-15 P.M. to 2-30 P.M.
Demand No. 16	2-30 P.M. to 2-45 P.M.
Demand No. 17	2-45 P.M. to 3. P.M.

I will allot time later on with regard to the rest of the demands.

DEMAND No. 4—FOREST.

10. FOREST.

Mr. SPEAKER.—Motion moved :

"That a further sum not exceeding Rs. 5,18,800 be granted to the Government to defray the charges which will come in course of payment during the year ending 31st day of March 1956, in respect of 'Forest'."

In connection with this Demand, the following cut motions are in order :—

Cut Motions Nos. 3,4,5,6,7,8,9,10. Hon'ble Members may speak on their cut motions. I expect them to be brief.

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—ಸ್ವಾಮಿ, ಈ ಅರಣ್ಯಶಾಖೆಗೆ 5,18,800 ರೂಪಾಯಿ ಹೆಚ್ಚಾಗಿ ಹಣಬೇಕೆಂದು ಸರ್ಕಾರದವರು ಕೇಳಿದ್ದಾರೆ. ಇದರಲ್ಲಿ ಮೂರು ಬಾಬುಗಳಿಗೆ ಕೇಳಿದ್ದಾರೆ. ಮೊದಲನೆಯದಾಗಿ, ಮುಳುಗಡೆಯಾಗತಕ್ಕ ಕಾಡಿನಲ್ಲಿರುವ ಮರಗಳನ್ನು ಕಡಿದು ವಿಮಾನ ಕಾರ್ಖಾನೆ ಮತ್ತು ವಿಧಾನ ಸೌಧಕ್ಕೆ ಸಾಗಿಸುವುದಕ್ಕೆ ಹೆಚ್ಚು ಹಣಬೇಕು, ಈ ಕೆಲಸವನ್ನು ತ್ವರಿತವಾಗಿ ಮಾಡಬೇಕು, ಆದಕಾರಣ ಈ ಬಾಬಿಗೆ ನಾಲ್ಕು ಲಕ್ಷ ರೂಪಾಯಿ ಬೇಕೆಂದು ಕೇಳಿದ್ದಾರೆ. ಸ್ವಾಮಿ, ಕಾಡಿನಿಂದ ಮರಗಳನ್ನು ಸಾಗಿಸುವುದು ಸರ್ಕಾರದ ಮುಖ್ಯ ಕರ್ತವ್ಯ. ಈಗಾಗಲೇ ಈ ಸಾಲಿಗೆ ತಯಾರಾಗಿರತಕ್ಕ ಬಡ್ಜೆಟ್ಟಿನಲ್ಲಿ Timber removal by Government agency ಎಂಬ ಬಾಬಿನಲ್ಲಿ ಏಳೂವರೆ ಲಕ್ಷ ರೂಪಾಯಿಕೊಟ್ಟಿದ್ದೇವೆ. ಅದರಲ್ಲೇ ಈ ಕೆಲಸವನ್ನು ಮಾಡಬಹುದು. ಅದರ ಜೊತೆಗೆ ನಾಲ್ಕು ಲಕ್ಷ ರೂಪಾಯಿಬೇಕಾಗುತ್ತದೆಂದು ಕೇಳುತ್ತಿದ್ದಾರೆ. ಈ ಕತ್ತರಿ ನಿರ್ಣಯ ತರುವುದರಲ್ಲಿ ನನ್ನ ಉದ್ದೇಶವಿಷ್ಟೇ. ವಿಮಾನ ಕಾರ್ಖಾನೆಗೆ ಏನು ಮರವನ್ನು ಸರಬರಾಯಿ ಮಾಡುತ್ತಿದ್ದಾರೋ ಅದಕ್ಕೆ ಮೈಸೂರು ಸರ್ಕಾರಕ್ಕೆ ಎಷ್ಟು ಖರ್ಚಾಗುತ್ತದೆ, ನಮಗೆ ಅದಕ್ಕೆ ವಿಮಾನ ಕಾರ್ಖಾನೆಯಿಂದ ಏನು ಬೆಲೆ ಬರುತ್ತದೆ? ಸಂಸ್ಥಾನದಲ್ಲೇ ಮರ ದೊರೆಯುವುದರಿಂದ ಅದಕ್ಕೆ ಲಕ್ಷಾಂತರ ರೂಪಾಯಿ ಖರ್ಚುಮಾಡಿ, ಸಾಗಿಸಿಕೊಂಡು ಬಂದು ಅವರಿಗೆ ಕೊಟ್ಟರೆ ಆವರಿಂದ ನಮಗೆ ಏನು ಬೆಲೆ ಬರುತ್ತದೆ ? ನಮಗಾಗಿರುವ ಖರ್ಚಿನಷ್ಟಾದರೂ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ. ಈಗ 40 ಸಾವಿರ ಅಡಿಯಷ್ಟು ಸಾಗಿಸಲು ನಾಲ್ಕು ಲಕ್ಷ ರೂಪಾಯಿ ಬೇಕೆಂದು ಕೇಳುತ್ತಿದ್ದಾರೆ. ಅಂದರೆ ಒಂದು ಘನ ಅಡಿಗೆ ಹತ್ತು ರೂಪಾಯಿ ಆಯಿತು. ಈಗಾಗಲೇ 1955-56 ನೆಯ ಸಾಲಿನ ಬಡ್ಜೆಟ್ಟಿನಲ್ಲಿ ಒದಗಿಸಿರುವ $7\frac{1}{2}$ ಲಕ್ಷ ರೂಪಾಯಿನಲ್ಲಿ ಈ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲವೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ವಿಧಾನ ಸೌಧಕ್ಕೆ ಮರ ಬರಬೇಕಾಗುತ್ತದೆಂದು ತಿಳಿಸಿದ್ದಾರೆ. ಮೈಸೂರು ದೇಶದ ಎಲ್ಲ ಕಡೆಗಳಿಂದಲೂ ಅದಕ್ಕೆ ಮರ ಬರುತ್ತಿದೆ. ಇಷ್ಟು ಮರ ಅಲ್ಲಿಗೆ ಏತಕ್ಕೆ ಬೇಕು ? ಆ ವಿಧಾನ ಸೌಧದ ಅಂದಾಜಿನಲ್ಲಿ ಈ ಬಗ್ಗೆ ಯಾವ ರೀತಿ ಲೆಕ್ಕವನ್ನಿಟ್ಟಿದ್ದಾರೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ.

ಎರಡನೆಯದಾಗಿ, ಗಂಧದ ಕಾರ್ಖಾನೆಗೆ ಹೆಚ್ಚು ಗಂಧದ ಮರವನ್ನು ಸರಬರಾಯಿ ಮಾಡುವುದಕ್ಕೆ ಒಂದು ಲಕ್ಷ ರೂಪಾಯಿ ಬೇಕಾಗುತ್ತದೆಂದು ಕೇಳಿದ್ದಾರೆ. ಈಗಾಗಲೇ 1955-56ನೆಯ ಸಾಲಿನ ಬಡ್ಜೆಟ್ಟಿನಲ್ಲಿ ಗಂಧದ ಕಾರ್ಖಾನೆಗೆ ಗಂಧದ ಮರವನ್ನು ಸಾಗಿಸುವುದಕ್ಕೆ 3 ಲಕ್ಷ ರೂಪಾಯಿ ಕೊಟ್ಟಿದ್ದೇವೆ. ಇದರ ಜೊತೆಗೆ ಇನ್ನೂ ಒಂದು ಲಕ್ಷ ರೂಪಾಯಿ ಬೇಕಾಗುತ್ತದೆಂದು ಕೇಳುತ್ತಿದ್ದಾರೆ. ಗಂಧದ ಎಣ್ಣೆಯನ್ನು ಹೆಚ್ಚಾಗಿ ತಯಾರು ಮಾಡಬೇಕು. ಇದರ ವ್ಯಾಪಾರ ಹೆಚ್ಚಾಗಿದೆ. ಈ ದೃಷ್ಟಿಯಿಂದ ಸರ್ಕಾರದವರು ಗಂಧದ ಮರವನ್ನು ಹೆಚ್ಚು ಹೆಚ್ಚಾಗಿ ಕಡಿದು ತರಬೇಕು, ಇದರಿಂದ ಈಗಾಗಲೇ ಸರ್ಕಾರಕ್ಕೆ ಕೊಟ್ಟಿರುವ ಹಣ ಸಾಲದೆಂದು ಅರ್ಥವಾಯಿತು. ಮೈಸೂರು ಸಂಸ್ಥಾನದಲ್ಲಿ ಗಂಧದ ಎಣ್ಣೆಯನ್ನು ತಯಾರು ಮಾಡುವುದಕ್ಕೆ ಕಾರ್ಖಾನೆ ಇದೆ, ನಮ್ಮ ಕಾಡಿನಲ್ಲಿ ಗಂಧದ ಮರಗಳಿವೆ. ಈ ಕಾಡಿನಿಂದ ಮರಗಳನ್ನು ಕಡಿದು ಕಾರ್ಖಾನೆಗೆ ಸರಬರಾಯಿ ಮಾಡಿ ಅಲ್ಲಿ ಗಂಧದೆಣ್ಣೆಯನ್ನು ತಯಾರು ಮಾಡಿ ಪರದೇಶಗಳಿಗೆ ಮಾರಾಟ ಮಾಡುತ್ತಾರೆ. ಹಾಗಿದ್ದ ಮೇಲೆ ಸರಬರಾಯಿ ಮಾಡುವ ಮರಕ್ಕೆ ಏನು ಬೆಲೆಕೊಡುತ್ತಿದ್ದಾರೆಂಬುದನ್ನು ತಿಳಿದುಕೊಳ್ಳಬೇಕು. ನಮ್ಮಲ್ಲಿ

ಮರವಿಲ್ಲದಿದ್ದರೆ ಏನು ಹಣ ಕೊಡಬೇಕಾಗಿತ್ತೋ ಅಷ್ಟನ್ನು ಕೊಡುತ್ತಿದ್ದಾರೆಯೋ ಅಥವಾ ನಮ್ಮದೇ ಕಾಡಿನ ಮರವನ್ನು ಕಾರ್ಖಾನೆಗೆ ಕೊಟ್ಟು ಎಣ್ಣೆ ತೆಗೆಸುವುದರಿಂದ ದಾಮಾಷಾ ಮೇಲೆ ಬೆಲೆ ಕಟ್ಟುತ್ತಿದ್ದಾರೆಯೋ ತಿಳಿದುಕೊಳ್ಳಬೇಕಾಗಿದೆ. ಗಂಧದ ಮರಕ್ಕೆ ಹೊರಗಡೆ ಏನು ಬೆಲೆ ಇದೆ ಎಂದು ತಿಳಿದು ಆ ರೀತಿ ಬೆಲೆಯನ್ನು ಕಾರ್ಖಾನೆಯಿಂದ ತೆಗೆದುಕೊಳ್ಳುತ್ತಿದ್ದಾರೆಯೆ? ಗಂಧದ ಎಣ್ಣೆ ಕಾರ್ಖಾನೆಗೆ ಮರವನ್ನು ಮಾರದೆ ಬೇರೆ ಕಡೆಗೆ ಮಾರಿದ್ದರೆ ನಮಗೆ ಏನು ಬೆಲೆ ಬರುತ್ತಿತ್ತು ಎಂಬುದನ್ನು ತಿಳಿದುಕೊಳ್ಳಬೇಕು. ನನಗೆ ತಿಳಿದ ಮಟ್ಟಿಗೆ, ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಲಾಭವೆಂದು ಹೇಳುವುದು, ಎಣ್ಣೆಯನ್ನು ಮಾರಿ ಏನು ಹಣ ಬರುತ್ತದೆಯೋ ಆ ಹಣದಲ್ಲಿ ಖರ್ಚು ವಜಾಮಾಡಿ, ಕಮಿಷನ್ ಕೊಟ್ಟಮೇಲೆ ಏನು ಉಳಿಯುತ್ತದೆಯೋ ಅದರಲ್ಲಿ ಅರಣ್ಯ ಶಾಖೆಗೆ ಕೊಡುತ್ತಾರೆ. ಗಂಧದ ಮರಕ್ಕೆ ದಕ್ಷಿಣ ದೇಶದಲ್ಲಿಯೂ ಮಾರುಕಟ್ಟೆಯಿದೆ, ಬೇರೆ ದೇಶಗಳಲ್ಲಿಯೂ ಇದೆ. ಆ ಬೆಲೆಯಂತೆ ನಮಗೆ ಸಿಕ್ಕಿದರೆ ನಿಜವಾಗಿಯೂ ಅದರ ಮೇಲೆ ಖರ್ಚುಮಾಡಬಹುದು. ನಮ್ಮ ಅರಣ್ಯ ಸಂಪತ್ತನ್ನು ಮಾರುವುದರಲ್ಲಿ ಅದಕ್ಕೆ ಸರಿಯಾದ ಬೆಲೆ ಸಿಕ್ಕುತ್ತದೆಯೆ ಎಂಬುದನ್ನು ತಿಳಿದುಕೊಳ್ಳಬೇಕು. ಈ ಕಾರಣದಿಂದ ಕತ್ತರಿ ನಿರ್ಣಯವನ್ನು ಕಳುಹಿಸಿದ್ದೇನೆ.

ಮೂರನೆಯದಾಗಿ, ತುಮಕೂರಿನ ಸೆಂಟ್ರಲ್ ವುಡ್ ಫ್ಯಾಕ್ಟರಿ ಕಟ್ಟಡಕ್ಕಾಗಿ ಅಕ್ವಿಜಿಷನ್ ಚಾರ್ಜಿಗೆ ಹಣ ಕೇಳಿದ್ದಾರೆ. ಈ ಕಾರ್ಖಾನೆ ಸ್ಥಾಪನೆಯಾಗಿ ಎಷ್ಟೋ ವರ್ಷವಾಯಿತು. ಅದಕ್ಕೆ ಈಗ ಆ ಜಾಗಕ್ಕೆ ಅಕ್ವಿಜಿಷನ್ ಚಾರ್ಜು ಕೊಡಿ ಎಂದು ಕೇಳುತ್ತಿದ್ದಾರೆ. ಎಷ್ಟೋ ವರ್ಷಗಳು ಕಳೆದ ಮೇಲೆ ಆ ಜಾಗಕ್ಕೆ ಈಗ ಹಣ ಕೊಡಬೇಕೆಂದು ಕೇಳುತ್ತಿದ್ದಾರೆ. ಏಕೆ ಇಷ್ಟು ವರ್ಷ ತಡವಾಯಿತು, ಆ ಕಟ್ಟಡ ಕಟ್ಟುವುದಕ್ಕೆ ಮುಂಚೆಯೇ ಅದರ ಅಂದಾಜಿನಲ್ಲಿ ಅಕ್ವಿಜಿಷನ್ ಚಾರ್ಜನ್ನು ಒದಗಿಸಿರಲಿಲ್ಲವೆ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ನನ್ನ ಉದ್ದೇಶ ನಾನು ಕಳುಹಿಸಿರುವ ಖೋತಾ ಸೂಚನೆಯಲ್ಲಿ ಸ್ಪಷ್ಟವಾಗಿದೆ. ಹೋದ ಅಧಿವೇಶನದಲ್ಲಿ ಈ ಸಂಬಂಧವಾಗಿ ನಾನು ಒಂದು ಪ್ರಶ್ನೆಯನ್ನೂ ಕಳುಹಿಸಿದ್ದೆ. ಕೆಲವು ಡಿವಿಜನ್‌ಗಳಲ್ಲಿ ನಾಟಾವನ್ನು ಕಾಡಿನಿಂದ ಟಿಂಬರ್ ಡಿಪೋಗಳಿಗೆ ಹೇರುವುದರಲ್ಲಿ ಅಮಾನಿಮೇಲೆ ಕೆಲಸ ಮಾಡಿಸುತ್ತಿದ್ದೀರಿ, ಅದಕ್ಕೆ ಏನು ದರ ಕೊಡುತ್ತಿದ್ದೀರಿ ಎಂದು ಕೇಳಿದ್ದೆ. ಭದ್ರಾವತಿ ಡಿವಿಜನ್‌ನಲ್ಲಿ ಅಮಾನಿಯಾಗಿ 1953-54 ರಲ್ಲಿ ಸುಮಾರು 2½ ಲಕ್ಷ ಅಡಿ ಮರವನ್ನು ಸಾಗಿಸಿದ್ದಾರೆ, 1954-55ರಲ್ಲಿ ಸುಮಾರು 50 ಸಾವಿರ ಅಡಿಗಳನ್ನು ಅಮಾನಿ ರೇಟ್ ಕೊಟ್ಟು ಸಾಗಿಸಿದ್ದಾರೆ. ಇನ್ನೊಂದು ಉದಾಹರಣೆ ಹೇಳುತ್ತೇನೆ. ತರೀಕೆರೆಗೆ ಹೆಬ್ಬೆ ಡಿಪೋವಿನಿಂದ 1953-54ರಲ್ಲಿ 30 ಮೈಲಿ ದೂರ ಸಾಗಿಸಲು ರೂ.0-11-6ಟೆಂಡರ್ ಮೂಲಕ ಕೊಟ್ಟಿದ್ದಾರೆ. ಅದೇ ವರ್ಷ ಟೆಂಡರ್ ಕರೆಯದೆ 25-26 ಮೈಲಿಗೆ ಅಮಾನಿ ರೇಟ್ ರೂ. 1-3-0ಕೊಟ್ಟಿದ್ದಾರೆ. ಎಂದರೆ ರೂ. 0-7-6 ಹೆಚ್ಚಾಗಿದೆ. ಹೀಗೆ ಸುಮಾರು ಮೂರು ಲಕ್ಷ ಅಡಿ ಮರವನ್ನು ಅಮಾನಿ ರೇಟ್ ಕೊಟ್ಟು 1953-54ಮತ್ತು 1954-55ರಲ್ಲಿ ಸಾಗಿಸಿದ್ದಾರೆ, ನಮಗೆ ಒಂದು ವಿವರಣೆ ಕೊಟ್ಟಿದ್ದಾರೆ. ವಿಮಾನ ಕಾರ್ಖಾನೆಗೂ ವಿಧಾನ ಸೌಧಕ್ಕೂ ಜಾಗ್ರತೆ ಮರವನ್ನು ಸಾಗಿಸಬೇಕಾಗಿತ್ತು, ಆದುದರಿಂದ ಅಮಾನಿ ರೇಟ್ ಕೊಡಬೇಕಾಯಿತೆಂದು ಹೇಳಿದ್ದಾರೆ. ಎಷ್ಟು ಮರವನ್ನು ವಿಮಾನ ಕಾರ್ಖಾನೆಗೆ ಕೊಟ್ಟಿದ್ದು, ಎಷ್ಟು ಮರವನ್ನು ವಿಧಾನ ಸೌಧಕ್ಕೆ ಎಂಬುದನ್ನು ಹೇಳಿಲ್ಲ. ಒಂದು ವರ್ಷ ಅಮಾನಿ ಕೊಟ್ಟು ಪುನಃ ಮುಂದಿನ ವರ್ಷ ಅದೇ ಜಾಗದಿಂದ ಮರ ಸಾಗಿಸಬೇಕಾದರೆ ಪುನಃ ಅಮಾನಿ ಏಕೆ? ನನಗೆ ತಿಳಿದ ಹಾಗೆ, ಹೆಚ್ಚಾಗಿ ಕೇವಲ ಎರಡು ಜನ ಕಂಟ್ರಾಕ್ಟರುಗಳು ಅಮಾನಿ ದರದಲ್ಲಿ ಮರ ಸಾಗಿಸುವುದು ಮಾಮೂಲಾಗಿದೆ. ಬೇಕಾದವರಿಗೆ ಮಾತ್ರ ಅಮಾನಿ ರೇಟ್ ಕೊಟ್ಟು ಮರವನ್ನು ಸಾಗಿಸುತ್ತಿದ್ದಾರೆಂದು ಹೇಳುವುದಕ್ಕೆ ಅಭ್ಯಂತರವಿಲ್ಲ. ಸ್ವಲ್ಪ ಮರವಾದರೆ ಚಿಂತೆಯಿಲ್ಲ. ಲಕ್ಕವಳ್ಳಿ ರೇಂಜಿನಲ್ಲೇ 1953-54ರಲ್ಲಿ 15-16 ಸಾವಿರ ಅಡಿ ಹೇರಲು ಅಮಾನಿ ದರ ಕೊಟ್ಟಿದ್ದಾರೆ. ಇದನ್ನೆಲ್ಲಾ ನೋಡಿದರೆ ಕೆಲವು ಕಂಟ್ರಾಕ್ಟರುಗಳಿಗೆ ಪ್ರೋತ್ಸಾಹ ಮತ್ತು ಇತರ ಉದ್ದೇಶಗಳಿಂದ ಹೀಗೆ ಮಾಡುತ್ತಾರೆಂಬ ಭಾವನೆ ಬರುತ್ತದೆ. ದೂರಕ್ಕೆ ಕಡಿಮೆ ದರದಲ್ಲಿ ಟೆಂಡರ್ ಬಂದಿರುವಾಗ ಹತ್ತಿರಕ್ಕೆ ಹೆಚ್ಚು ಹಣ ಕೊಡಲು ಕಾರಣವೇನು? ಇದರಿಂದ ಅನ್ಯಾಯವಾಗುತ್ತದೆ. ಸರಕಾರಕ್ಕೂ ನಷ್ಟವಾಗುತ್ತದೆ. ಮತ್ತೆ ಕೆಲವು ಕಂಟ್ರಾಕ್ಟರುಗಳು ಈ ಕೆಲಸಕ್ಕೆ ಬರುವುದಕ್ಕೆ ಅವಕಾಶವಿಲ್ಲ. ಇದರಿಂದ ಜನರಲ್ಲಿ ಅತೃಪ್ತಿಯುಂಟಾಗಿದೆ. ಆದುದರಿಂದ ಮರವನ್ನು ಸಾಗಿಸಬೇಕಾದರೆ ಕಡ್ಡಾಯವಾಗಿ ಟೆಂಡರ್ ಮೂಲಕವೇ ಮಾಡಬೇಕೆಂಬ ನಿಯಮವನ್ನು ಪಾಲಿಸದೇಯಿರುವುದು ತಪ್ಪು. ಹೀಗೆ ನಷ್ಟವಾಗಿರುವಾಗ ಸಂಬಂಧಪಟ್ಟ ಅಧಿಕಾರಿಗಳಿಂದ ಹಣವನ್ನು ವಸೂಲು ಮಾಡಬೇಕಾಗುತ್ತದೆ. ಮುಂದಾದರೂ ಟೆಂಡರ್ ಮೂಲಕವಲ್ಲದೆ ಬೇರೆ ರೀತಿ ಮಾಡಬಾರದೆಂದು ತಿಳಿಸಲು ಖೋತಾ ಸೂಚನೆಯನ್ನು ತಂದಿದ್ದೇನೆ.

ಶ್ರೀ ಟಿ. ಮರಿಯಪ್ಪ (ಮೈಸೂರು ನಗರ-ಉತ್ತರ).—ಸ್ವಾಮಿ, ಈ ವಿಷಯದಲ್ಲಿ ಸರ್ಕಾರದವರು ನಮಗೆ ಅಂಕಿ ಅಂಶಗಳನ್ನು ಕೊಡಬೇಕೆಂದು ಕೇಳುತ್ತೇನೆ. ಅಲ್ಲಿ ಮರವನ್ನು ಸಾಗಿಸುವುದಕ್ಕೆ ನೇರವಾಗಿ ಸರ್ಕಾರಿ ಏಜೆನ್ಸಿಯ ಮೂಲಕ ಮಾಡುತ್ತಾರೋ ಅಥವಾ ಕಾಡಿನಲ್ಲೇ ಹರಾಜು ಮಾಡಿ ಕಂಟ್ರಾಕ್ಟರುಗಳು ತರುತ್ತಿದ್ದಾರೆಯೋ ಎಂಬುದನ್ನು ತಿಳಿಸಬೇಕು. ವಿಧಾನ ಸೌಧಕ್ಕೆ ಹೇಗೆ ಮಾರುತ್ತಿದ್ದಾರೆಂಬುದು ಅನುಮಾನ. ಏಕೆಂದರೆ, ಈ ಕಟ್ಟಡದ ಕೆಲಸ ಪಬ್ಲಿಕ್ ವರ್ಕ್ಸ್ ಮಂತ್ರಿಗಳಲ್ಲಿದೆಯೋ ಅಥವಾ ಮುಖ್ಯ ಮಂತ್ರಿಗಳಲ್ಲಿದೆಯೋ ಗೊತ್ತಿಲ್ಲ.

ಅಧ್ಯಕ್ಷರು.—ಇಬ್ಬರೂ ಇಲ್ಲಿಲ್ಲ. . . .

ಶ್ರೀ ಟಿ. ಮರಿಯಪ್ಪ.—ಇಬ್ಬರಲ್ಲೂ ಇಲ್ಲವೆಂಬುದು ಗೊತ್ತು. ತ್ರಿಶಂಕು ಆಗಿದೆ.

ಮರವನ್ನು ತರುವವರು ಯಾರು, ಯಾವ ರೇಟಿನಲ್ಲಿ ತರುತ್ತಾರೆ, ವಿಧಾನ ಸೌಧಕ್ಕೆ ಯಾವ ರೇಟಿನಲ್ಲಿ ಕೊಡುತ್ತಾರೆ ಎಂಬುದನ್ನು ತಿಳಿಸಬೇಕು. ಹತ್ತು ರೂಪಾಯಿಗೆ ಬರುತ್ತದೆಂದು ಶ್ರೀಮಾನ್ ಶ್ರೀನಿವಾಸಯ್ಯಂಗಾರ್ಯರು ಹೇಳಿದರು. ರೇಟು ಎಷ್ಟೆಂಬುದು ಗೊತ್ತಿಲ್ಲ. ಆದುದರಿಂದ ಖಚಿತವಾದ ವಿವರಗಳನ್ನು ಕೊಡಬೇಕೆಂದು ಕೇಳುತ್ತೇನೆ.

ಸ್ವಾಮಿ, ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಚೆನ್ನಿಗರಾಮಯ್ಯನವರು ಉತ್ಸಾಹದಿಂದ ಸ್ಕೂಲುಗಳಿಗೆ ಬೆಂಚುಗಳು, ಮಣೆಗಳು, ಬ್ಲ್ಯಾಕ್ ಬೋರ್ಡುಗಳನ್ನು ತಯಾರು ಮಾಡಿಸಬೇಕೆಂಬ ಉದ್ದೇಶದಿಂದ ಆ ಕಾರ್ಖಾನೆಯನ್ನು ಪ್ರಾರಂಭ ಮಾಡಿಸಿದರು. ಅದು ಕೆಲವು ಕಾಲ ಕೆಲಸ ಮಾಡಿತು. ಇತ್ತೀಚೆಗೆ ಅದರ ವಿಷಯವೇ ಇಲ್ಲ. ಅದು ನಡೆಯುತ್ತಿದೆಯೋ ಇಲ್ಲವೋ ಅದರಿಂದ ಅರಣ್ಯ ಇಲಾಖೆಗೆ ಆದಾಯ ಬಂದಿದೆಯೋ ಇಲ್ಲವೋ ಎಂಬ ಬಗ್ಗೆ ವಿವರಗಳನ್ನು ತಿಳಿಸಬೇಕು.

ಶ್ರೀ ಎಸ್. ಗೋಪಾಲ ಗೌಡ (ಸಾಗರ-ಹೊಸ ನಗರ).—ಸ್ವಾಮಿ, ಡಿಮ್ಯಾಂಡ್ ನಂ. 4 (10) ಅರಣ್ಯಶಾಖೆ ಬಾಬಿನಲ್ಲಿ ಸರ್ಕಾರದವರು ಪುನಃ 5,18,800 ರೂಪಾಯಿಗಳನ್ನು ಬೇಡಿದ್ದಾರೆ. ಈ ಸಂಬಂಧದಲ್ಲಿ ನಾನು ಮೂರು ಖೋತಾ ಸೂಚನೆಗಳನ್ನು ಕಳುಹಿಸಿದ್ದೇನೆ. ಮೊದಲನೆಯದಾಗಿ, ಈಚೆಗೆ ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಹೆಚ್ಚಿನ ಗಂಧದ ಮರಕ್ಕೆ ಬೇಡಿಕೆ ಬಂದಿದೆ, ಆ ಬೇಡಿಕೆಯನ್ನು ಪೂರೈಸುವುದಕ್ಕಾಗಿ ನಮಗೆ ಇನ್ನೂ ಒಂದು ಲಕ್ಷ ರೂಪಾಯಿ ಜಾಸ್ತಿ ಕೊಡಬೇಕೆಂದು ಸರ್ಕಾರದವರು ಕೇಳಿದ್ದಾರೆ. ಈ ಗಂಧದ ಎಣ್ಣೆಯ ಕಾರ್ಖಾನೆಗೆ ಇದುವರೆಗೆ ಒದಗಿಸಿರತಕ್ಕ ಗಂಧದ ಮರಗಳನ್ನು ಯಾವ ರೀತಿ ಅವರು ಪಡೆಯುತ್ತಿದ್ದರು, ಆ ಕೋಠಿಯಲ್ಲಿ ಪ್ರತಿ ವರ್ಷವೂ ಎಷ್ಟು ದಾಸ್ತಾನಿರುತ್ತದೆ ಮತ್ತು ಈ ವರ್ಷ ಈ ರೀತಿ ಹೆಚ್ಚು ಮರವನ್ನೊದಗಿಸಬೇಕಾದರೆ ಜನರಿಂದ ಹೊರಗೆ ಮಾರುಕಟ್ಟೆಯಲ್ಲಿ ಉಂಟಾಗಿರತಕ್ಕ ಪರಿಣಾಮಕರವಾದ ಕಾರಣವೇನು ಮತ್ತು ಈ ವರ್ಷದ ಅಂತ್ಯದವರೆಗೆ ಎಷ್ಟು ಉತ್ಪತ್ತಿಯನ್ನು ಈ ಕಾರ್ಖಾನೆಯ ಮೂಲಕ ಸರ್ಕಾರದವರು ನಿರೀಕ್ಷಿಸುತ್ತಾರೆಂಬ ವಿಷಯಗಳ ಬಗ್ಗೆ ಸರ್ಕಾರದವರು ವಿವರಗಳನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಎರಡನೆಯದಾಗಿ, ಇದರಲ್ಲಿ ಕೊಟ್ಟಿರುವ ಒಂದನೆಯ ಬಾಬಿನಲ್ಲಿ ವಿಮಾನ ಕಾರ್ಖಾನೆ ಮತ್ತು ವಿಧಾನ ಸೌಧಕ್ಕೆ ಸುಮಾರು 40 ಸಾವಿರ ಘನ ಅಡಿಗಳಷ್ಟು ನಾಟಾವನ್ನು ಒದಗಿಸಬೇಕಾಗಿದೆ, ಮುಳುಗಡೆಯಾಗತಕ್ಕ ಪ್ರದೇಶಗಳಿಂದ ಕೂಡಲೇ ಅಲ್ಲಿರತಕ್ಕ ನಾಟಾವನ್ನು ಕಡಿದು ಸಾಗಿಸಬೇಕಾಗಿದೆ ಎಂದು ತಿಳಿಸಿದ್ದಾರೆ. ಈಗಾಗಲೇ ಮಾನ್ಯ ಸದಸ್ಯರು ಒಂದು ವಿಷಯವನ್ನು ಕೇಳಿದ್ದಾರೆ. ತುರ್ತಾಗಿ ನಾಟಾ ಸಾಗಿಸುವುದಕ್ಕೆ ನಾಲ್ಕು ಲಕ್ಷ ರೂಪಾಯಿ ಬೇಕೆಂದು ಸರ್ಕಾರದವರು ಕೇಳುತ್ತಾರೆ. ಈ ನಾಟಾವನ್ನು ಯಾರು ಕಡಿಯುವುದು, ಯಾರು ಸಾಗಿಸುವುದು, ಟೆಂಡರುಗಳನ್ನು ಕರೆದು ಕೊಟ್ಟಿದ್ದಾರೆಯೆ, ಯಾವ ಕಂಟ್ರಾಕ್ಟರಿಗೆ ಕೊಟ್ಟಿದ್ದಾರೆ, ಇದರ ದರ ಯಾವ ರೀತಿ ಇದೆ, ಇದರಲ್ಲಿ ಅಮಾನಿ ಮೇಲೆ ಕೆಲಸ ನಡೆಯುತ್ತಿದೆಯೆ ಮತ್ತು ಈ ಕೆಲಸವನ್ನು ಫಾರೆಸ್ಟ್ ಇಲಾಖೆಯ ಲಾರಿಗಳಲ್ಲಿ ಇಲಾಖೆಯ ಅಧಿಕಾರಿಗಳ ಮೂಲಕ ನಡೆಸುತ್ತಾರೆಯೆ ಅಥವಾ ಖಾಸಗೀ ಜನರಿಗೆ ಒಪ್ಪಿಸಿದ್ದಾರೆಯೆ ? ಈ ವಿಷಯಗಳೆಲ್ಲವನ್ನೂ ಈ ಮನವಿಯ ಸಂಬಂಧದಲ್ಲಿ ಸರ್ಕಾರದವರು ಸಭೆಯ ಮುಂದಿಡಬೇಕೆಂದು ಕೇಳಿಕೊಳ್ಳುತ್ತೇನೆ.

1-30. P.M.

ಮೂರನೆಯದಾಗಿ, ತುಮಕೂರಿನಲ್ಲಿರುವ ಫರ್ನಿಚರ್ ವರ್ಕ್‌ಷಾಪ್ ವಿಷಯ. ಈ ವರ್ಕ್‌ಷಾಪನ್ನು ಅಲ್ಲಿ ಸ್ಥಾಪನೆ ಮಾಡಿದ್ದು, ಈಚೆಗೆ ಅದು ಕೆಲಸವೇ ಮಾಡದೆ ನಿರುಪಯೋಗಿಯಾಗಿರುವುದನ್ನು ನಾವು ನೋಡಿದ್ದೇವೆ. ಹಾಗಿರುವಾಗ ಈಗ ಪುನಃ 18,000 ರೂಪಾಯಿಗಳನ್ನು ಕೊಟ್ಟು ಒಂದು ಜಾಗವನ್ನು ಅಕ್ವೈರ್ ಮಾಡಿಕೊಂಡು ತಮ್ಮಲೂರು ಮತ್ತು ತುಮಕೂರಿನ ಹತ್ತಿರ ಒಂದು ಕೇಂದ್ರ wood ಫ್ಯಾಕ್ಟರಿಯನ್ನು ತೆರೆಯಬೇಕೆಂದು ಹೇಳುತ್ತಿದ್ದೀರಿ. ಸಾಮಾನ್ಯವಾಗಿ ನಮಗೆ ಗೊತ್ತಿರುವ ಹಾಗೆ ಎಲ್ಲಿ ಕಚ್ಚಾ ವಸ್ತುಗಳು ಹೇರಳವಾಗಿ ಸಿಕ್ಕುತ್ತವೆಯೋ ಅಲ್ಲಿ ಒಂದು ಕಾರ್ಖಾನೆಯನ್ನು ಸ್ಥಾಪನೆ ಮಾಡತಕ್ಕದ್ದು ಕ್ರಮವಾಗಿರುತ್ತದೆ. ಆದ್ದರಿಂದ ತುಮಕೂರಿನಲ್ಲಿ ಈ ರೀತಿಯಾಗಿ ಒಂದು wood factoryಯನ್ನು ಸ್ಥಾಪನೆ ಮಾಡಬೇಕೆಂಬುದಕ್ಕೆ ಯಾವ ಕಾರಣವೂ ಇಲ್ಲವೆಂದು ಹೇಳುತ್ತೇನೆ.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಆಗಲೇ ಸ್ಥಾಪನೆಯಾಗಿದೆ.

*ಶ್ರೀ ಎಸ್. ಗೋಪಾಲಗೌಡ.—ಆಗಲೇ ಆಗಿದೆ. ಅದಕ್ಕೀಗ ಪುನಃ ಜಾಗವನ್ನು ಅಕ್ವೈರ್ ಮಾಡಿಕೊಂಡು ಬಡಾವಣೆ ಮಾಡಬೇಕೆಂಬ ಅಭಿಪ್ರಾಯದಿಂದ ಸರ್ಕಾರದವರು ತಂದಿದ್ದಾರೆ! ಈಗ ಯಾವ ಉದ್ದೇಶವನ್ನು ಸಾಧಿಸಬೇಕೆಂದು ಹೇಳಿ ಈ ಬೇಡಿಕೆಯನ್ನು ತಂದಿದ್ದಾರೋ ಆ ಉದ್ದೇಶವನ್ನು ಸಾಧಿಸಲು ಆಗಲೇ ಸಾಧ್ಯವಾಗದೆ ಹೋಗಿರುವುದರಿಂದ, ಅದನ್ನು ಮುಚ್ಚಿ ಬೇರೆ ಮಲೆನಾಡು ಪ್ರಾಂತ್ಯದಲ್ಲಿ ಇಂಥ ಒಂದು ಕಾರ್ಖಾನೆಯನ್ನು ಸ್ಥಾಪಿಸುವುದರಿಂದ ಆ ಉದ್ದೇಶ ಸಾರ್ಥಕವಾದಂತಾಗುವುದೆಂದು ಹೇಳಿ ನಾನು ಈ ಮನವಿಯನ್ನು ವಿರೋಧಿಸುತ್ತೇನೆ.

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ತಾವು ಕೇಳಿರತಕ್ಕ ಡಿಮ್ಯಾಂಡಿನಲ್ಲಿ, ಗಂಧದ ಮರಗಳಿಗೆ ತಗಲತಕ್ಕ ಸ್ಪೈಕ್ ರೋಗವನ್ನು ಕಡಮೆ ಮಾಡುವುದಕ್ಕೂ ಮತ್ತು ರಿಸರ್ಚ್ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೂ ದುಡ್ಡು ಬೇಕಾಗಿದೆ, ಮತ್ತು ಗಂಧದ ಮರಗಳನ್ನು ಯಥೇಚ್ಛವಾಗಿ ಗಂಧದ ಫ್ಯಾಕ್ಟರಿಗೆ ಸಾಗಿಸುತ್ತಿರುವುದರಿಂದ, ಈ ವರ್ಷದ ಬಡ್ಜೆಟ್ಟಿನಲ್ಲಿ ಎಷ್ಟು ಕೊಟ್ಟಿತ್ತೋ ಅದಕ್ಕಿಂತ ಒಂದು ಲಕ್ಷ ರೂಪಾಯಿಗಳನ್ನು ಜಾಸ್ತಿ ಕೊಡಬೇಕೆಂದು ಕೇಳುತ್ತಿದ್ದೀರಿ. ಈ ಸಂದರ್ಭದಲ್ಲಿ ಮೊದಲನೆಯದಾಗಿ, ಹಾಲಿ ಮೈಸೂರು ಮತ್ತು ಶಿವಮೊಗ್ಗದಲ್ಲಿರುವ ಗಂಧದ ಫ್ಯಾಕ್ಟರಿಗಳಲ್ಲಿ ಎಷ್ಟು ಬಾಯಿಲರ್‌ಗಳು ಕೆಲಸ ಮಾಡುತ್ತಿವೆ, ಎಷ್ಟು ಕೆಲಸ ಮಾಡುತ್ತಿಲ್ಲ, ಎಲ್ಲವೂ ಕೆಲಸ ಮಾಡಬೇಕಾದರೆ ಎಷ್ಟು ಗಂಧದ ಮರವನ್ನು ಸಪ್ಲೈ ಮಾಡಬೇಕಾಗಿದೆಯೆಂಬುದನ್ನು ತಿಳಿಸಬೇಕೆಂದು ಕೇಳುತ್ತೇನೆ.

ಎರಡನೆಯದಾಗಿ, ಗಂಧದ ಮರಗಳನ್ನು ಫ್ಯಾಕ್ಟರಿಗೆ ಸಾಗಿಸುವುದಕ್ಕೇ ಅಲ್ಲದೆ ಅಮೇರಿಕಾಕ್ಕೆ (ನಮ್ಮ ಏಜೆಂಟು ಅಲ್ಲೇ ಇರುವುದರಿಂದ) ಎಷ್ಟು ಸಪ್ಲೈ ಮಾಡುತ್ತಿದ್ದಾರೆ, ಅಲ್ಲಿಗೆ ಯಾವ ದರದಂತೆ ಕಳುಹಿಸಲಾಗುತ್ತಿದೆ ಎಂಬುದನ್ನು ತಿಳಿಸಬೇಕು. ಅಲ್ಲದೆ ಗಂಧದ ಮರವನ್ನು ಖಾಸಗಿಯಾಗಿ ಧೂಪ, ಸಾಂಬ್ರಾಣಿ ಮುಂತಾದುವುಗಳಿಗೆ ಉಪಯೋಗಿಸುತ್ತಾರೆ. ಅವುಗಳಿಗೆ ಒದಗಿಸುವಾಗ ಟೆಂಡರು ಮುಖಾಂತರ ಕೊಡುತ್ತಾರೆಯೋ ಅಥವಾ ಅಮಾನಿಯಾಗಿ ಕೊಡುತ್ತಾರೆಯೋ ಎಂಬುದನ್ನೂ ಮತ್ತು ಗಂಧದ ಕೋಠಿಗಳ ಜನರಲ್ ಮ್ಯಾನೇಜರನ್ನು ಕೇಳಿ ಕೊಡುತ್ತಾರೆಯೇ ಎಂಬುದನ್ನು ಹೇಳಬೇಕು.

ಆಮೇಲೆ, ಗಂಧದ ಮರಕ್ಕೆ ಸ್ಪೈಕ್ ರೋಗ ಹತ್ತುವುದನ್ನು ನಿವಾರಣೆ ಮಾಡುವುದಕ್ಕೆ ನಮ್ಮ ಟೆಕ್ನಿಕಲ್ ಅಸಿಸ್ಟೆಂಟರೊಬ್ಬರನ್ನು ಇಟ್ಟುಕೊಂಡಿದ್ದರೂ ಕೂಡ ಅವರು ಇದುವರೆಗೂ ಯಾವ ನಿವಾರಣೋಪಾಯವನ್ನೂ ಕಂಡುಹಿಡಿದಿಲ್ಲ. ನಮ್ಮಲ್ಲಿರುವ ಮರಗಳಲ್ಲಿ ಎಷ್ಟಕ್ಕೆ ಈ ರೋಗ ತಗಲಿದೆ, ಇರತಕ್ಕ ಮರಗಳನ್ನು ಎಷ್ಟು ದಿವಸದವರೆಗೆ ಫ್ಯಾಕ್ಟರಿಗೆ ಸಪ್ಲೈ ಮಾಡಬಹುದು ಎಂಬ ವಿಷಯಗಳಲ್ಲಿ ನಿರ್ದಿಷ್ಟ ಅಂಕಿ ಅಂಶಗಳನ್ನು ಇಟ್ಟುಕೊಂಡಿರುವುದು ಅತ್ಯಾವಶ್ಯಕ. ಏಕೆಂದರೆ, ಇತ್ತೀಚೆಗೆ ಗಂಧದ ಕಾರ್ಖಾನೆಯಿಂದ ನಮಗೆ ವರ್ಷಕ್ಕೆ 40-50 ಲಕ್ಷ ರೂಪಾಯಿಗಳ ಲಾಭ ಬರುತ್ತಿದೆ. ನಮ್ಮಲ್ಲಿರುವ ಮರಗಳ ಸಂಖ್ಯೆಯನ್ನು ಶೇಖರಿಸಿ ಒಂದು ಯೋಜನೆಯನ್ನು ಹಾಕಿಕೊಂಡು

ಗಂಧದ ಮರಗಳ ಬೆಳವಣಿಗೆಯನ್ನು ಅಭಿವೃದ್ಧಿಗೊಳಿಸುವುದು ಅವಶ್ಯಕ. ಈ ಬಗ್ಗೆ ನಾವಿನ್ನೂ ಅಷ್ಟು ಯೋಚನೆ ಮಾಡಿಲ್ಲವೆಂದು ಕಾಣುತ್ತದೆ. ಏಕೆಂದರೆ, ಗಂಧದ ಮರವನ್ನು ಕೆಲವರು ಅದೊಂದು Parasitic Plant ಎಂದು ಹೇಳಿ ಅದನ್ನು ಬೇರೆಯಾಗಿ ಬೆಳೆಯುವುದಕ್ಕಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿದ್ದಾರೆ. ಹಾಗಿದ್ದರೂ, ಕೆಲವರು ಅದನ್ನು ಬೇರೆಯಾಗಿ ಬೆಳೆಸಿ ತೋರಿಸಿಕೊಟ್ಟಿದ್ದಾರೆ. ಇದನ್ನೆಲ್ಲಾ ನೋಡಿದರೆ ಈ ವಿಚಾರದಲ್ಲಿ ತಜ್ಞರು ಪರಿಶೋಧನೆ ನಡೆಸುವುದಿದೆಯೆಂದು ಅರ್ಥವಾಗುತ್ತದೆ. ಆದ್ದರಿಂದ ಸರ್ಕಾರದವರು ಇತ್ತ ಗಮನ ಕೊಡಬೇಕಲ್ಲದೆ ಸ್ಪೈಕ್ ರೋಗವನ್ನು ಹೋಗಲಾಡಿಸುವುದಕ್ಕೆ ಪರದೇಶಕ್ಕೆ ಹೋಗಿ ಬಂದಿರುವ ತಜ್ಞರ ಸಲಹೆಯನ್ನು ಪಡೆಯುವುದು ಉತ್ತಮವೆಂದು ಹೇಳುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಗಂಧದಮರಗಳನ್ನು ಬೆಳೆಸುವುದಕ್ಕೆ ಸರ್ಕಾರದವರು ಹೆಚ್ಚು ಗ್ರಾಂಟು ಕೇಳಿರತಕ್ಕದ್ದು ಸಾಧುವಾಗಿದೆ. ನಾವು ಕೆಲವು ದಿವಸಗಳ ಹಿಂದೆ ಶ್ರೀಮಾನ್ ನಾಗಯ್ಯ ರೆಡ್ಡಿಯವರ ನೇತೃತ್ವದಲ್ಲಿ ಏರ್ಪಾಡಾಗಿದ್ದ ಎಸ್ಟಿಮೇಟ್ ಕಮಿಟಿಯ ಸಂಬಂಧದಲ್ಲಿ ಕೆಲವು ಕಾಡುಗಳನ್ನು ಕೂಡ ಸಂಚಾರ ಮಾಡಿ ನೋಡಿದ್ದೇವೆ. ಗಂಧದ ಮರಗಳನ್ನು ಹೆಚ್ಚು ಹೆಚ್ಚಾಗಿ ಮೈಸೂರು ಸಂಸ್ಥಾನದಲ್ಲಿ ಬೆಳೆಸತಕ್ಕದ್ದು ಅತ್ಯಾವಶ್ಯಕ. ಗಂಧದ ಮರದ ಸಾಮಾನುಗಳನ್ನು ತಯಾರುಮಾಡಿ ಪರ ಪ್ರಾಂತ್ಯಗಳಿಗೆ ಕಳುಹಿಸಿ ತನ್ಮೂಲಕ ಹಣ ಸಂಪಾದನೆ ಮಾಡುವ ಕಾರ್ಖಾನೆಗಳೂ ಕೂಡ ಮೈಸೂರು ಸಂಸ್ಥಾನದಲ್ಲಿ ಹೆಚ್ಚು ಹೆಚ್ಚಾಗಿ ಬೆಳೆಯುತ್ತಿವೆ. ಮೈಸೂರು ಮತ್ತು ಶಿವಮೊಗ್ಗೆಯಲ್ಲಿರತಕ್ಕ ಗಂಧದ ಕಾರ್ಖಾನೆಗಳನ್ನು ಖುದ್ದಾಗಿ ಪರಿಶೀಲಿಸಿದಾಗ ಹಾಲಿ ನಮ್ಮ ದೇಶದಲ್ಲಿ ಉತ್ಪತ್ತಿಯಾಗುತ್ತಿರುವ ಗಂಧದ ಮರ ಕಡಮೆ, ಇನ್ನೂ ಹೆಚ್ಚಿಗೆ ಬೆಳೆಸಿದರೆ ದೇಶಕ್ಕೆ ಅನುಕೂಲವಾಗುತ್ತದೆಂದು ತಿಳಿದುಬಂದಿದೆ. ಜೊತೆಗೆ ಆಗಾಗ್ಗೆ ತಗಲುವ ರೋಗವನ್ನು ನಿವಾರಣೆ ಮಾಡುವುದಕ್ಕೆ ಇಲಾಖೆಯವರು ಜರೂರು ಕಾರ್ಯಕ್ರಮ ಕೈಕೊಳ್ಳಬೇಕಾಗಿದೆ. ಏಕೆಂದರೆ, ವರ್ಷೇ ವರ್ಷೇ ಅನೇಕ ಮರಗಳು ನಾಶವಾಗುತ್ತವೆ. ಆದ್ದರಿಂದ ದಯಮಾಡಿ ಎಲ್ಲರೂ ಈ ವಾಸ್ತವವಾದ ಡಿಮ್ಯಾಂಡಿಗೆ ಒತ್ತಾಯ ಕೊಡಬೇಕೆಂದು ಹೇಳಿ ನಾನು ಸಮರ್ಥನೆ ಮಾಡುತ್ತೇನೆ.

Mr. SPEAKER.—Now the Minister will reply.

Dr. R. NAGAN GOWDA (Minister for Agriculture).—Mr. Speaker, Sir, the important points that have been raised are so many. All that I can do is to touch upon the main point that has been raised. The question about the supply of timber to Vidhana Soudha has been raised. The timber that has been supplied to Vidhana Soudha and the Hindustan Aircraft is supplied at the Government rate. No concession is given to either of these institutions.

Sri T. MARIAPPA.—What is the Government rate ?

Dr. R. NAGAN GOWDA.—Selling price is Rs. 10 per c.ft.

Sri S. SRINIVASA IYENGAR.—What is the cost incurred by Government ?

Dr. R. NAGAN GOWDA.—It is one rupee.

Sri S. SRINIVASA IYENGAR.—Delivered at ?

Dr. R. NAGAN GOWDA.—The timber is delivered in the forest depots, f.o.r.

Sri T. MARIAPPA.—What is the market rate of teak, will you please tell us ?

Dr. R. NAGAN GOWDA.—The market rate of teak varies, depending upon the quality, the size and all that. If it is a long piece of timber that has been cut to size, it costs more.

Sri T. MARIAPPA.—What is the cost realised in the latest auction for first class wood ?

Dr. R. NAGAN GOWDA.—I would like to have notice. I cannot give that information readily, Sir.

Mr. SPEAKER.—The point that is relevant to this purpose is whether it was sold at the market rate or at the Government rate ?

Sri T. MARIAPPA.—He does not know the market price, Sir ?

Dr. R. NAGAN GOWDA.—The timber is sold at the regulated Government rates and no concession is being given to either of these two institutions.

Sri S. SRINIVASA IYENGAR.—Is the Government selling this timber at the market rate ? The Hon'ble Minister was pleased to say that he wants notice and how can he now say that they are selling at the market rate ?

Dr. R. NAGAN GOWDA.—Government have fixed certain rates and the timber is being sold to these institutions at that rate.

Sri T. MARIAPPA.—On a point of information. Is the Government selling the teak to anybody else at the Government rate ? He very conveniently says at the cost price. Whether he sells it at the market rate ? We have no quarrel if he sells it at the market rate because he will realise the net revenue.

Dr. R. NAGAN GOWDA.—As a matter of fact, the rates that we get in auction are lower than the rate fixed by the Government.

Sri T. C. BASAPPA.—I want to know the rates that are being charged for the teak supplied to Vidhana Soudha ?

Dr. R. NAGAN GOWDA.—The rate at which the timber is supplied to H.A.L. and Vidhana Soudha is Rs. 10 per cubic foot.

Sri T. C. BASAPPA.—Then, it is below the rate that is charged at the Government Depot and further the timber that is sold in depots is not inferior to the logs sold to the Vidhana Soudha.

Dr. R. NAGAN GOWDA.—The other points that were raised were about the Sandal extraction, purchase and regeneration of sandal wood trees, spike disease etc. Till the year 1953-54, the Government were getting the net profits out of the working of the Sandal Oil Factories Since than they have been selling the sandal wood at Rs. 2,600 per ton. While fixing the rate of sandal wood, the rates that are obtained for sale of sandal wood in Satyamangalam and other places will be taken into consideration. Ordinarily about 1,200 tons of sandal wood per annum would be supplied to the Sandal Oil Factories. But last year about 1,600 tons of sandal wood was supplied due to the increase in the demand for sandal wood. The money that is now required is for additional expenditure that would be needed for the supply of sandal wood.

Another member enquired about the spike disease; Now, 'we have been doing work on spike disease, but, as the Hon'ble Member knows, the spike disease is one of the most difficult diseases that we have had to tackle. I might give this information to the Hon'ble Member that the Government of India proposes to take into their own hands the work of investigation of the sandal spike disease. The sandal tree are propagated by doubling the seeds. Though it is a parastic plant, yet in many places it is propagated by the Department of Forest by doubling the seeds. No investigation is required for that because it is one of the well known methods.

Sri T. C. Basappa mentioned about carting of timber by *amani* rates. Now this wood is carted by amani rates where tenders are not received. Wherever tenders are received. . . .

Sri T. C. BASAPPA.—I may just inform the concerned Minister that no tenders have been called for in respect of those places I can give the notification if he wants.

Dr. R. NAGAN GOWDA.—That question about calling for tenders is one that the Hon'ble Member has already raised once before and we are looking into that, Then there is the question about Central Wood Working and Furniture Workshop. The land required for them was acquired a long while ago, but the amount was not paid till recently. The acquisition proceedings have been completed only very recently and the money has been paid for that. Sri Gopala Gowda was saying that this institution would work better if it were to be in Shimoga. This institution was specially started in Tumkur because it is an area where timber is not easily available for cultivators and others and for that purpose specially it has been started there. It has been doing tolerably good work.

ಶ್ರೀ ಎಸ್. ಗೋಪಾಲಗೌಡ.—ಟಿಂಬರ್ ಪ್ರಾಡ್ಯೂಸ್ ಮಾಡುವುದಕ್ಕೋಸ್ಕರವಾಗಿ ತುಮಕೂರಿನಲ್ಲಿ ಆ ಫ್ಯಾಕ್ಟರಿಯನ್ನು ಮಾಡಿದ್ದೀರಾ ?

Dr. R. NAGAN GOWDA.—Timber is brought from areas where timber is available and then it is converted into articles and then it is also sold to the cultivators and others as parts for cart wheels, etc. It is doing very good work and we expect to put it to more useful purposes and get better use out of it. These are some of the important points that were raised.

ಶ್ರೀ ಬಿ. ರಾಚಯ್ಯ (ಎಳಂದೂರು—ಅನುಸೂಚಿತ ಜಾತಿಗಳು).—ಇತ್ತೀಚೆಗೆ ಈ ಗಂಧದ ಮರಗಳು ಖಾಸಗೀ ಡಿಪೋಗಳಿಗೆ ಹೆಚ್ಚಗೆ ಬರುತ್ತಿದೆ ಏಕೆ ?

Dr. R. NAGAN GOWDA.—Sandal wood is sold through the private agencies only for purposes like household use and all that. The rate that is fixed for them depends upon the rates that are available from year to year from sales at Satyamangala and other places. But the bulk of sandal wood is used for manufacturing sandal wood oil.

Mr. SPEAKER.—The question is :

"That a further sum not exceeding Rs. 5,18,800 be granted to the Government to defray the charges which will come in course of payment during the year ending 31st day of March 1956, in respect of 'Forest'."

The motion was adopted.

DEMAND No. 6. CHARGES ON ACCOUNT OF MOTOR VEHICLES ACTS.

12.—CHARGES ON ACCOUNT OF MOTOR VEHICLES ACTS.

Mr. SPEAKER.—Motion moved:

"That a further sum not exceeding Rs. 5,000 be granted to the Government to defray the charges which will come in course of payment during the year ending 31st day of March 1956, in respect of 'Charges on account of Motor Vehicles Acts."

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ನಾನೀಗ S.T.A. ಮತ್ತು R.T.A. ಸಮಿತಿಗಳಿಗೆ ಕೊಡತಕ್ಕ ಟಿ. ಎ. ಜಾಸ್ತಿ ಆಗಿದೆ ಎನ್ನತಕ್ಕ ವಿಚಾರವನ್ನು ಪ್ರಸ್ತಾಪಿಸಲಿಕ್ಕೆ ಹೋಗುವುದಿಲ್ಲ. ಆದರೆ ಈಗ ಈ ಸಮಿತಿಗಳು ಕೆಲಸ ನಡೆಸುತ್ತಿರುವ ವಿಧಾನದಿಂದಲೂ ಮತ್ತು ಸರ್ಕಾರದವರು, ಎಂದರೆ, ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಮಾಡುತ್ತಿರುವ ಕೆಲಸದ ವಿಧಾನದಲ್ಲಿ ನಮಗೆ ತಿಳಿದು ಬಂದಿರುವ ವರ್ತಮಾನದ ಪ್ರಕಾರ ಈ ಬಸ್ ಓನರ್‌ಗಳೆಲ್ಲಾ ಬೆಂಗಳೂರಿಗೆ ಖಾಯಂ ಯಾತ್ರಾರ್ಥಿಗಳಾಗಿರುತ್ತಾರೆಂದು ತಿಳಿದು ಬಂದಿದೆ. ಎಂದರೆ ಆ ಬಸ್ ಮಾಲೀಕರುಗಳು ಸಾಮಾನ್ಯವಾಗಿ ಬೆಂಗಳೂರಿಗೆ ಬರುತ್ತಲೇ ಇರಬೇಕಾಗಿದೆ. ಇದಕ್ಕೆಲ್ಲ ಮೂಲಕಾರಣ ತಾವು ಕಾನೂನಿನಲ್ಲಿ ಕೆಲವು ಪ್ರಾಮುಖ್ಯವಾದ ಅಂಶಗಳನ್ನು ನಮೂದಿಸದೆ ಇರುವುದು. ಈಗಾಗಲೇ ಸಂಸ್ಥಾನಾಮಳೆ ಕ್ರಮವಾಗಿ ಬಸ್‌ಗಳನ್ನು ಓಡಿಸತಕ್ಕಂಥ ಪ್ರಾಮುಖ್ಯವಾದ ರಸ್ತೆಗಳನ್ನೆಲ್ಲಾ ಸರ್ಕಾರ ಮನಾಪಲೈಜ್ ಮಾಡಿಕೊಂಡಿದೆ. ಅಂತೂ ಒಂದಾನೊಂದು ಕಾಲಕ್ಕೆ ಈ ಸಂಚಾರ ಸೌಕರ್ಯದ ಪೂರಾ ವ್ಯವಸ್ಥೆಯನ್ನು ಸರ್ಕಾರವೇ ವಹಿಸತಕ್ಕಂಥ ಪರಿಸ್ಥಿತಿ ಬರುತ್ತಿದೆ. ಆದರೆ ಅಲ್ಲಿಯವರೆಗೂ ಈ ಬಸ್‌ಗಳನ್ನು ಓಡಿಸತಕ್ಕಂಥ ಖಾಸಗೀ ಬಸ್ ಮಾಲೀಕರುಗಳಿಗೆ ತುಂಬ ತೊಂದರೆಯುಂಟಾಗಿದೆ. ಈ ಆರ್. ಟಿ. ಎ. ನವರು ಅವರ ಲೈನುಗಳಿಗೆ ಸ್ಟೇ ಮಾಡುವುದು, ಅದರ ಬಗ್ಗೆ ಆ ಮಾಲೀಕರುಗಳು S.T.A. ಮತ್ತು ಸರ್ಕಾರಕ್ಕೆ ಅಪೀಲುಬಗ್ಗೆ ತಿರುಗಾಡುವುದು ತುಂಬ ಕಷ್ಟಕರವಾಗಿದೆ. ಅಂತೂ ಟೈಮಿಂಗ್ಸನಲ್ಲಾದರೂ ಕೊಂಚ ವ್ಯತ್ಯಾಸ ಮಾಡಿಕೊಟ್ಟರೆ ಅನುಕೂಲವಾದೀತೆಂಬ ಒಂದು ಆಸೆಯಿಂದಲೂ, ಇತ್ಯಾದಿ ನಾನಾ ಕಾರಣಗಳಿಂದ ಅವರ ಓಡಾಟ ತುಂಬಾ ಜಾಸ್ತಿಯಾಗಿದೆ. ಹಿಂದಿನ ಕಾಲದಲ್ಲಾಗಿದ್ದರೇನೋ ಸರ್ಕಾರದಲ್ಲಿ ಕೆಲಸಕಾರ್ಯಗಳಾಗಬೇಕಾಗಿದ್ದರೆ ದುಡ್ಡು ಕಾಸುಗಳನ್ನು ಕೊಡಬೇಕಾಗಿತ್ತು. ಆದರೆ ಈಗಲೂ ಸಹ ಆ ಪದ್ಧತಿಯೇನೂ ತಪ್ಪಿಲ್ಲ. ಈಗಲೂ ಇದ್ದೇಇದೆ. ನನ್ನ ಅಭಿಪ್ರಾಯ ಈ ಸಮಿತಿಗಳ ಸದಸ್ಯರು ತೆಗೆದುಕೊಳ್ಳುತ್ತಾರೆಂದಲ್ಲ. ಈ ಆಫೀಸುಗಳಲ್ಲಿ ಕೆಲಸ ಮಾಡತಕ್ಕಂಥ ಗುಮಾಸ್ತರುಗಳು ವಿನಾ ಕಾರಣ ಕಾಲವಿಳಂಬಮಾಡಿ ಆ ಜನರನ್ನು ಈ ಸಣ್ಣಪಟ್ಟ ವಿಷಯಗಳಿಗೆ ತಿರುಗಾಡುವಂತೆ ಮಾಡಿದರೆ ಅವರಾಗಿಯೇ ದುಡ್ಡುಕೊಡುತ್ತಾರೆಂಬ ಉದ್ದೇಶದಿಂದ ಈ ನೌಕರರುಗಳಿಂದ ತುಂಬ ತೊಂದರೆಯಾಗುತ್ತಿದೆ. ಇದನ್ನು ಸಂಬಂಧಪಟ್ಟ ಮಂತ್ರಿಗಳು ತಪ್ಪಿಸಬೇಕೆಂದು ತಿಳಿಸುತ್ತೇನೆ. ಆದರೆ ನಾನು ಹೀಗೆ ಮಾಡಿ ಆ ಖಾಸಗೀ ಬಸ್ ಮಾಲೀಕರುಗಳಿಗೆ ಅನುಕೂಲಪಡಿಸಿಕೊಡಿ ಎಂದು ಹೇಳುವುದಿಲ್ಲ. ಅಂದರೆ ತಾವು ರಚಿಸತಕ್ಕಂಥ ಕಾನೂನುಗಳಲ್ಲಿ ಈ ರೀತಿ ಜನರು ವೃಥಾ ತೊಂದರೆಗಳಿಗೀಡಾಗದಿರುವಂತೆ ಕಾನೂನನ್ನು ರಚಿಸಬೇಕೆಂಬ ಅಂಶವನ್ನು ಸರ್ಕಾರದವರ ಗಮನಕ್ಕೆ ತರಲು ನಾನೀ ಖೋತಾ ಸೂಚನೆಯನ್ನು ತಂದಿದ್ದೇನೆ.

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—ಸ್ವಾಮಿ, ಈ ಬಾಬಿಗೆ ಈಗಾಗಲೇ ನಾವು 3,200 ರೂಪಾಯಿಗಳನ್ನು ಒದಗಿಸಿರತ್ತೇವೆ. ಇನ್ನೂ ಸ್ವಲ್ಪ ಹೆಚ್ಚಿಗೆ ಬೇಕೆಂದು ಕೇಳಿದರೆ ಅದನ್ನೂ ಕೊಡೋಣ. ಆದರೆ ಹಾಗೆ ಕೇಳುವುದಕ್ಕೆ ಕಾರಣಗಳಿರಬೇಕು. ಈ ಸಂದರ್ಭದಲ್ಲಿ ನಾವು 1955-56 ನೆಯ ಸಾಲಿನಲ್ಲಿ ಆಡಿಟ್‌ಮಾಡಿರತಕ್ಕ ಈ ಬಾಬಿನ ಲೆಕ್ಕ ಪತ್ರಗಳನ್ನು ಪರಿಶೀಲನೆ ಮಾಡಿನೋಡಿದರೆ ಒದಗಿಸಿದ್ದ ಮೊಬಲಗಿನಲ್ಲಿ ಕೇವಲ 759 ರೂಪಾಯಿಗಳು ಮಾತ್ರ ಖರ್ಚಾಗಿದೆಯೆಂದು ತಿಳಿದು ಬರುತ್ತದೆ. ಹೀಗೆ ಈ ಬಾಬಿಗಾಗಿ ನಾವು ಕೊಟ್ಟಿರತಕ್ಕ 3,200 ರೂಪಾಯಿಗಳೇ ಜಾಸ್ತಿಯಾಗಿರುತ್ತದೆಂದು ಲೆಕ್ಕ ಪತ್ರಗಳಿಂದಲೇ ವ್ಯಕ್ತಪಡುತ್ತಿದ್ದಾಗ್ಯೂ ಈಗ ಇದ್ದಕ್ಕಿದ್ದ ಹಾಗೆ ಏಕ್‌ದಂ 5,000 ರೂಪಾಯಿಗಳು ಬೇಕೆಂದು ಕೇಳುವುದಕ್ಕೆ ಅಂಥ ಕಾರಣಗಳೇನಿರುತ್ತವೆಂಬುದಕ್ಕೆ ಮಾನ್ಯಮಂತ್ರಿಗಳು ಸ್ವಲ್ಪ ವಿವರಣೆ ಕೊಡಬೇಕಾಗಿದೆಯೆಂದು ಮಾತ್ರ ಹೇಳುತ್ತೇನೆ.

ಶ್ರೀ ಬಿ. ನಾರಾಯಣಸ್ವಾಮಿ (ಮೈಸೂರು).—ಈಗ ತಾವು ಕೇಳುತ್ತಿರುವ 5,000 ರೂಪಾಯಿಗಳ ಮೊಬಲಗು ಜಿಲ್ಲಾ ಕಸಬೆಗಳಲ್ಲಿರತಕ್ಕ R.T.A. ಮತ್ತು ಈ S.T.A. ಎರಡು ಸಂಸ್ಥೆಗಳಿಗೂ ಅನ್ವಯಿಸುತ್ತದೆಯೋ? ಈ R.T.A. ಮತ್ತು S.T.A. ಗಳು ವರ್ಷಕ್ಕೆ ಎಷ್ಟಾವರ್ತಿ ಸಭೆ ಸೇರುತ್ತವೆ ? ಏನು ತಿಂಗಳಿಗೊಂದಾವರ್ತಿಯೋ ಅಥವಾ ಎರಡಾವರ್ತಿಯೋ ಅಥವಾ ಮೂರುತಿಂಗಳಿಗೊಂದಾವರ್ತಿಯೇ, ಎರಡು ತಿಂಗಳಿಗೊಂದಾವರ್ತಿಯೇ ? ಈ ಎಲ್ಲಾ ವಿಚಾರಗಳನ್ನೂ ಸಹ ವಿವರವಾಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

*ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಶಾಖೆಯ ಮಂತ್ರಿಗಳು).—ಸ್ವಾಮಿ, ಈಗ ತಾನೇ ಶ್ರೀ ಗೋಪಾಲಗೌಡರು ಹೇಳಿರತಕ್ಕ ಅಭಿಪ್ರಾಯಕ್ಕನುಸಾರವಾಗಿಯೇ ಈ R.T.A. ಮತ್ತು S.T.A. ಸಮಿತಿಗಳ ಕಾರ್ಯಚಟುವಟಿಕೆಗಳು ಚುರುಕಾಗಿ ನಡೆಯುವಂತೆ ಮಾಡುವುದಕ್ಕಾಗಿಯೂ ಮತ್ತು ಈ ಸಂಬಂಧದಲ್ಲಿ ಕಾಲವಿಳಂಬ ಆಗದಿರುವಂತೆ ಮಾಡಲು ಕಾರ್ಯಗಳು ಜರುಗಬೇಕಾಗಿದ್ದರೂ ಈ ಸಮಿತಿಗಳು ಪದೇಪದೇ ಸೇರಬೇಕಾಗಿರುತ್ತದೆ. ಈಗ ತಿಂಗಳಿಗೊಂದಾ

(ಶ್ರೀ ಎಚ್. ಸಿದ್ದವೀರಪ್ಪ.)

ವರ್ತಿಯಂತೆ ಸೇರುತ್ತಿದ್ದಾರೆ. ಒಂದೊಂದು ಸಲ ತಿಂಗಳಿಗೆ ಎರಡು ಬಾರಿಯೂ ಸೇರುತ್ತಾರೆ. ಆದರೆ ಇಲ್ಲಿಯವರೆಗೂ ಈ ಸಮಿತಿಗಳು ಬಹಳ ಸಮರ್ಪಕ ವಾಗಿ ತಮ್ಮ ಕೆಲಸಕಾರ್ಯಗಳನ್ನು ನಡೆಸಿಕೊಂಡು ಬಂದಿರುತ್ತವೆಂದು ನಾನು ಶಿಫಾರ್ಸುಮಾಡಬೇಕಾದ್ದೇನೂ ಇಲ್ಲ. ಆ ವಿಚಾರವನ್ನು ಆ ಬಸ್ ಮಾಲೀಕರುಗಳೇ ಹೇಳುತ್ತಾರೆ.

ಒಬ್ಬ ಮಾನ್ಯಸದಸ್ಯರು.—ಆ ರೀತಿ ಅವರು ಹೇಳಿದ್ದರೆ ಅವರಿಗೆ ಮುಂದೆ ವಿರೋಧ ಉಂಟಾಗುತ್ತದೆಂಬ ನೆಪದಿಂದ ಹೇಳಬಹುದು.

ಶ್ರೀ ಎಚ್. ಸಿದ್ದವೀರಪ್ಪ.—ಅಂಥಾದ್ದೇನೂ ಇಲ್ಲ. S.T A. ನವರು ಪ್ರತಿಯೊಂದು ಸಲ ಮೀಟಿಂಗ್ ಸೇರಿದಾಗಲೂ 40 ಕೇಸುಗಳಿಗೆ ಕಡಮೆಯಿಲ್ಲದಂತೆ ತೀರ್ಮಾನ ಮಾಡಿದ್ದಾರೆ. ಅದೇ ರೀತಿ ಆ R.T.A. ಅವರೂ ಸಹ ಕೇಸುಗಳನ್ನು ಬೇಗ ತೀರ್ಮಾನಮಾಡಲಿಕ್ಕೆ ಅನುಕೂಲವಾದೀತೆಂಬ ಉದ್ದೇಶದಿಂದ ಆ ಸಂಸ್ಥೆಗಳಿಗಿದ್ದ ಸದಸ್ಯರ ಸಂಖ್ಯೆಯನ್ನೂ ಕೂಡ ಕಡಿಮೆಮಾಡಲಾಗಿದೆ. ಆದರೆ ಈಗ ಸರ್ಕಾರದ ಮುಂದೆ ಅಪೀಲಿಗಾಗಿ ಬಂದಿರತಕ್ಕಂಥ ಕೇಸುಗಳು ನನ್ನಮುಂದೆ 8-10 ಇದ್ದರೆ ಹೆಚ್ಚಾಯಿತು. ಅಂತೂ ಕೆಲಸ ಬಹಳ ಸಮರ್ಪವಾಗಿ ನಡೆಯುತ್ತಿದೆ. ಇದಕ್ಕೆ ಒದಗಿಸಬೇಕಾದ ಹಣಕಾಸಿಗೇನೂ ನಮ್ಮಲ್ಲಿ ಈಗ ಅನಾನುಕೂಲತೆ ಇರುವುದಿಲ್ಲ. ಈಗ ಏತಕ್ಕಾಗಿ ಈ ಟಿ.ಎ. ಮೊಬಲಗನ್ನು ಜಾಸ್ತಿ ಮಾಡಬೇಕಾಗಿ ಬಂದಿರುತ್ತೆಂದರೆ ಈ ಹಿಂದೆ ಖರ್ಚಾಗಿದ್ದಂಥ ಟಿ.ಎ. ಮೊಬಲಗು 15 ಸಾವಿರ ರೂಪಾಯಿಗಳಾಗಿತ್ತು. ಅದಕ್ಕಾಗಿ 17 ಸಾವಿರ ರೂಪಾಯಿಗಳನ್ನು ಪ್ರೊವೈಡ್‌ಮಾಡಲಾಗಿತ್ತು. ಆದರೆ ಈಗ ಅವರು ಪದೇಪದೇ ಸಮಿತಿ ಸೇರಬೇಕಾಗಿರುವುದರಿಂದ ಈಗ ಕೇಳಿರತಕ್ಕದ್ದಾದರೂ ಬಹಳ ಸಣ್ಣ ಮೊಬಲಗು. ಇದಕ್ಕೆ ತಾವೆಲ್ಲರೂ ತಮ್ಮ ಅನುಮತಿಯನ್ನು ಕೊಟ್ಟು ಮಂಜೂರುಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The question is:

"That a further sum not exceeding Rs. 5,000 be granted to the Government to defray the charges which will come in course of payment during the year ending 31st day of March 1956, in respect of 'Charges on account of Motor Vehicles Acts'"

The motion was adopted.

DEMAND NO. 8—IRRIGATION

No 18. Other Revenue Expenditure Financed from Ordinary Revenue.

Mr. SPEAKER.—Next Demand. Motion moved:

"That a further sum not exceeding Rs. 2,00,000 be granted to the Government to defray the charges which will come in course of payment during the year ending 31st day of March 1956, in respect of 'Other Revenue Expenditure finance from Ordinary Revenue.'"

The following cut motions are allowed: Cut motions Nos. 15, 16 and 17.

2 P.M.

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—ಸ್ವಾಮಿ, ತಾವು ಹಾಸನ ಜಿಲ್ಲೆಯಲ್ಲಿ ಕೆರೆಗಳನ್ನು ರಿಪೇರಿ ಮಾಡಬೇಕು, minor ಕೆರೆಗಳನ್ನು ರಿಪೇರಿ ಮಾಡಬೇಕು, ಅದಕ್ಕೋಸ್ಕರವಾಗಿ special ಆಗಿ 2 ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಈ supplementary demandನಲ್ಲಿ ಸೂಚನೆ ಕೊಟ್ಟಿದ್ದೀರಿ.

ಅಧ್ಯಕ್ಷರು.—ಅದು ಬೇಲೂರು ತಾಲ್ಲೂಕಿನಲ್ಲಿ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಒಂದು ಡಿಸ್ಟ್ರಿಕ್ಟ್‌ನಲ್ಲಿ ಒಂದು ತಾಲ್ಲೂಕನ್ನು ಉದಾಹರಣೆಗೆ ತೆಗೆದುಕೊಂಡು ಆ ತಾಲ್ಲೂಕಿನಲ್ಲಿ 2 ಲಕ್ಷ ರೂಪಾಯಿಗಳನ್ನು ಈ ಬಾಬಿಗೆ ಖರ್ಚುಮಾಡಬೇಕು, ಇದಕ್ಕೋಸ್ಕರ ಹೆಚ್ಚಿಗೆ ಹಣ ಕೊಡಬೇಕು ಎಂದು ಕೇಳಿದ್ದೀರಿ. ಇದು ಏನಾದರೂ ಶಾಸನಸಭೆಯ ಸದಸ್ಯರ ಪ್ರಭಾವಕ್ಕೆ ಒಳಗಾಗಿ ಅಥವಾ ಮಂತ್ರಿಗಳ ಪ್ರಭಾವಕ್ಕೆ ಒಳಗಾಗಿ ಕೇಳಿದ್ದಾರೆಯೋ ಎಂಬುದು ಗೊತ್ತಾಗಲಿಲ್ಲ. ಏತಕ್ಕೆಂದರೆ 55-56 ನೇ ಸಾಲಿನಲ್ಲಿ minor ಕೆರೆಗಳ ಉದ್ಧಾರಕ್ಕಾಗಿ Budgetನಲ್ಲಿ 18 ನೇ headನಲ್ಲಿ serial No. 2 ಅಲ್ಲಿ "Construction and Restoration of minor tanks" ಎಂಬ ಬಾಬಿಗೆ ಸುಮಾರು 19 ಲಕ್ಷ 45 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆ ದುಡ್ಡಿನಲ್ಲಿ ಇದನ್ನು ಏತಕ್ಕೋಸ್ಕರ ಒಳಪಡಿಸಿಲ್ಲ? ಒಂದು ತಾಲ್ಲೂಕಿಗೆ ಹೀಗೆ 1 ಲಕ್ಷ ರೂಪಾಯಿಗಳನ್ನು ಕೊಡುವುದಾದರೆ ಇಂತಹ ಬಾಬು ಸಂಸ್ಥಾನದಲ್ಲಿ ಎಲ್ಲಾ ಕಡೆಯೂ ಇದೆ. ಸರ್ಕಾರದವರು ಈ ರೀತಿ ಅಲಾಯಿದ ಕೊಡುವುದಾದರೆ ಬಹಳ ಸಂತೋಷ. ಸರ್ಕಾರ ಆ ತತ್ವವನ್ನು ಅನುಸರಿಸುತ್ತಾರೆ ಎಂಬ ವಿಚಾರ ತಮ್ಮ ಬಾಯಿಂದ ಬಂದರೆ ಮುಂದಕ್ಕೂ ನಾವು ಕೇಳುವುದಕ್ಕೆ ಒಂದು ದಾರಿ ಆಗುತ್ತದೆಂದು ಹೇಳುತ್ತೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಈ ಡಿಮ್ಯಾಂಡಿನ ಬಗ್ಗೆ ಮಾನ್ಯ ಶ್ರೀ ಎಸ್. ಶ್ರೀನಿವಾಸಯ್ಯಂಗಾರ್‌ರವರು ಪಟ್ಟಿರತಕ್ಕಂಥ ಅನುಮಾನಗಳನ್ನು ನಾನೂ ಪಟ್ಟಿದ್ದೇನೆ.

ಅಧ್ಯಕ್ಷರು.—ತೀರ್ಥಹಳ್ಳಿ ತಾಲ್ಲೂಕಿನ ಮೇಲೆ ಅನುಮಾನ.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಶ್ರೀ ಬೋರಣ್ಣಗೌಡರ Budget ಎಂದು ಹೇಳಬಹುದು. ಇದು ಹೇಗೆ ಬಂತು? ಈ 2 ಲಕ್ಷ ರೂಪಾಯಿಗಳಲ್ಲಿ ಎಷ್ಟು ಕೆರೆಗಳು ಬೇಲೂರು ತಾಲ್ಲೂಕಿನಲ್ಲಿ restore ಮಾಡಬೇಕೆಂದು ಮಂಜೂರು ಆಯಿತು ಮತ್ತು ಪೂರ್ತಿ ಕೆಲಸ ಮಾಡಲಾಗುತ್ತದೆಯೋ? ಯಾವುದಾದರೂ ಪ್ರತ್ಯೇಕವಾಗಿ ಇರತಕ್ಕ ಕೆರೆಗೆ ಈ ಹಣವನ್ನು ಕೊಡಬೇಕು ಎಂದು ಸರ್ಕಾರ ಯೋಚನೆ ಮಾಡಿದೆಯೋ? ಇದರ ಬಗ್ಗೆ ಈಗಾಗಲೇ 19 ಲಕ್ಷ ರೂಪಾಯಿಗಳನ್ನು

ಈ ಬಾಬಿಗೆ ಕೊಟ್ಟಿದ್ದರೂ ಇನ್ನೂ ಹೆಚ್ಚುವರಿ 2 ಲಕ್ಷ ರೂಪಾಯಿಗಳ ಬೇಡಿಕೆಯನ್ನು ಒಂದು ತಾಲ್ಲೂಕಿನ ಸಂಬಂಧದಲ್ಲಿ ಕೇಳುವುದಕ್ಕೆ ಅಷ್ಟು ಬಲಾತ್ಕಾರವಾದ ಕಾರಣಗಳು ಮತ್ತು ಒತ್ತಾಯಗಳು ಏನಿದ್ದವೆಂಬುದನ್ನು ಈ ಸಭೆಯ ಮುಂದೆ ತಿಳಿಸಬೇಕು.

ಶ್ರೀ ಡಿ. ಎಂ. ಗೋವಿಂದರಾಜು (ನೆಲಮಂಗಲ).—ಸ್ವಾಮಿ, ಈಗ ಇದರಲ್ಲಿ ಬೇಲೂರು ತಾಲ್ಲೂಕಿಗೆ ಎರಡು ಲಕ್ಷ ರೂಪಾಯಿಗಳನ್ನು minor tank restorationಗೆ ಕೇಳಿದ್ದೀರಿ. ನಾನು ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ಅನೇಕ ಕೆರೆಗಳು restoration ಆಗದೆ ಬಹಳ ದಿವಸಗಳಿಂದ ಇವೆ. ಬೇಲೂರು ಒಂದು ತಾಲ್ಲೂಕಿಗೆ extraordinary ಯಾಗಿ ಹಣವನ್ನು ಇದರ ಬಗ್ಗೆ ಕೇಳುತ್ತಿದ್ದಾರೆ. ಹಾಗೆಯೇ ನಮ್ಮ ತಾಲ್ಲೂಕಿನಲ್ಲಿ ಅನೇಕ ಕೆರೆಗಳು ದುರಸ್ತು ಆಗದೆ ನಿಂತುಹೋಗಿವೆ. ಅದಕ್ಕೆ ಗಮನ ಕೊಡಬೇಕು. ನಮ್ಮ ತಾಲ್ಲೂಕಿಗೂ 2 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಬೇಕೆಂದು ಮಾನ್ಯಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಅಧ್ಯಕ್ಷರೇ, ಮೈಸೂರು ಸಂಸ್ಥಾನದಲ್ಲಿ ಮೈನರ್ ಮತ್ತು ಮೇಜರ್ ಕೆರೆಗಳ ಜೀರ್ಣೋದ್ಧಾರ ಕೆಲಸ ನಾಲ್ಕು ವರ್ಷಗಳಿಂದಲೂ ಹೆಚ್ಚಿನ ಮಟ್ಟದಲ್ಲಿ ನಡೆದಿದೆ ಎಂದು ಸಂತೋಷದಿಂದ ಹೇಳಬೇಕಾಗಿದೆ. ಇದು ಈ ಸಭೆಯಲ್ಲಿರತಕ್ಕ ಅನೇಕ ಮಾನ್ಯ ಸದಸ್ಯರಿಗೆ ಗೊತ್ತಿರತಕ್ಕ ವಿಷಯ. ನೀರಾವರಿ ಸೌಲಭ್ಯದಿಂದ ದೇಶವು ಪ್ರಗತಿ ಹೊಂದಿ ದವಸಧಾನ್ಯಗಳ ಬೆಲೆಯು ಇಳಿತಾಯವಾಗುತ್ತಿದೆ. ಎಲ್ಲರಿಗೂ ಗೊತ್ತಿರುವಹಾಗೆ P. W. D. ಇಲಾಖೆಯಲ್ಲಿ ಹಣವು ಖರ್ಚಾಗುತ್ತಾ ಇರಲಿಲ್ಲ. ಈಗ ಅವರು ಕೇಳುವ ಸನ್ನಿವೇಶ ಬಂದಿರುವುದು ಸಂತೋಷಕರವಾದುದು ಮತ್ತು ಶ್ಲಾಘನೀಯವಾದುದು. ಇಲಾಖೆಯಲ್ಲಿ ದಕ್ಷತೆಯಿಂದ ಕೆಲಸಮಾಡಿದ್ದಾರೆ. ಅದಕ್ಕೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ವಿವಿಧ ರೂಪದಲ್ಲಿ ದೇಶಕ್ಕೆ ಅನುಕೂಲವನ್ನು ಕಲ್ಪಿಸಬೇಕು ಎಂಬ ಉದ್ದೇಶದಿಂದ ಕೆಲಸ ಮಾಡುತ್ತಿದ್ದಾರೆ. ರೈತರ ಮಕ್ಕಳಾಗಿ ಹುಟ್ಟಿ ಅವರಿಗೆ ಈ ಅವಕಾಶ ಸಿಕ್ಕಿರುವಾಗ ದೇಶಕ್ಕೆ ಉಪಕಾರ ಮಾಡುವುದಕ್ಕಿಂತ ದೊಡ್ಡದು ಬೇರೆ ಯಾವುದೂ ಇಲ್ಲ ಎಂದು ಭಾವಿಸಿ ಕೆಲಸ ಮಾಡುತ್ತಿದ್ದಾರೆ. ಅವರು ಕೇಳಿರತಕ್ಕ ಮೊಬಲಗನ್ನು ಕೊಡುವುದಕ್ಕೆ ಯಾವ ತಕರಾರು ಇಲ್ಲ. ಶ್ರೀ ಬೋರಣ್ಣ ಗೌಡರು ಕೆರೆಗಳನ್ನು ಕಟ್ಟಿಸಿಕೊಳ್ಳಲಿ. ಇನ್ನೊಬ್ಬರೂ ಕಟ್ಟಿಸಿಕೊಳ್ಳಲಿ. ಜನರ ಬೇಡಿಕೆಯನ್ನು ನಿವಾರಣೆ ಮಾಡುವುದಕ್ಕೆ ಈ ಸಭೆಯಲ್ಲಿ subjects ಚರ್ಚೆಗೆ ತರುತ್ತಾರೆ, ಮಾನ್ಯ ಸಭೆಯಲ್ಲಿರುವವರಿಗೆ ಸ್ವಂತ ಕೆರೆಗಳಿಲ್ಲ ಎಂದು ಮಾತ್ರ ಹೇಳುತ್ತೇನೆ.

Sri M. LINGANNA (Nanjangud).—Though the amount that is asked for to be voted by this House, looks very meagre being Rs. 2 lakhs, I was surprised that the Hon'ble Revenue Minister should have thought of asking for supplementary and additional grant only of this magnitude. Having had the experience of administering the Public Works Department for more than three years, every one of the Hon'ble Members of this House including the Hon'ble Minister for Revenue is aware that all the amounts granted for restoration of either minor tanks or major ones or for any other head for that matter, will not be fully utilised and there will be so many lapses and this factor is well-known to us and the Hon'ble Minister for Revenue is also aware of it.

ಶ್ರೀ ಕಡಿದಾಳ್ ಮಂಜಪ್ಪ (ರೆವೆನ್ಯೂ ಮತ್ತು ಮರಾಮತ್ತು ಶಾಖೆಯ ಮಂತ್ರಿಗಳು).—ಮೈನರ್ ಇರಿಗೇಷನ್ ಬಾಬಿನಲ್ಲಿ ಈಚೆಗೆ ಲ್ಯಾಪ್ಸ್ ಆಗುತ್ತಾ ಇಲ್ಲ.

Sri M. LINGANNA.—But granting that there would be no lapses in this particular head, there would be a lot of lapses under major heads and there will be also scope for re-appropriation. If the restoration of tanks in Belur Taluk was of urgent necessity, the Hon'ble Revenue Minister, I submit, could have resorted to a different method rather than coming out with a Demand for Supplementary Grants. It is not because I am against restoration of tanks in Belur Taluk I say this; much less am I against granting Rs. 2 lakhs to Belur Taluk. Why I say is, it would give room for remarks that it is due to bad budgeting. Therefore, if my suggestion had been carried out, probably there would have been no need for this demand. Anyway, I submit that such lacuna in asking for supplementary grants should be avoided because, as my friend Sri Srinivasa Iyengar said, this would create a precedent for asking for supplementary grants for urgent works. But this could have been avoided. I therefore submit that such supplementary grants should not be resorted to when there is a way out to meet the particular requisition.

ಶ್ರೀ ಕೆ. ಪ್ರಭಾಕರ್ (ನೆಲಮಂಗಲ—ಅನುಸೂಚಿತ ಜಾತಿಗಳು).—ಸ್ವಾಮಿ, ನಮ್ಮ ದೇಶದಲ್ಲಿ ಕೆರೆಗಳ ಜೀರ್ಣೋದ್ಧಾರ ಮತ್ತು ನೀರಾವರಿ ಕಾಮಗಾರಿಗಳಿಗೆ ಸರ್ಕಾರದವರು ಎಷ್ಟು ದುಡ್ಡನ್ನು ಖರ್ಚು ಮಾಡಿದರೂ ಕೂಡ ಸಾಲದು ಎಂದು ನನ್ನ ಮನಸ್ಸು. ಆದರೆ ಕೆರೆಗಳ ವಿಚಾರದಲ್ಲಿ ಎಷ್ಟೋ ಕೆರೆಗಳ ಜೀರ್ಣೋದ್ಧಾರವಾಗಿಲ್ಲ ಎಂಬ ವಿಚಾರ ಪದೇ ಪದೇ Assembly ಮುಂದೆ ಬರುತ್ತಲೇ ಇದೆ. ಇದನ್ನು ತಿಳಿದೂ ಕೂಡ ಹೋದಸಲ ಕೆರೆಗಳ ವಿಚಾರದಲ್ಲಿ ಹೇಗೆ Executive Engineer, Buildings Divisionರನ್ನು Special Engineer ಎಂದು ನೇಮಿಸಿದಿರೋ ಹಾಗೆಯೇ Special Engineerನ್ನು tank ಮತ್ತು irrigation ಕೆಲಸಕ್ಕಾಗಿ ಈ ಇಲಾಖೆಯಲ್ಲಿ ನೇಮಕ ಮಾಡಬೇಕು. ರೈತರು ಕೆರೆಗಳನ್ನು ಕಟ್ಟಬೇಕು, ಜೀರ್ಣೋದ್ಧಾರ ಮಾಡಬೇಕು ಎಂದರೆ, ಅಂಕಿ ಅಂಶಗಳು ಸಿಕ್ಕದೆ ಅದರ ಚರಿತ್ರೆ ಗೊತ್ತಾಗದೆ ನಿಧಾನ

(ಶ್ರೀ ಕೆ. ಪ್ರಭಾಕರ್.)

ವಾಗುತ್ತಿದೆ. ಈ ಪದ್ಧತಿ ತಪ್ಪಬೇಕು. ಈ ವಿಚಾರದಲ್ಲಿ ಒಂದು resolution ಬಂದಾಗ ಯೋಚನೆ ಮಾಡುತ್ತೇವೆಂದು ಹೇಳಿದರು. ಆದರೂ ಇನ್ನೂ ಏನೂ ಮಾಡಲಿಲ್ಲ. ನೆಲಮಂಗಲ ಮೈದಾನ ತಾಲ್ಲೂಕು ಎಂಬುದು ಸರ್ಕಾರಕ್ಕೆ ಗೊತ್ತಿದೆ. ಅಲ್ಲಿ ಮರಸರಹಳ್ಳಿಯ ಕುಮುದ್ವತಿ project ಎಂಬುದು ಒಂದೇ ದೊಡ್ಡ project. ಅದನ್ನು ಕಟ್ಟಿಸುವುದಕ್ಕೆ ಸಾಧ್ಯ. ಅದಕ್ಕೆ preliminary survey ನಡೆಸುತ್ತೇವೆಂದು ಹಿಂದೆ ತಿಳಿಸಿದ್ದರು. ಮಂತ್ರಿಗಳೂ ಕೂಡ ಆ ಪ್ರಾಂತ್ಯದಲ್ಲಿ ಪ್ರವಾಸ ಮಾಡಿದಾಗ P. W. ಮತ್ತು Water Supply ಇಲಾಖೆಯವರನ್ನು ಕರೆಯಿಸಿ ವಿಷಯವನ್ನು ತೀರ್ಮಾನ ಮಾಡೋಣ ಎಂದು ವಾಗ್ದಾನ ಕೊಟ್ಟಿದ್ದಾರೆ. ಆದರೆ ಇನ್ನೂ ಆ ಅವಕಾಶವನ್ನು ಮಾಡಿಕೊಂಡಿಲ್ಲ. ಬೇಗ ಅವರ ಅವಕಾಶವನ್ನು ಮಾಡಿಕೊಂಡು, ಮರಸರಹಳ್ಳಿ project, ಮದಗದ ಕೆರೆ ಮತ್ತು ನಿಜಗಲ್ ಕೆರೆಗಳ ಜೀರ್ಣೋದ್ಧಾರವನ್ನು ಬೇಗ ಮಾಡಿಸಿ ಕೊಡಬೇಕೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕಡಿದಾಳ್ ಮಂಜಪ್ಪ (ರೆವಿನ್ಯೂ ಮತ್ತು ಮರಾಮತ್ತು ಶಾಖೆಗಳ ಮಂತ್ರಿಗಳು).—ಮಾನ್ಯ ಸದಸ್ಯರು ಮಾಡಿರತಕ್ಕ ಭಾಷಣವನ್ನು ಬಹಳ ಸಾವಧಾನದಿಂದ ಕೇಳಿದೆ. ಬೇಲೂರು ತಾಲ್ಲೂಕಿಗೆ ಏತಕ್ಕೋಸ್ಕರ special ಆಗಿ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಸ್ವಾಭಾವಿಕವಾಗಿ ಅವರು ಪ್ರಶ್ನೆಯನ್ನು ಕೇಳುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳು ಕಳೆದವರ್ಷ ಬೇಲೂರು ತಾಲ್ಲೂಕಿನಲ್ಲಿ ಪ್ರವಾಸ ಮಾಡಿದಾಗ ಅಲ್ಲಿನ ಜನರು ತಾಲ್ಲೂಕಿನಲ್ಲಿ ಕೆರೆಗಳ ಜೀರ್ಣೋದ್ಧಾರ ಕೆಲಸ ಬಹಳ ಅಗತ್ಯವಾಗಿದೆ, ಬಹಳ ಕೆರೆಗಳು ನಾದುರಸ್ತಾಗಿವೆ, ಆದಕಾರಣ ಹೆಚ್ಚು ಹಣ ಒದಗಿಸಬೇಕೆಂದು ಕೇಳಿಕೊಂಡರು. ಅದರಮೇಲೆ ಆಗ ಎರಡು ಲಕ್ಷ ರೂಪಾಯಿಗಳನ್ನು ಸರ್ಕಾರದವರು ಮಂಜೂರು ಮಾಡಿದರು. ಆದರೆ ಆ ಹಣ ಮಂಜೂರು ಆಯಿತೇ ಹೊರತು ಖರ್ಚಾಗಲಿಲ್ಲ. Budget ತಯಾರು ಮಾಡಿದ ಹೊತ್ತಿನಲ್ಲಿ ಖರ್ಚಾಗಲಿಲ್ಲ ಎಂಬುದು ಗೊತ್ತಾಗಲಿಲ್ಲ. ಆದ್ದರಿಂದ ಪುನಃ ಬೇಲೂರು ತಾಲ್ಲೂಕಿನವರು ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿ ಕೇಳಿದ್ದರಮೇಲೆಗೆ ಅವರು ವಾಗ್ದಾನ ಮಾಡಿದ್ದ ಹಣವನ್ನು ಈಗ ಕೊಟ್ಟಿದ್ದಾರೆ.

ಶ್ರೀ ಕೆ. ಪಟ್ಟಾಭಿರಾಮನ್ (ಕೋಲಾರ).—ಜವಾಬ್ದಾರಿಯಾರದ್ದು ಎಂದು ಅರ್ಥವಾಯಿತು.

ಶ್ರೀ ಕಡಿದಾಳ್ ಮಂಜಪ್ಪ.—ಆಗಿನ ಕಾಲದಲ್ಲಿ distress time ಇತ್ತು ಎಂಬುದನ್ನು ಮರೆಯಬಾರದು. ಅದಕ್ಕೋಸ್ಕರ ಎರಡು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿತು. ಒಂದುಸಾರಿ ಸರ್ಕಾರದವರು ಮಂಜೂರು ಮಾಡಿದನಂತರ ಖರ್ಚಾಗಲಿಲ್ಲವೆಂದು ನೆಪಮಾಡಿಕೊಂಡು ಹಣ ಕೊಡುವುದಿಲ್ಲವೆಂದು ಹೇಳುವುದು ಧರ್ಮವಲ್ಲ ಎಂದು ಕಂಡುಬಂದುದರಿಂದ ಎರಡು ಲಕ್ಷ ರೂಪಾಯಿಗಳನ್ನು ಇಲ್ಲಿ ಒದಗಿಸುವುದಕ್ಕೆ ಏರ್ಪಾಡು ಮಾಡಿದೆ, ಅಷ್ಟೇ ಅಲ್ಲದೆ ಇನ್ನು ಯಾರಿಗಾದರೂ favour ಮಾಡಬೇಕು ಎಂಬ ಉದ್ದೇಶ ಇಲ್ಲವೆಂದು ಅರಿಕೆಮಾಡಿಕೊಳ್ಳುತ್ತೇನೆ.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಖರ್ಚಾಗದಿದ್ದರೆ ಈ ವರ್ಷದ ಬಡ್ಜೆಟ್ಟಿನಲ್ಲಿ ಏತಕ್ಕೆ ಸೇರಿಸಲಿಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಆಗ ಖರ್ಚಾಗದಿರುವ ವಿಚಾರ ಗೊತ್ತಾಗಲಿಲ್ಲ.

Sri K. PATTABHIRAMAN.—When the Budget Estimate was framed and placed before this House, a Demand for Rs. 19 lakhs and odd was made and voted upon by this House. If this had been already promised prior to that, it should have been included in Rs. 19 lakhs and odd. Otherwise, if it was a special grant, why should it be made now having been kept pending all these two years? There is no satisfactory explanation. What is more, the question now raised is this: Can a promise made to an individual in respect of a particular area be made a subject matter of a supplementary grant? It is not that we are against the grant of this amount to Belur Taluk. We are anxious to give a unanimous vote upon this Demand. But is it right, is it proper, is there any sense of propriety to make such a supplementary demand in respect of an individual promise made to a particular area? It is that that the Hon'ble Members have raised and I would request the Hon'ble Minister to meet it squarely and very straight.

Sri Kadidal MANJAPPA.—Sir, it was not only a promise. It was followed by a sanction of two lakhs of rupees. At that time we were under the impression that money had been spent. But subsequently we learnt, after the Budget was framed, that this amount could not have been spent and therefore the promise has to be kept up. That is the position. The amount was. . . .

Sri K. PATTABHIRAMAN.—I still remain unanswered. The question is not whether it could not be spent. But, why was it not included? Why did you not take the vote of the House for having included two lakhs and made the Demand for 21 lakhs?

Sri Kadidal MANJAPPA.—The amount was covered by the Budget grant of the previous year. When the two lakhs of rupees was sanctioned, that was covered by the Budget allotment of the previous year. The sanction was made in the previous year. In the previous year that amount could not be spent. If that had been known and it had been

brought to the notice of the Government, it ought to have been included in the current year's Budget. It was not included because it was not brought to our notice.

Sri B. NARAYANASWAMY (Mysore—South).—Sir, why was that amount not spent for the last two or three years?

Mr. SPEAKER.—Because the amount was not spent, it ought to be included this year to finish the works.

Sri B. NARAYANASWAMY.—Will Government tell us whether that amount was spent and if it has to be re-imbursed?

Mr. SPEAKER.—It is not spent.

Sri B. NARAYANASWAMY.—It was not spent because it was not intended to be spent.

Sri S. SRINIVASAIYENGAR.—"The Supplementary Statement has to be presented to the Legislature (*a*) when the original appropriation is found to be insufficient for expenditure"—they did not say that the original amount is insufficient—and "(*b*) when expenditure has to be incurred upon a New Service not originally contemplated." They cannot say that they did not contemplate this. It is a New Service. Just because the original allotment is insufficient, they want this amount. Just because the Chief Minister promised two lakhs of rupees, they want to introduce the supplementary statement. I think it is irregular and we are not accepting it.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—ಸ್ವಾಮಿ, ಈ ಎರಡು ಲಕ್ಷ ರೂಪಾಯಿಗಳನ್ನು ಕೊಡುವುದು ಅಥವಾ ಬಿಡುವುದರ ಬಗ್ಗೆ ಏನು ವಿವರಣೆ ಬರುತ್ತದೆ ಅದು ಮುಖ್ಯ. ಒಂದು ವರ್ಷದಲ್ಲಿ ಲ್ಯಾಪ್ಸ್ ಆಗುವುದನ್ನು ಅಂದರೆ ಖರ್ಚಾಗದೇ ಇರುವ ಹಣವನ್ನು ಮುಂದಿನ ವರ್ಷದ ಬಡ್ಜೆಟ್ಟಿನಲ್ಲಿ ಸೇರಿಸದೇಯಿದ್ದರೆ ಅದನ್ನು ಖರ್ಚುಮಾಡುವುದಕ್ಕೆ ಅವಕಾಶವಿಲ್ಲ. ಆದರೆ ಈಗ ಯಾವ ಒಂದು ಡಿಮ್ಯಾಂಡನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತಾರೋ ಅದರಲ್ಲಿರುವ ತತ್ವವನ್ನು ಸಾಮಾನ್ಯವಾಗಿ ಮಂತ್ರಿಗಳು ಒಪ್ಪಿದರೆ ಇದಕ್ಕೆ ಯಾರ ವಿರೋಧವೂ ಇಲ್ಲ. ಯಾವ ಯಾವ ಬಾಬಿನಲ್ಲಿ ಹಣವನ್ನೊದಗಿಸಿರುತ್ತಾರೋ ಅದರಲ್ಲಿ ಲ್ಯಾಪ್ಸ್ ಆಗತಕ್ಕ ಭಾಗವನ್ನು ಹೀಗೆ ಸೇರಿಸಿದರೆ ಸರಿ, ಆಗ ಒಪ್ಪಬಹುದು.

ಶ್ರೀ ಕಡಿದಾಳ್ ಮಂಜಪ್ಪ.—ಈ ಬಾಬಿಗಾಗಿ ಸ್ವಲ್ಪ ಮೊಬಲಗನ್ನು ಒದಗಿಸಿದ್ದೆವು. ಆ ಹಣ ಸಾಲದು, ಉದಾಹರಣೆಗೆ ಕೋಲಾರ ಜಿಲ್ಲೆಗೆ ಒದಗಿಸಿರುವ ಹಣದ ಎರಡರಷ್ಟು ಕೊಡಬೇಕಾಗಿದೆ. ಎಲ್ಲಾ ಜಿಲ್ಲೆಗಳಲ್ಲಿಯೂ ಇದೇ ಪರಿಸ್ಥಿತಿ ಇದೆ. ಎಲ್ಲಾ ಜಿಲ್ಲೆಗಳಲ್ಲಿಯೂ ಕೂಡ ಈ ಬಾಬಿನಲ್ಲಿ ಒದಗಿಸಿರುವ ಹಣ ಸಾಲದಾಗಿ ಹೆಚ್ಚು ಹಣ ಬೇಕಾಗಿದೆ. ನಾನು ಮೊದಲೇ ಅರಿಕೆ ಮಾಡಿಕೊಂಡ ಹಾಗೆ, ಹೋದ ವರ್ಷ ಬಹುಶಃ ಜನವರಿ ಅಥವಾ ಫೆಬ್ರವರಿಯಲ್ಲಿ ಎರಡು ಲಕ್ಷ ರೂಪಾಯಿ ಬೇಲೂರು ತಾಲ್ಲೂಕಿಗೆ ಮಂಜೂರಾಯಿತು. Official year end ಆಗುವವರೆಗೂ ಹಣ ಖರ್ಚಾಗದೇಯಿದ್ದುದು ನಮ್ಮ ಗಮನಕ್ಕೆ ಬರಲಿಲ್ಲ.

ಶ್ರೀ ಎಲ್. ಸಿದ್ದಪ್ಪ (ಚೆನ್ನಗಿರಿ).—ಲ್ಯಾಪ್ಸ್ ಆಯಿತೋ ಅಥವಾ ಬೇರೆ ಬಾಬಿಗೆ reappropriate ಮಾಡಿಕೊಂಡಿರೋ ?

ಶ್ರೀ ಕಡಿದಾಳ್ ಮಂಜಪ್ಪ.—ಲ್ಯಾಪ್ಸ್ ಆಯಿತು, ಇದರಲ್ಲೇನೂ ಅನುಮಾನವಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಮಂತ್ರಿಗಳು ಸತ್ಯವನ್ನೇ ಹೇಳಿದ್ದರಿಂದ ಈ ಹಣವನ್ನು ಕೊಡುವುದನ್ನು ಸಭೆ ಪುನಃ ಪರಿಶೀಲನೆ ಮಾಡಬಹುದು (ನಗು!)

Mr. SPEAKER.—The question is:

"That a further sum not exceeding Rs. 2,00,000 be granted to the Government to defray the charges which will come in course of payment during the year ending 31st day of March 1956, in respect of 'Other Revenue Expenditure financed from Ordinary Revenue'."

The motion was adopted.

DEMAND No. 11—GENERAL ADMINISTRATION.

25. GENERAL ADMINISTRATION (EXCEPT THE SUB-MAJOR HEADS B AND C).

Mr. SPEAKER.—Motion moved:

"That a further sum not exceeding Rs. 2,42,700 be granted to the Government to defray the charges which will come in course of payment during the year ending 31st day of March 1956, in respect of 'General Administration (Except sub-major heads B and C)'."

Cut motions Nos. 18, 19, 20, 21, 22, and 23 are in order.

ಶ್ರೀ ಎಂ. ಮಾದಯ್ಯ (ನಂಜನಗೂಡು—ಅನುಸೂಚಿತ ಜಾತಿಗಳು).—ಸ್ವಾಮಿ, ಸರ್ಕಾರದವರು ಗ್ರಾಮ ನೌಕರರಿಗೆ ವಿಧವಿಧವಾದ ಕೆಲಸಗಳನ್ನು ಕೊಡುತ್ತಾರೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಬಾರಾಬಲೂತಿ ಪದ್ಧತಿಗೊಳಪಟ್ಟು ಕೆಲಸ ಮಾಡತಕ್ಕ ನೌಕರರು ಮೂರು ವಿಧವಾಗಿದ್ದಾರೆ. ಪಟೇಲರು ಶ್ಯಾನುಭೋಗರು, ಇತರ ಸಣ್ಣಪುಟ್ಟ ನೌಕರರು ಇವರೆಲ್ಲರೂ ಸೇರಿ ಗ್ರಾಮಾಧಿಕಾರಿಗಳೆಂದು ವಿಲೇಜ್

(ಶ್ರೀ ಎಂ. ಮಾದಯ್ಯ.)

ಆಫೀಸರುಗಳೆಂದು ವಿಲೇಜ್ ಆಫೀಸರ್ಸ್ ಆಕ್ಟಿನಲ್ಲಿ ನಮೂದಾಗಿದೆ. ಯಾವುದೇ ಕೆಲಸವಾಗಲಿ ಈ ಮೂರು ಗುಂಪಿನ ಗ್ರಾಮಾಧಿಕಾರಿಗಳೂ ಸೇರಿ ಮಾಡದೇಯಿದ್ದರೆ ಯಾವ ಕೆಲಸವೂ ತೃಪ್ತಿಕರವಾಗಿ ಆಗುವುದಿಲ್ಲ. ಆದರೆ ಅವರಿಗೆ ಕೊಡಬೇಕಾದ ಸಂಭಾವನೆ ಅಥವಾ remuneration ವಿಚಾರದಲ್ಲಿ ಸರ್ಕಾರದವರು ಉದಾರ ನೀತಿಯನ್ನನುಸರಿಸಿಲ್ಲವೆಂದು ನಾನು ತೋರಿಸಬೇಕಾಗಿದೆ. ಅವರು ಮಾಡತಕ್ಕ ಕೆಲಸಕ್ಕೆ ಸಾಕಷ್ಟು ಸಂಭಾವನೆಯನ್ನು ಕೊಡದೆ ಒಂದು ಸಮತಾ ದೃಷ್ಟಿಯಿಂದ ನೋಡತಕ್ಕ ಪರಿಸ್ಥಿತಿಯನ್ನುಂಟು ಮಾಡಿಲ್ಲವೆಂದು ನಾನು ಹೇಳಬೇಕಾಗಿದೆ. ಈಗ ಲ್ಯಾಂಡ್ ಸೆಸ್ ತೆಗೆಯುವುದಕ್ಕೆ 20,000 ರೂಪಾಯಿಗಳ ಸಪ್ಲಿಮೆಂಟರಿ ಗ್ರಾಂಟು ಕೇಳಿದ್ದಾರೆ. ಇದನ್ನು ಹಂಚುವಾಗ ಈ ಮೂರು ಗುಂಪಿನ ಗ್ರಾಮ ನೌಕರರಿಗೂ ಹಂಚುತ್ತಿದ್ದಾರೆಯೆ ಎಂದು ನಾನು ಕೇಳುತ್ತೇನೆ. ಒಂದು ಗುಂಪಿನವರಿಗೆ ಅಥವಾ ಎರಡು ಗುಂಪಿನವರಿಗೆ ಕೊಟ್ಟು ಗ್ರಾಮ ನೌಕರರಿಗೆ ತಕ್ಕಂತೆ ಕೊಟ್ಟಿಲ್ಲ. ಇದರಿಂದ ಪಕ್ಷಪಾತ ಮಾಡಿದ ಹಾಗಾಗಿದೆಯೆಂದರೆ ತಪ್ಪಲ್ಲ. ಕಳೆದ ಇಪ್ಪತ್ತು ವರ್ಷಗಳಿಂದ ಗ್ರಾಮಾಧಿಕಾರಿಗಳಿಗೆ ಸಲ್ಲುವ ಸಂಭಾವನೆ ಐದು ಲಕ್ಷದಿಂದ ಇಪ್ಪತ್ತು ಲಕ್ಷವಾಗಿದೆ. ಆದರೆ ಬಡಗ್ರಾಮ ನೌಕರರಾದ ತೋಟಿ ತಳವಾರ ಮತ್ತು ನೀರುಗಂಟಿ ಇವರುಗಳು ಬಿಟ್ಟಿ ಕೆಲಸ ದುಡಿಯುತ್ತಿದ್ದಾರೆ. ಈ ವಿಷಯವನ್ನು ಅನೇಕಸಾರಿ ಸರ್ಕಾರದವರ ಗಮನಕ್ಕೆ ತಂದಿದರೂ ಕೂಡ, ಅವರು ಸಹಾನುಭೂತಿಯಿಂದ ಭರವಸೆ ಕೊಟ್ಟಿದ್ದರೂ ಕೂಡ, ಅವರಿಗೆ ಸಹೃದಯತೆ ಇದೆಯೆಂದು ನಾವು ಭಾವಿಸಿದ್ದರೂ ಕೂಡ, ಯಾವುದೂ ಕಾರ್ಯರೂಪಕ್ಕೆ ಬಂದಿಲ್ಲ. ಕಳೆದ ಅಧಿವೇಶನದಲ್ಲಿ ಈ ಪ್ರಶ್ನೆ ಬಂದಾಗ ಮಾನ್ಯ ಮಂತ್ರಿಗಳು ಭರವಸೆ ಕೊಟ್ಟರು. ಇವರ ವಿಚಾರದಲ್ಲಿ ಒಂದು ಸಮಿತಿಯನ್ನು ಮಾಡಿ ತಕ್ಕ ಪರಿಹಾರ ಕೊಡುವ ಏರ್ಪಾಡು ಮಾಡುವುದಾಗಿ ಹೇಳಿದರು. ಇದು ಅವರಿಗೆ ಜ್ಞಾಪಕವಿದೆಯೋ ಇಲ್ಲವೋ ಗೊತ್ತಿಲ್ಲ. ಇತರ ಇಲಾಖೆಗಳಲ್ಲಿ ಕೆಲಸ ಮಾಡತಕ್ಕ ಅಧಿಕಾರ ವರ್ಗದವರಿಗೆ ಸಂಬಳದ ಪುನರ್ವಿಮರ್ಶೆ ಮಾಡಿ, ಅನೇಕಸಾರಿ ಸಮಿತಿಗಳನ್ನು ಮಾಡಿ ಸಹಾಯ ಮಾಡುತ್ತಾರೆ. ಆದರೆ ಈ ಬಡ ಗ್ರಾಮ ನೌಕರರನ್ನು ಹೇಳುವವರೇ ಇಲ್ಲ. ಭಾರತ ಸಂವಿಧಾನಕ್ಕನುಸಾರವಾಗಿ ಕೆಲಸ ಮಾಡತಕ್ಕ ಎಲ್ಲರನ್ನೂ ಸರಿಸಮಾನವಾಗಿ ನೋಡುತ್ತೇವೆಂದು ಹೇಳಿದ್ದಾರೆ. ಆದರೂ ಈ ಬಡ ನೌಕರರಿಗೆ ಸಾಕಷ್ಟು ಸಂಭಾವನೆ ಕೊಡಲಿಲ್ಲ. . . .

Sri Kadidal MANJAPPA (Minister for Revenue and Public Works).—What is the point he is urging, Sir?

Sri M. MADIAH.—The amount asked for is certainly insufficient. It will not be equally distributed among all the village officers. ಈಗ ಹತ್ತಿಕರೆಗೆ ಮೇಲ್ಪಟ್ಟಿರುವ ರೈತರ ಲೆಕ್ಕವನ್ನು ತೆಗೆದುಕೊಳ್ಳಬೇಕಾದರೆ ಆ ರೈತರನ್ನು ಕರೆಯಬೇಕಾಗುತ್ತದೆ. ಆಗ ತೋಟಿ, ಕುಳವಾಡಿ ಇವರೇ ಕರೆದುಕೊಂಡು ಬರಬೇಕೆಂದು ಹೇಳುತ್ತಾರೆ. ಅವರೇ ಹೋಗಿ ಕರೆದುಕೊಂಡು ಬರಬೇಕು. ಅವರೆಲ್ಲಿದ್ದರೂ ಪತ್ತೆ ಮಾಡಬೇಕು. ಆದರೆ ಇದಕ್ಕೆಲ್ಲಾ ಅವರಿಗೆ ಹಣ ಕೊಡುವುದಿಲ್ಲ. ತಮ್ಮ ಪ್ರತಿನಿಧಿಗಳು ತಮ್ಮ ಕುಂದುಕೊರತೆಗಳನ್ನು ಹೇಳುವವರಿಲ್ಲದೆಯೇ ಇರುವಾಗ ಅಂಥವರನ್ನು ಸಹಾನುಭೂತಿಯಿಂದ ನೋಡುವುದು ಅಧಿಕಾರದಲ್ಲಿರುವವರ ಕರ್ತವ್ಯ. ನಾವು ಪದೇ ಪದೇ ಹೇಳಿದರೂ ಕೂಡ ಇದಕ್ಕೆ ಗಮನಕೊಟ್ಟಿಲ್ಲ. A day will come when they will have to realise the consequences.

* ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—ಸ್ವಾಮಿ, ಈ ಡಿಮ್ಯಾಂಡಿನಲ್ಲಿ ನಮೂದು ಮಾಡಿರುವ ಕೆಲವು ವಿಷಯಗಳನ್ನು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಶ್ರೀಮನ್ಮಹಾರಾಜರವರಿಗೂ ಇಂಡಿಯಾ ಸರ್ಕಾರಕ್ಕೂ ಒಂದು ಒಪ್ಪಂದವಾಯಿತು. ಅದರ ಪ್ರಕಾರ ಪ್ರತಿವರ್ಷವೂ ಸಂಗೀತ ಮತ್ತು ಕಲೆಗಳನ್ನು ಪ್ರೋತ್ಸಾಹ ಮಾಡುವುದಕ್ಕೆ ಮಹಾರಾಜರಿಗೆ ಮೈಸೂರು ಸರ್ಕಾರದಿಂದ 50 ಸಾವಿರ ರೂಪಾಯಿ ಕೊಡಬೇಕೆಂದು ತೀರ್ಮಾನವಾಯಿತು. ಅದರಂತೆ 1950-51ರ ವರೆಗೂ ನಡೆಯಿತು. ಆದರೆ ಈ ಮಂತ್ರಿಮಂಡಲ ಅಧಿಕಾರಕ್ಕೆ ಬಂದ ತಕ್ಷಣ ಅದನ್ನು ನಿಲ್ಲಿಸಿದರು. ಈ ಹಣವನ್ನು ಯಾವರೀತಿ ಖರ್ಚುಮಾಡಬೇಕೆಂಬ ಬಗ್ಗೆ ನಿಬಂಧನೆಗಳನ್ನು ಮಾಡುತ್ತೇವೆ, ಮಾಡಿದ ಮೇಲೆ ಈ ಹಣವನ್ನು ಕೊಡುತ್ತೇವೆಂದು ಹೇಳಿ ಹಣ ಕೊಡುವುದನ್ನು ನಿಲ್ಲಿಸಿದರು. ಈಗ ನಾಲ್ಕು ವರ್ಷ ಕಳೆದ ಮೇಲೆ ಏನು ಹೇಳುತ್ತಾರೆಂದರೆ, ನಿಬಂಧನೆ ಮಾಡಿದಮೇಲೆ ಕೊಡುತ್ತೇವೆಂದು ಹೇಳಿ ನಿಲ್ಲಿಸಲು ನಮಗೆ ಅಧಿಕಾರವಿರಲಿಲ್ಲ, unconditional, ಎಂದರೆ, ಷರತ್ತಿಲ್ಲದೆ ಕೊಡಬೇಕಾಗಿತ್ತು, ಆದುದರಿಂದ ನಾಲ್ಕು ವರ್ಷಕ್ಕೆ ಎರಡು ಲಕ್ಷ ರೂಪಾಯಿ ಕೊಡಬೇಕಾಗಿದೆ ಎಂದು ಕೇಳುತ್ತಾರೆ. ಜವಾಬ್ದಾರಿಯಿಂದೇನಾದರೂ ಸರ್ಕಾರದವರು ವರ್ತನೆ ಮಾಡಿದರೆ? ಒಪ್ಪಂದ ಪಾಲನೆ ಮಾಡುವುದನ್ನು ಬಿಟ್ಟು ಅದನ್ನು ಮುರಿಯುವುದು ಸರ್ಕಾರದ ಕರ್ತವ್ಯವೆ? ಸಂಗೀತ, ಕಲೆಗಳ ಪ್ರೋತ್ಸಾಹಕ್ಕಾಗಿ ವರ್ಷಕ್ಕೆ 50 ಸಾವಿರ ರೂಪಾಯಿ ಕೊಡುತ್ತಿದ್ದುದನ್ನು ಯಾವ ಕಾರಣದಿಂದ ನಿಲ್ಲಿಸಿದರು?

2-30 P.M.

ಇವೊತ್ತು ಯಾವ ಷರತ್ತೂ ಇಲ್ಲದೆ unconditional ಆಗಿ ಕೊಡಬೇಕೆಂದಿದೆ; ಅದಕ್ಕಾಗಿ ನಾಲ್ಕು ವರ್ಷದ್ದೂ ಸೇರಿಸಿ ಎರಡು ಲಕ್ಷ ರೂಪಾಯಿಗಳನ್ನು ಕೊಡಿ ಎಂದು ಕೇಳುವ ಸರ್ಕಾರದ ನೀತಿ ನನಗೆ ಅರ್ಥವಾಗುವುದಿಲ್ಲ. ಹಾಗಿದ್ದರೆ, ಹಿಂದೆ ನಿಲ್ಲಿಸಿದಾಗ unconditional ಆಗಿ ಕೊಡಬೇಕೆಂದಿದೆಯೆಂಬುದನ್ನು ನೋಡಲಿಲ್ಲವೇ? ಇದೇನು ಮನಸ್ಸಿಗೆ ಬಂದ ಹಾಗೆ ವರ್ತನೆ ಮಾಡುವುದೇ? ಒಂದು ಒಪ್ಪಂದವಿದೆಯೆಂದರೆ, ಆ ಒಪ್ಪಂದವನ್ನು ಪಾಲನೆ ಮಾಡಬೇಕು; ಅದಕ್ಕೆ ಮರ್ಯಾದೆ ಕೊಡಬೇಕಾದದ್ದು ನ್ಯಾಯ. ಹಾಗಿಲ್ಲದೆ, ಒಪ್ಪಂದವನ್ನು ತಮಗೆ ತೋರಿದಹಾಗೆ ನಿಲ್ಲಿಸುವುದು, ತಮಗೆ ಬೇಕಾದಾಗ ಒಪ್ಪಂದದಲ್ಲಿದೆ ಕೊಡಿ ಎಂದು ಹೇಳುವುದು ಸರಿಯಲ್ಲ. ಈ ದೃಷ್ಟಿಯಿಂದ ತಾವೀಗ ನಮ್ಮ ಮುಂದಿಟ್ಟಿರುವ ಬೇಡಿಕೆ ಸರಿಯಲ್ಲ.

ಎರಡನೆಯದಾಗಿ, ಒಂದುವೇಳೆ ಇವೊತ್ತು ನ್ಯಾಯವಾಗಿ ಕೊಡಬೇಕೆಂದು ಹೇಳಿ ಕೊಡುವುದಾದರೆ, ಹಿಂದಿನ ನಾಲ್ಕು ವರ್ಷಗಳ ಖರ್ಚನ್ನೂ ಹೇಗೆ ನಿರ್ವಹಿಸುವುದು? ಅದನ್ನು ಹೇಗೆ ಖರ್ಚು ಮಾಡುತ್ತೀರಿ? ಏನಾದರೂ, ಅವರು ಹಿಂದೆ ನಾಲ್ಕು ವರ್ಷಗಳಿಂದ ಕೈಯಿಂದ ಕೊಟ್ಟಿದ್ದನ್ನು recoup ಮಾಡುವುದಕ್ಕೆಂದೇನಾದರೂ ಕೊಡುತ್ತೀರಾ?

ಇನ್ನೊಂದು ವಿಷಯ ಆಶ್ಚರ್ಯವನ್ನುಂಟುಮಾಡುತ್ತಿದೆ. ಜನವರಿ 1950ನೆಯ ಇಸವಿಯಿಂದ ಮಾರ್ಚಿ

51ರ ತನಕ—ಈ 15 ತಿಂಗಳ ಕಾಲ ಶ್ರೀಮನ್ಮಹಾರಾಜರವರಿಗೆ ಕೊಡಬೇಕಾಗಿದ್ದ ದುಡ್ಡನ್ನು ಅವರೇಕೆ ತೆಗೆದುಕೊಳ್ಳಲಿಲ್ಲ? ಏನೋ ವ್ಯಾಜ್ಯ ಬಂತು; ಆ ವ್ಯಾಜ್ಯದಿಂದ ಶ್ರೀಮನ್ಮಹಾರಾಜರವರು ಆ ಹಣವನ್ನು ಡ್ರಾ ಮಾಡಲಿಲ್ಲವೆಂದು ಹೇಳಿದ್ದಾರೆ. ಮತ್ತು ಶ್ರೀಮನ್ಮಹಾರಾಜರವರು ಉಪಯೋಗಿಸಿದ ಟೆಲಿಫೋನುಗಳಿಗೆ, ಅವರು ಪ್ರಯಾಣ ಮಾಡಿದ ಸ್ಪೆಷಲ್ ಸೆಲೂನಿಗೆ ಏನು ಖರ್ಚು ಕೊಡಬೇಕೋ ಅದನ್ನೆಲ್ಲಾ ಸರ್ಕಾರದವರೇ ವಹಿಸಬೇಕೆಂದು ಕೇಳುತ್ತಿದ್ದರು, ಆ ವಿಷಯದಲ್ಲಿ ಚರ್ಚೆಯಿತ್ತು, ಆ ಚರ್ಚೆ 1954ರ ಅಂತ್ಯದಲ್ಲಿ ತೀರ್ಮಾನವಾಯಿತು, ಕೊನೆಗೆ ಸರ್ಕಾರದವರೇ ಕೊಡಬೇಕೆಂದು ಹೇಳಿ ಸರ್ಕಾರಿ ಹುಕುಂ ಆಗಿ ಅದು ಅಕ್ಟೋಬರ್ 1954ನೆಯ ಇಸವಿ ಸಪ್ಲಿಮೆಂಟರಿ ಡಿಮ್ಯಾಂಡ್ ಮುಖಾಂತರ ಅರಮನೆಗೆ ಸಲ್ಲಬೇಕಾದ ದುಡ್ಡೆಂದು ಹೇಳಿ ಮಂಜೂರು ಮಾಡಿದೆವು ಎಂದು ಹೇಳಿದ್ದಾರೆ. ಹಾಗೆ ಸಪ್ಲಿಮೆಂಟರಿ ಡಿಮ್ಯಾಂಡ್ ಪ್ರಕಾರ ಶ್ರೀಮನ್ಮಹಾರಾಜರವರಿಗೆ ಮಂಜೂರು ಮಾಡಿದ್ದರೆ ಇದುವರೆಗೆ ಅಂದರೆ 1954-55ನೆಯ ಇಸವಿಯ ಆಖೈರೊಳಗೆ ಅರಮನೆಯವರೇಕೆ ಡ್ರಾ ಮಾಡಲಿಲ್ಲ? ಹಾಗಾದರೆ ಈಗಲೂ ತಾವು ಸಪ್ಲಿಮೆಂಟರಿ ಡಿಮ್ಯಾಂಡನ್ನು ಕೇಳಿದ್ದೀರೆಂದು ಹೇಳಿ ನಾವೀಗ ಕೊಟ್ಟರೂ ಈಗಲೂ ಅವರು ಡ್ರಾ ಮಾಡುತ್ತಾರೆಂಬ ಭರವಸೆ ಯೇನಿದೆ? ನಿಮಗೂ ಅವರಿಗೂ ವ್ಯಾಜ್ಯವಿದೆ.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಶಾಖೆಯ ಮಂತ್ರಿಗಳು).—ಬರವಣಿಗೆಯಲ್ಲಿ ವ್ಯಾಜ್ಯವಿದೆ ಅಷ್ಟೆ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—Dispute ಇದೆಯೆಂದು ನಾವು ಓದಿದ್ದೇವೆ; ಅದರ ಮೇಲೆ ನಾವು ಹೇಳುತ್ತಿದ್ದೇವೆ.

ಆ ಮೇಲೆ ಇನ್ನೊಂದು ವಿಷಯ ಬಹಳ ಆಶ್ಚರ್ಯವಾಗಿ ಕಾಣುತ್ತದೆ. ರೆವಿನ್ಯೂ ಬೋರ್ಡನ್ನು ಸ್ಥಾಪನೆ ಮಾಡಿದ ಕಾಲದಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ಕೊಟ್ಟ ಧ್ಯೇಯೋದ್ದೇಶಗಳ ವಿವರಣೆಯಲ್ಲಿ ರೆವಿನ್ಯೂ ಬೋರ್ಡನ್ನು ರಚನೆ ಮಾಡುವುದರಿಂದ ಅದಕ್ಕಾಗಿ ಸಂಸ್ಥಾನಕ್ಕೆ ಯಾವ ವಿಧವಾದ ಖರ್ಚೂ ಆಗುವುದಿಲ್ಲ ಎಂದು ಹೇಳಿದ್ದರು. ರೆವಿನ್ಯೂ ಕಮಿಷನರ ಆಫೀಸಿನಲ್ಲಿರತಕ್ಕ ಸಿಬ್ಬಂದಿಯನ್ನೇ ಉಪಯೋಗಿಸಿಕೊಳ್ಳುತ್ತೇವೆಂದು ಹೇಳಿದ್ದರು. ಆದರೆ ಈಗ ಏನು ಹೇಳುತ್ತಿದ್ದಾರೆ ಎಂದರೆ, "ಬಡ್ಜೆಟ್ಟನ್ನು ಮಾಡಿದ ಕಾಲದಲ್ಲಿ ರೆವಿನ್ಯೂ ಬೋರ್ಡನ್ನ ಇನ್ನೂ ಸ್ಥಾಪನೆ ಮಾಡಿರಲಿಲ್ಲ, ಅದರಿಂದಾಗಿ ಏನು ಖರ್ಚಾಗುತ್ತದೆಂಬುದು ಗೊತ್ತಿರಲಿಲ್ಲ, ಈ ಕಾರಣ ಈಗ ಸಪ್ಲಿಮೆಂಟರಿ ಡಿಮ್ಯಾಂಡನ್ನು ತಂದಿದ್ದೇವೆ" ಎಂದು ಹೇಳುತ್ತಿದ್ದಾರಲ್ಲಾ, ಇದರಲ್ಲೇನು ಅರ್ಥವಿದೆ? ಹಿಂದೆ ಡಿಸ್ಟ್ರಿಕ್ಟ್ ಜಡ್ಜರನ್ನು ಹೊಸದಾಗಿ ನೇಮಕ ಮಾಡಿಕೊಳ್ಳಬೇಕೆಂದೇ ಇರಲಿಲ್ಲ. ಡಿಸ್ಟ್ರಿಕ್ಟ್ ಜಡ್ಜ್ ದರ್ಜೆಯವರೊಬ್ಬರು ಮಾತ್ರ ಅಲ್ಲಿರಬೇಕೆಂದಿತ್ತು, ಅಷ್ಟೆ. ಅಂಥಾದ್ದರಲ್ಲಿ ಈಗ ವರ್ಷೇ ವರ್ಷೇ 7,700 ರೂಪಾಯಿಗಳನ್ನು ಹೆಚ್ಚು ಖರ್ಚುಮಾಡಬೇಕಾಗಿಬಂದಿದೆ ರೆವಿನ್ಯೂ ಬೋರ್ಡನ್ನು ರಚಿಸಿದ್ದರಿಂದ ಎಂದು ಹೇಳುತ್ತಾರಲ್ಲಾ, ಇದನ್ನು ನಾವು ಖಂಡಿತ ಒಪ್ಪುವುದಕ್ಕಾಗುವುದಿಲ್ಲ. ಈಗಾಗಲೇ $8\frac{1}{2}$ ಕೋಟಿ ರೂಪಾಯಿಗಳು ಶಿಬ್ಬಂದಿ ಖರ್ಚು ಮಾಡುತ್ತಿರುವಲ್ಲಿ, ಇನ್ನೂ ಹೀಗೆಯೇ ಪ್ರತಿಯೊಂದು ಹೆಜ್ಜೆಗೂ ಸಿಬ್ಬಂದಿ ಹೆಚ್ಚಿಸಿಕೊಂಡು ಹೋದರೆ ನೀವು ವಸೂಲು ಮಾಡುವ ಕಂದಾಯವೆಲ್ಲಾ ಬರೀ ಸಂಬಳಕ್ಕೇ ಆಗಿ ನಾವು ಪೂರೈಸುವುದು ತಾನೆ ಹೇಗೆ? ಇದಕ್ಕೆ ಕಾರಣವೇನೆಂಬುದನ್ನು ಸರ್ಕಾರದವರು ತಿಳಿಯಪಡಿಸಬೇಕು.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ಅರಮನೆಗೆ ಸಂಬಂಧಪಟ್ಟ ಹಾಗೆ ಹಣದ ವಿಷಯದಲ್ಲಿ ಎದ್ದಿರತಕ್ಕ ವಿವಾದದ ಬಗ್ಗೆ ಶ್ರೀಮಾನ್ ಶ್ರೀನಿವಾಸಯ್ಯಂಗಾರ್‌ರವರು ಈಗಾಗಲೇ ಪ್ರಶ್ನೆ ಮಾಡಿದ್ದಾರೆ. ನಾನು ಈ ವಿಷಯದಲ್ಲಿ ಒಂದು ಅಂಶವನ್ನು ಸ್ಪಷ್ಟಪಡಿಸಬೇಕೆಂದಿದ್ದೇನೆ. ಮೈಸೂರು ಸಂಸ್ಥಾನದ ರಾಜಪ್ರಮುಖರಿಗೂ ಮೈಸೂರು ಸಂಸ್ಥಾನದ ಸರ್ಕಾರದವರಿಗೂ ಮಧ್ಯೆ ಕೇಂದ್ರ ಸರ್ಕಾರದವರಿಗೂ ಮತ್ತು ಮೈಸೂರಿನ ಶ್ರೀಮನ್ಮಹಾರಾಜರಿಗೂ ಒಂದು ಅಗ್ರಿಮೆಂಟ್ ಆಗಿದೆ. ಹಣ ಕಾಸಿನ ವಿಷಯದಲ್ಲಿ, ಅವರ ಅಧಿಕಾರ ವ್ಯಾಪ್ತಿಗಳ ವಿಷಯದಲ್ಲಿ ಮತ್ತು ಅವರಿಗೆ ಸಲ್ಲಬೇಕಾದ ಎಲ್ಲಾ ಭತ್ಯ ವಗೈರೆಗಳ ವಿಷಯದಲ್ಲಿ ಸಮಗ್ರವಾಗಿ ಆದ ಒಂದು ಒಪ್ಪಂದ ಇದು. ಈ ಒಪ್ಪಂದವನ್ನು ಯಾವುದೇ ರೀತಿಯಲ್ಲಿ ಬದಲಾಯಿಸುವುದಕ್ಕೆ ಅಧಿಕಾರವನ್ನು ಹೊಂದಿಲ್ಲ. ಹೀಗಿರುವಾಗ ಈ ವಿಷಯದಲ್ಲಿ ಇದುವರೆಗೂ ಮೈಸೂರು ಸರ್ಕಾರದ ಮಂತ್ರಿಗಳು ತಳೆದಿರತಕ್ಕ ಮನೋಭಾವದ ದೆಶೆಯಿಂದ ನಡೆದಿರತಕ್ಕ ವಿವಾದಗಳನ್ನು ನೋಡಿದರೆ ಆ ಅಗ್ರಿಮೆಂಟನ್ನು ಸರ್ಕಾರದವರು ಪೂರ್ತಿಯಾಗಿ ನಡೆಸಿಕೊಂಡು ಹೋಗಿಲ್ಲವೆಂದು ಕಂಡುಬರುತ್ತಿದೆ. ಏಕೆಂದರೆ ಸರ್ಕಾರಕ್ಕೂ ಮತ್ತು ರಾಜಪ್ರಮುಖರಿಗೂ ಇರತಕ್ಕ ಮನೋಭಾವದಲ್ಲಿ ಹಣ ಕಾಸಿಗೆ ಮತ್ತು ಅಧಿಕಾರಗಳಿಗೆ ಸಂಬಂಧಪಟ್ಟಹಾಗೆ ಭಾವನಾತ್ಮಕವಾದ (Sentimental) ಸಂಬಂಧಗಳು ಇರುವುದಕ್ಕೆ ಸಾಧ್ಯವಿಲ್ಲ. ಹಿಂದೆ ಅವರು ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರಾಗಿದ್ದಾಗ, ಅವರ ಕೃಪಾಶ್ರಯದಲ್ಲಿ ಸರ್ಕಾರ ನಡೆದುಕೊಂಡು ಹೋಗುತ್ತಿದ್ದಾಗ, ಪ್ರಜೆಗಳೆಲ್ಲರೂ ಅವರ ಸತ್ಪ್ರಜೆಗಳಾಗಿದ್ದಾಗ ನೋಡತಕ್ಕ ರೀತಿಯೇ ಬೇರೆ, ಈಗಿರತಕ್ಕ ರೀತಿಯೇ ಬೇರೆ. ಅವರು ಇವೊತ್ತು ಇಲ್ಲಿ ರಾಜಪ್ರಮುಖರಾಗಿರಬಹುದು, ನಾಳೆ ಮತ್ತೊಂದು ಸಂಸ್ಥಾನದಲ್ಲಿ ರಾಜಪ್ರಮುಖರಾಗಬಹುದು. ಕ್ರಮಶಃ ಆ ಸ್ಥಾನವೇ ಹೋಗಬಹುದು. ಆದ್ದರಿಂದ ಅವರಿಗೂ ಸರ್ಕಾರಕ್ಕೂ ಇರುವ ಸಂಬಂಧ sentimental ಅಲ್ಲವೆಂಬದನ್ನು ತಿಳಿಯಬೇಕು.

ಮೇಲಾಗಿ, ಈ 50 ಸಾವಿರ ರೂಪಾಯಿಗಳನ್ನು ರಾಜಪ್ರಮುಖರ ಅಧೀನದಲ್ಲಿ ಕೊಟ್ಟರೂ ಕೂಡ ಅದನ್ನು ಸರ್ಕಾರದವರೇ ತಮಗೆ ತಿಳಿದ ರೀತಿಯಲ್ಲಿ ಖರ್ಚು ಮಾಡುತ್ತಾರೆ ಮತ್ತು ಇತ್ತೀಚೆಗೆ ಬಿರುದುಗಳನ್ನು ಕೊಡುವುದಕ್ಕೆ ಕೇಂದ್ರದಿಂದ ಅನುಮತಿ ಪಡೆದಿದ್ದಾರೆ; ಅದರಂತೆ ಮುಂದಿನ ವರ್ಷದ ದರ್ಬಾರಿನಲ್ಲಿ ಅಥವಾ ಅದಕ್ಕಾಗಿಯೇ ಏರ್ಪಡಿಸುವ ಒಂದು ವಿಶೇಷ ಸಮಾರಂಭದಲ್ಲಿ ಬಿರುದು ಕೊಡುತ್ತಾರೆ ಎಂದು ನನಗೆ ತಿಳಿದುಬಂತು.

ಶ್ರೀ ಎಚ್. ಸಿದ್ದವೀರಪ್ಪ.—ಬಿರುದುಗಳನ್ನಾವುದನ್ನೂ ಕೊಡಬೇಕೆಂದು ತೀರ್ಮಾನ ಮಾಡಿಲ್ಲ. ಪಾರಿತೋಷಕಗಳಿಗೂ ಬಿರುದುಗಳಿಗೂ ವ್ಯತ್ಯಾಸವಿದೆ. Prizes, Medals, Suitable Recognition ಎನ್ನುವುದಕ್ಕೂ ಬಿರುದು ಎನ್ನುವುದಕ್ಕೂ ವ್ಯತ್ಯಾಸವಿದೆ.

ಶ್ರೀ ಎಸ್. ಗೋಪಾಲಗೌಡ.—ಭಾರತದ ಪ್ರೆಸಿಡೆಂಟರು ಕೊಡುವ ಹಾಗೆ ಭಾರತರತ್ನ, ಪದ್ಮ ವಿಭೂಷಣ ಇಂಥವುಗಳನ್ನು ಸಮಾರಂಭಗಳಲ್ಲಿ ಕೊಡುತ್ತಾರೆಂದು ನಾನು ತಿಳಿದಿದ್ದೆ. ಅದಿಲ್ಲದೆ, ಎಗ್ಸಿಬಿಷನ್‌ಗಳಲ್ಲಿ ಕೊಟ್ಟಹಾಗೆ ಮೆಡಲ್‌ಗಳನ್ನು ಕೊಟ್ಟರೆ ನಮ್ಮದೇನೂ ಅಭ್ಯಂತರವಿಲ್ಲ. ಹಾಗಿಲ್ಲದೆ, ಹಿಂದಿನಂತೆ ಬಿರುದುಗಳನ್ನು ಕೊಡುವುದಕ್ಕೆ ಪ್ರಯತ್ನಿಸಿದರೆ ಈಗಿನ ಪ್ರಜಾ

(ಶ್ರೀ ಎಸ್. ಗೋಪಾಲಗೌಡ.)
ಪ್ರಭುತ್ವ ಯುಗದಲ್ಲಿ ಅವು ದುರುಪಯೋಗವಾಗಿ ಸಾಮಾನ್ಯ ಪ್ರಜೆಗಳಿಗೆ ತೊಂದರೆಯಾಗುವುದಕ್ಕೆ ಅವಕಾಶವಾಗುತ್ತದೆ. ಅಲ್ಲದೆ, ತಾವೇ ಒಪ್ಪಿಕೊಂಡಿರುವ ಸೋಷಿಯಲಿಸ್ಟ್ ಪ್ಯಾಟರ್ನ್ ಸಮಾಜದಲ್ಲಿ ಈ ರೀತಿ ಕೆಲವು ಕಾರಣಗಳಿಗಾಗಿ, ಕೆಲವು ಪ್ರಜೆಗಳನ್ನು ಮಾತ್ರ ಸತ್ಕರಿಸುವುದು ಸರಿಯಲ್ಲ.

Mr. SPEAKER.—If it is for encouragement ?

ಶ್ರೀ ಎಸ್. ಗೋಪಾಲಗೌಡ.—ಅದನ್ನು ಮಾಡುವ ರೀತಿಯೇ ಬೇರೆ. ರಷ್ಯಾ, ಚೈನಾಗಳಲ್ಲೂ ಅಂಥವಕ್ಕೆ ಕೊಡುತ್ತಾರೆ, ನಿಜ. ಆದರೆ ಇಲ್ಲಿ ಈ ಉಪಾಯದ ಹಿನ್ನೆಲೆಯಲ್ಲಿ ಏನೋ ಭಯವಿದೆಯೆಂದು ಕಾಣುತ್ತದೆ. ಆದ್ದರಿಂದ ಅಂಥ ಉಪಾಯಗಳನ್ನು ಪುರಸ್ಕರಿಸುವುದಕ್ಕೆ ನಾವು ಸಿದ್ಧರಾಗಿಲ್ಲ, ಅದಕ್ಕೆ ತಲೆಬಾಗುವುದಿಲ್ಲ. ಆದಕಾರಣ, ಈ ವಿಚಾರದಲ್ಲಿ ಸರ್ಕಾರದವರು ಸ್ಪಷ್ಟವಾದ ಒಂದು ಕಲ್ಪನೆಯನ್ನು ಹೊಂದುವುದು ಅವಶ್ಯಕ.

ಇನ್ನೂ ಹಾಗೆಯೇ ಅನೇಕವಿವೆ. ಅಲ್ಲದ್ದೆ ಎಲೆಕ್ಟ್ರಿಕಲ್ ಕೆಲಸಗಾರರ ಪ್ರಶ್ನೆ. ಆ ಬಾಬನ್ನು ನಮ್ಮ ಇಲಾಖೆಗೆ ಸೇರಿಸಿಕೊಂಡಮೇಲೆ ಅಲ್ಲಿದ್ದವರ ಗತಿ ಏನು ? ಅವರು ಎಲ್ಲಿಗೆ ಹೋಗಬೇಕು? ಇಷ್ಟು ವರ್ಷಗಳಾದರೂ ಆ ಬಗ್ಗೆ ತೀರ್ಮಾನ ತೆಗೆದುಕೊಂಡಿಲ್ಲ. ಹಾಗೆಯೇ ಅಲ್ಲಿಗೆ ಸಂಬಂಧಪಟ್ಟ ಸೈಟುಗಳು ಮತ್ತು ಬಿಲ್ಡಿಂಗ್‌ಗಳ ವಿಚಾರದಲ್ಲೂ ನಿರ್ದಿಷ್ಟ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಎಚ್. ಸಿದ್ಧವೀರಪ್ಪ.—ಈಗ ಎಲ್ಲಾ ಸ್ಪಷ್ಟವಾಗಿದೆ, ಯಾವುದೂ ಅಸ್ಪಷ್ಟವಾಗಿಲ್ಲ, ಅಗ್ರಿಮೆಂಟಿದೆ ; ಅದರಲ್ಲಿ ಎಲ್ಲವೂ ಸ್ಪಷ್ಟವಾಗಿದೆ.

ಶ್ರೀ ಟಿ. ಮರಿಯಪ್ಪ (ಮೈಸೂರು-ಉತ್ತರ).—ಹಾಗಾದರೆ ಏಕೆ 1955ನೆಯ ಇಸವಿಯವರೆಗೂ ಕೊಡಲಿಲ್ಲ?

ಶ್ರೀ ಎಚ್. ಸಿದ್ಧವೀರಪ್ಪ.—ಆಗಲೇ ಹೇಳಿದ್ದೇನೆ.

ಶ್ರೀ ಎಸ್. ಗೋಪಾಲಗೌಡ.—ನಾನು ಪ್ರಾರಂಭದಲ್ಲೇ ಹೇಳಿದ್ದೇನೆ. ಒಂದು ಅಗ್ರಿಮೆಂಟ್ ಇದ್ದಮೇಲೆ ಅದರಂತೆ ನಡೆದುಕೊಳ್ಳಬೇಕಾಗಿದೆ. ಈಗ ಕೆಲವು ವಿಷಯಗಳು ಅಸ್ಪಷ್ಟವಾಗಿರುವಂತೆ ತೋರುತ್ತದೆ. ಏಕೆಂದರೆ, ನಮ್ಮ ಮಹಾರಾಜರು ಇಲ್ಲೇ ಇದ್ದವರು. ಆದ್ದರಿಂದ ಇಲ್ಲಿ ಮೂಲಭೂತವಾಗಿ ಅನೇಕ ಸಂಪ್ರದಾಯಗಳು ನಡೆದುಕೊಂಡು ಬಂದಿವೆ. ಆ ಬಗ್ಗೆ ಕಹಿ ವಾತಾವರಣ ಉಂಟಾಗುವುದಕ್ಕೆ ಮುಂಚೆಯೇ ಸರ್ಕಾರದವರು financial ಮತ್ತು political ವಿಚಾರಗಳಲ್ಲಿ ಸ್ಪಷ್ಟವಾದ ಅಭಿಪ್ರಾಯವನ್ನು ಹೊಂದುವುದು ಅತ್ಯಗತ್ಯವೆಂದು ಹೇಳುತ್ತೇನೆ.

ಎರಡನೆಯದಾಗಿ, lands ಮತ್ತು buildings ಬಗ್ಗೆ ಸರ್ವೆ ಏನಾದರೂ ಮಾಡಿದ್ದಾರೆಯೇ? ಇಲ್ಲದಿದ್ದರೆ ಅದನ್ನು ತ್ವರಿತಗೊಳಿಸಬೇಕು ಮತ್ತು ಸಾಧ್ಯವಾದಷ್ಟು ಮಟ್ಟಿಗೆ ನಿಖರವಾದ ಅಂಕಿ ಅಂಶಗಳನ್ನು ಸಂಗ್ರಹಿಸುವುದಕ್ಕೆ ಹೆಚ್ಚಿನ ಶ್ರಮವಹಿಸಬೇಕೆಂದು ನಾನು ಸರ್ಕಾರದವರಿಗೆ ಕೇಳಿಕೊಳ್ಳುತ್ತೇನೆ.

*ಶ್ರೀ ಟಿ. ಹನುಮಯ್ಯ (ಹಿರಿಯೂರು-ಅನುಸೂಚಿತ ಜಾತಿಗಳು).—ಸ್ವಾಮಿ, ಈಗ ಈ ಮೈಸೂರು ಮೋಟಾರ್ ವೆಹಿಕಲ್ಸ್ ಆಕ್ಟಿನ ಬಗ್ಗೆ ಮಂಡಿಸಿರತಕ್ಕ ಖೋತಾ ನಿರ್ಣಯವನ್ನು ಅನುಮೋದಿಸುತ್ತ ಕೆಲವು ವಿಷಯಗಳನ್ನು ನಾನು ಸರ್ಕಾರದವರ ಅವಗಾಹನೆಗಾಗಿ ತರಲಿಚ್ಛಿಸುತ್ತೇನೆ. ಇದು ಸಾಮಾನ್ಯವಾಗಿ ವಂಶಪಾರಂಪರ್ಯವಾಗಿ ಹೀಗೆಯೇ ನಡೆದುಕೊಂಡು ಬಂದಿರತಕ್ಕಂಥ ಕೆಲಸವಾಗಿದೆ. ಕಳೆದ ಅಧಿವೇಶನದಲ್ಲಿ ಕೂಡ ನಮ್ಮ ಮಾನ್ಯ ರೆವಿನ್ಯೂ ಮಂತ್ರಿಗಳು ಈ ವಿಷಯ ಒಂದಲ್ಲ ಒಂದು ರೂಪದಲ್ಲಿ ಪ್ರತಿಯೊಂದು ಅಧಿವೇಶನದಲ್ಲೂ ಚರ್ಚೆಗೆ ಬರುತ್ತಿದೆಯೆಂದು ಅವರೇ ಅಪ್ಪಣೆ ಕೊಡಿಸಿದ್ದಾರೆ. ಅದೇ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ಒಂದು ಹೆಜ್ಜೆ ಮುಂದೆ ಹೋಗಿ ಈ ವಿಚಾರವನ್ನು ಕೂಲಂಕಷವಾಗಿ ವಿಮರ್ಶೆ ಮಾಡಿ ಇದನ್ನು ಇತ್ಯರ್ಥಪಡಿಸುವುದಕ್ಕಾಗಿ ಒಂದು ಸಮಿತಿಯನ್ನೇ ನೇಮಕ ಮಾಡುವುದಾಗಿ ಭರವಸೆಯನ್ನು ಸಹ ಕೊಟ್ಟಿದ್ದರು. ಆದರೆ ಈ ದಿವಸದವರೆಗೂ ಕೂಡ ಅಂಥ ಏರ್ಪಾಡುಗಳೊಂದನ್ನೂ ಮಾಡದೆ ಈ ವಿಷಯವನ್ನು ಇದ್ದಂತೆಯೇ ಬಿಟ್ಟುಕೊಂಡು ಬಂದಿರುತ್ತಾರೆಂಬ ಅಂಶವನ್ನು ನಾನು ತಿಳಿಸಲು ಬಹಳ ವಿಷಾದಪಡುತ್ತೇನೆ. ಸರ್ಕಾರಿ ಕೆಲಸ ಕಾರ್ಯಗಳಿಗೆ ಮತ್ತು ಪ್ರಾಮುಖ್ಯವಾಗಿ ಕಂದಾಯದ ಹಣದ ವಸೂಲಿಗೆ ಗ್ರಾಮಾಂತರ ಪ್ರದೇಶಗಳಲ್ಲಿ ಅಮಲ್ದಾರರು ಶೇಕದಾರರು ಮೊದಲುಗೊಂಡು ಡೆಪ್ಯುಟಿ ಕಮಿಷನರ್ ವರೆಗೂ ಈ ಗ್ರಾಮ ನೌಕರರುಗಳ ಸೇವೆಯನ್ನು ಉಚಿತ ರೀತಿಯಲ್ಲೇ ಪಡೆದುಕೊಂಡು ಬರುತ್ತಿದ್ದಾರೆ. ಮನೆಗಳಿಗೆ ಹೇಗೆ ಕಂಬಗಳು ಆಧಾರ ಪ್ರಾಯವಾಗಿರುತ್ತವೆಯೋ ಹಾಗೆ ಸರ್ಕಾರದ ಆಡಳಿತ ಗ್ರಾಮಾಂತರ ಪ್ರದೇಶಗಳಲ್ಲಿ ಸುಲಲಿತವಾಗಿ ನಡೆದುಕೊಂಡು ಹೋಗಬೇಕಾಗಿದ್ದರೆ ಇವರ ಸಹಾಯ ಪೂರ್ತಿಯಾಗಿ ಬೇಕಾಗಿರುತ್ತದೆ. ಹೀಗೆಲ್ಲಾ ತಾವು ಈ ತೋಟಿ ತಳಾರಿಗಳಿಂದ ಸೇವೆಯನ್ನು ಒಂದಲ್ಲ ಒಂದು ರೂಪದಲ್ಲಿ ಪಡೆದುಕೊಳ್ಳುತ್ತಿದ್ದಾಗ್ಯೂ ಅವರಿಗೆ ಸಂದಾಯವಾಗಬೇಕಾಗಿರತಕ್ಕ ಮಾನ್ಯ ಮಿರಾಸೆಗಳೊಂದನ್ನೂ ಕೊಡದೆ ಅವರಿಂದ ಉಚಿತ ಸೇವೆಯನ್ನು ಪಡೆಯುತ್ತಿದ್ದೀರಿ. ಹೀಗೆ ತಾವು ಮಾಡುತ್ತಿರುವುದು ನಮ್ಮ ರಾಜ್ಯಾಂಗಕ್ಕೆ ವಿರುದ್ಧವಾಗಿದೆ. ಈ ಬಡ ನೌಕರರಾದರೋ ತೀರಾ ಕಡು ಬಡವರು--ಹೊಟ್ಟೆಗೂ ಬಟ್ಟೆಗೂ ಸಹ ಗತಿಯಿಲ್ಲದವರಾಗಿದ್ದಾರೆ. ಇವರಿಂದ ಸರ್ಕಾರ ಸೇವೆ ಹೊಂದಲೇಬೇಕೆಂದಿದ್ದರೆ ಇವರಿಗೆಲ್ಲಾ ತಾವು ಉಚಿತ ರೀತಿಯಲ್ಲಿ ಸಂಬಳ ಸಾರಿಗೆಗಳನ್ನು ಕೊಡಲೇ ಬೇಕು. ಹಾಗೆ ಅವರಿಗೆ ತಾವು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಕಂಡು ಬಂದರೆ ಅವರಿಂದ ಯಾವ ಕೆಲಸಕಾರ್ಯಗಳನ್ನೂ ಉಚಿತವಾಗಿ ತೆಗೆದುಕೊಳ್ಳ ಬಾರದೆಂದು ತಾವು ಒಂದು ಹುಕುಂ ಅನ್ನಾದರೂ ಹೊರಡಿಸಬೇಕು.

ಒಬ್ಬ ಸದಸ್ಯರು.—ಇವರಿಗೆಲ್ಲಾ ಇನಾಂತಿಗಳನ್ನು ಕೊಟ್ಟಿಲ್ಲವೇ?

ಶ್ರೀ ಟಿ. ಹನುಮಯ್ಯ.—ಹೌದು. ದೊಡ್ಡದೊಡ್ಡ ಪಟೇಲ್ ಶ್ಯಾನುಭೋಗರುಗಳಿಗೆ ಕೊಟ್ಟಿರಬಹುದು. ಅಂಥ ಇನಾಂತಿಗಳನ್ನು ಈ ಬಡ ಗ್ರಾಮ ನೌಕರರುಗಳಿಗೇ ಅಲ್ಲ, ಅನೇಕರಿಗೆ ಕೊಟ್ಟಿದ್ದಾರೆ. ಅನೇಕ ಜನ ಖಾಸಗಿ ದೊಡ್ಡ ಮನುಷ್ಯರಿಗೂ ಸಹ ಕೊಟ್ಟಿದ್ದಾರೆ. ಆದರೆ ಈ ತೋಟಿ ತಳಾರಿಗಳಿಗೆ ಕೊಟ್ಟಿರುವ ಜಮೀನು ಅಲ್ಲೋ—ಇಲ್ಲೋ ಹಳ್ಳಕೊಳ್ಳಗಳಿರುವ ಪ್ರದೇಶದಲ್ಲಿ ಕೆಲಸಕ್ಕೆ ಬಾರದ ಜಮೀನನ್ನು ಒಂದೆರಡು ಎಕರೆಗಳವರೆಗೆ ಕೊಟ್ಟಿರಬಹುದು. ಆ ಇನಾಂತಿ ಜಮೀನನ್ನು ಪಡೆದು ಕೊಂಡಿರುವ ತೋಟಿತಳಾರಿಗಳ ಪೈಕಿ ಯಾರೂ ಕೋಟ್ಯಾಧೀಶ್ವರರಾಗಿಲ್ಲ, ಅರಮನೆಗಳನ್ನು ಕಟ್ಟಿಸಿ ಕೊಂಡು ವಾಸ ಮಾಡುತ್ತಿಲ್ಲ. ಅವರು ಈ ಹೊತ್ತು ಕೂಡ ಬಹಳ ಕಷ್ಟದಿಂದ ಅಹನ್ಯಹನಿ ಜೀವನ ನಡೆಸುತ್ತಿದ್ದಾರೆ. ಈಗಲಾದರೂ ಸರ್ಕಾರ ಕಾಲವಿಳಂಬಕ್ಕೆ ಅವಕಾಶ ಕೊಡದಂತೆ ಮತ್ತು ಈ ವಿಚಾರ ಪದೇ ಪದೇ ಈ ಸಭೆಯ ಮುಂದೆ ಬಾರದಿರುವಂತೆ ಒಂದು ಸೂಕ್ತ ಏರ್ಪಾಡನ್ನು ಮಾಡತಕ್ಕ ಬಗ್ಗೆ

ಹೆಚ್ಚಿನ ನಿಗಾ ಕೊಡಬೇಕೆಂದು ಹೇಳಿ ನಾನು ಈ ಖೋತಾ ನಿರ್ಣಯಕ್ಕೆ ನನ್ನ ಪೂರ್ಣ ಬೆಂಬಲವನ್ನು ನೀಡುತ್ತೇನೆ.

Sri K. PATTABHIRAMAN (Kolar).—I want to say a few words before the Hon'ble Minister replies. I have two difficulties which I want the Hon'ble Minister to clear. In the Memorandum given, in respect of item No. 9, certain explanation is given. There it is said that there was an earlier agreement between His Highness the Maharaja and the Government and if my memory does not fail me now, possibly a reference was made to it on another occasion. Relevant portions of that were brought to the notice of the House and a copy of it was placed on the Table of the House, subject to correction. But now I want this particular clarification to be made. I want to know what is the collateral agreement referred to. If I have followed the Hon'ble Minister specially under item 9 correctly, it looks to me that this is part of the agreement which is not referred to in the earlier agreement between the Government of India and His Highness the Rajpramukh. If it is the same agreement, then I want to know if it was so clear from it that it was to be an unconditional payment. What is it that prompted this Government immediately after coming into office to defer, to withhold payment? That is No. 1. No. 2: If it is a collateral agreement subsequently arrived at between the Governmet of India and His Highness the Rajpramukh without reference to the earlier by way of amplification of the earlier agreement or at a time subsequent to that first agreement, what was the stand taken by this Government? Was it consulted and if it were, then, all these years, what prevented this Government from taking this House into their confidence and bringing it to the notice of the House that an occasion like this had arisen and that an agreement was in contemplation? It should have been the duty of the Government to have brought it to the notice of the House on one or other occasion. I want that to be made clear.

The next point is this. Here the last sentence says:

> "The amount of Rs. 50,000 provided under '37. Education E. S. II Patronage of Literature and Fine Arts' in the estimates of 1955-56 will be surrendered."

Possibly, the reference is to what we find on page 96 of the Budget Estimates of 1955-56.- Vol. I. There I find:

> 'Patronage of Literature and Fine Arts . . Rs. 50,000'

I want to know if all that amount that was voted upon as Rs. 50,000 under the Budget Estimates is in its entirety available today for surrender or if some expenditure has already been made. It is in April that the Budget Estimates were sanctioned. We are now in the month of October. Between these six months I have a vague suspicion that some at least of this amount should have been spent. There has been a reference made to the expenditure either under the Academy of Dance and Music that we have or other patronage or in various other ways. My recollection is that while expenditure with reference to certain other items came on the floor of this House, it was suggested that this had been charged against this item of Rs. 50,000. Is the entire amount of Rs. 50,000 under the Budget Estimates available for surrender? That is No. 1. No. 2: There was an unconditional condition imposed in that agreement, whether it be in the first agreement or the collateral agreement, subject to verification by the Minister. There was a case of a lumpsum provision of Rs. 50,000 for the encouragement of Fine Arts, Music and all that. In addition to that, what prompted the Government to take its own line of action and make a similar provision? You know the various expenditures that were included Sri Puttaswamy Committee. Even in the explanation given by the Finance Minister, a reference is made that there was going to be some expenditure on that. Is that not a duplication? If they knew that an unconditional grant of Rs. 50,000 had to be placed in the hands of the Rajpramukh for the same purpose, what exactly prompted them to make a

(SRI K. PATTABHIRAMAN.)

duplication and alongside His Highness the Rajpramukh this Government also to take a similar view, appoint a Committee and make a proposition for expenditure? I feel there is not a clear appreciation of the position the Government occupies in respect of finances for an identical purpose. I want these points to be clarified.

*ಶ್ರೀ ಟಿ. ಮರಿಯಪ್ಪ (ಮೈಸೂರು ಸಿಟಿ—ಉತ್ತರ).—ಸ್ವಾಮಿ, ಈ 9ನೇ ಐಟಂನಲ್ಲಿ ಶ್ರೀಮನ್ ಮಹಾರಾಜರವರು ಖರ್ಚುಮಾಡಲು 50,000 ರೂಪಾಯಿಗಳ ಡಿಸ್ಕ್ರಿಷನರಿ ಗ್ರ್ಯಾಂಟನ್ನು 1951-52ನೆಯ ಸಾಲಿಗೆ ಕೊಡಲಾಗಿತ್ತೆಂದು ತಿಳಿಸಿದ್ದಾರೆ. 1952-53ರಿಂದಾಚೆಗೆ ಈ ಗ್ರ್ಯಾಂಟನ್ನು ಏತಕ್ಕೆ ಕೊಡಲಿಲ್ಲ ಎನ್ನುವ ಪ್ರಶ್ನೆಯನ್ನೇ ಎತ್ತದೆ ಕೊನೆಯಲ್ಲಿ ಈಗ ಈ ವಿದ್ಯಾಭ್ಯಾಸದ ಹೆಡ್ಡಿನ ಕೆಳಗೆ 50 ಸಾವಿರ ರೂಪಾಯಿಗಳನ್ನು ನಾವು ಬಿಟ್ಟುಕೊಟ್ಟಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಈ ಹಿಂದೆ ಆಗಿರತಕ್ಕ ಒಪ್ಪಂದದ ಪ್ರಕಾರ 1951-52ರಿಂದ ಈಚೆಗೆ 1952-53, 1953-54, 1954-55, 1955-56ಕ್ಕೆ ನಾವು ಕೊಡಬೇಕಾಗಿದ್ದಂಥ ಮೊಬಲಗನ್ನು ಬೇರೆ ವಿಧದಲ್ಲಿ ಕೊಟ್ಟಿದ್ದಾರೆಯೇ ಅಥವಾ ಇಲ್ಲವೇ ಎನ್ನತಕ್ಕಂಥ ವಿಚಾರವನ್ನೂ ಕೂಡ ನಮಗೆ ಮಂತ್ರಿಗಳು ತಿಳಿಸಬೇಕಾಗಿದೆ. ಇಂಥ ಹಣಕಾಸಿನ ಖರ್ಚು-ವೆಚ್ಚಗಳ ಸಂದರ್ಭ ಬಂದಿರುವುದು ಇದೊಂದೇ ಅಲ್ಲ; ಈ ರೀತಿಯ ಸಂದರ್ಭಗಳು ಇನ್ನೂ ಎರಡು-ಮೂರು ಬಂದಿವೆ. ಈ ಸಂಬಂಧವಾಗಿ ಇಂಡಿಯಾ ಸರ್ಕಾರಕ್ಕೂ ಮತ್ತು ನಮ್ಮ ಮೈಸೂರು ಸರ್ಕಾರಕ್ಕೂ ಏನಾದರೂ ಕಾನೂನಿನ ಉಲ್ಲಂಘನೆಯುಂಟಾಗಿದ್ದರೆ ಅದೆಲ್ಲ ಪ್ರಕೃತ ಸಂದರ್ಭಗಳ ದುರ್ದೈವದಿಂದ ಬಂದಿದೆ. ಆ ವಿಚಾರವನ್ನು ನಾವಾಗಲೇ ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಅದಕ್ಕಾಗಿ ಹಿಂದೆ ಎರಡು-ಮೂರು ವರ್ಷಗಳಕಾಲ ಹೋರಾಟ ಮಾಡಬೇಕಾಗಿ ಬಂತು. ಆದರೆ ಇತ್ತೀಚೆಗೆ ಶ್ರೀಮನ್ ಮಹಾರಾಜರವರಿಗೆ ಒದಗಿಸಲಾಗಿದ್ದ ಮೊಬಲಗನ್ನು ಅವರು ಉಪಯೋಗಿಸಿಕೊಂಡಿದ್ದರೆ: ಈ ಪ್ರಸಂಗಗಳೊಂದೂ ಒದಗುತ್ತಿರಲಿಲ್ಲ. ಆದರೆ ಸರ್ಕಾರದವರು ಇದೇ ರೀತಿಯ ಕೆಲಸ ಕಾರ್ಯಗಳಿಗೆ ಎಂದರೆ ಮ್ಯೂಜಿಕ್, ಆರ್ಟ್ಸ್ ಇತ್ಯಾದಿ ಬಾಬುಗಳಿಗೆ ಬೇರೆ ರೂಪದಲ್ಲಿ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಹೀಗೆ ಹಣವನ್ನು ಸರ್ಕಾರವೇ ಖರ್ಚುಮಾಡತಕ್ಕಂಥ ಒಂದು ಹೊಸ ಅಧ್ಯಾಯ 1953-54ರಲ್ಲೇ ಪ್ರಾರಂಭವಾಯಿತು. ಆದರೆ ಹೀಗೆ ಮಾಡಿರತಕ್ಕದ್ದನ್ನು ನೋಡಿದರೆ ಒಪ್ಪಂದದ ನಿಬಂಧನೆಗಳನ್ನು ಮೀರಿಹೋಗಿರುವಂತೆ ಕಾಣುತ್ತದೆ. ಆದಕಾರಣ ಈಗ 1953, 1954, 1955 ಮತ್ತು 1956 ಈ ಎಲ್ಲಾ ಸಾಲುಗಳ ಹಣವನ್ನೂ ಕೊಡಬೇಕಾಗಿದೆ. ಆದರೆ ಹೀಗೆ ಹಣವನ್ನು ನಿಲ್ಲಿಸಿದುದಕ್ಕೆ ಏನು ಅಂಥ ಬಲಾತ್ಕಾರ ಬಂತು ಎನ್ನುವುದನ್ನು ನಮೂದಿಸಿರುವುದಿಲ್ಲ. ಅಷ್ಟೇ ಅಲ್ಲದೆ ಇವರು ಹಾಗೆ ಈ ಹಣವನ್ನು ಒದಗಿಸದಿದ್ದ ಪಕ್ಷದಲ್ಲಿ ಆ ಹಣವೇನಾಯಿತು? ಆದರೆ ಮೂರು ವರ್ಷಗಳಿಂದಲೂ ಸರ್ಕಾರದವರು ಈ ಹಣವನ್ನು ಖರ್ಚುಮಾಡಿ ಬಿಟ್ಟು, ಈಗ ಮತ್ತೆ ಹೊಸದಾಗಿ ಶ್ರೀಮನ್ ಮಹಾರಾಜರವರಿಗೆ ಏಕ್‌ದಂ ಒಂದೇ ಗಂಟಿನಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಕೇಳಿರತಕ್ಕ ಬಗ್ಗೆ ಇವರು ಸಾಕಷ್ಟು ಕಾರಣಗಳನ್ನು ವಿವರಿಸಿರುವುದಿಲ್ಲ. ಒಪ್ಪಂದವೇನೇ ಆಗಿರಲಿ ಅದನ್ನು ಉಲ್ಲಂಘನೆ ಮಾಡತಕ್ಕದ್ದು ಸರಿಯಾದದ್ದಲ್ಲ. ಆದರೆ ಇತ್ತೀಚೆಗೆ ಈ ಕೊಲ್ಯಾಟರಲ್ ಅಗ್ರಿಮೆಂಟ್ ಎನ್ನತಕ್ಕಂಥಾದ್ದು ಕೇಂದ್ರ ಸರ್ಕಾರದ ಆಜ್ಞೆಗನುಸಾರವಾಗಿ ಬಂದಿರಬಹುದೆಂದು ಭಾಸವಾಗುತ್ತದೆ. ಈ ಎಲ್ಲ ವಿಷಯಗಳನ್ನೂ ಸರ್ಕಾರದವರು ವಿಶದಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—I want to know from the Hon'ble Member whether it is an additional expenditure that is going to be incurred.

Sri T. MARIAPPA.—Obviously for 1952-53, 1953-54 and 1954-55 the Government must have spent under a different head altogether. Now on account of the agreement there must be a direction from the Centre. Therefore they are now providing with a view to keep to the spirit of the agreement.

ಶ್ರೀ ವಿ. ವೆಂಕಟಪ್ಪ (ಚನ್ನಪಟ್ಟಣ).—ಈಗ ಶ್ರೀಮನ್ ಮಹಾರಾಜರವರಿಗೆ ಅನ್‌ಕಂಡೀಷನಲ್ ಆಗಿ 50 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ಹೇಳಿದ್ದಾರೆ. ಅವರ ಅಗ್ರಿಮೆಂಟ್ ಪ್ರಕಾರ ಈ ಮೊಬಲಗನ್ನು ಕಳೆದ ಮೂರು-ನಾಲ್ಕು ವರ್ಷಗಳಿಂದಲೂ ಕೊಡದೆ ಇದ್ದು ಈಗ ಹೀಗೆ ಕೊಡಬೇಕೆಂದು ಹೇಳುವುದಕ್ಕೆ ಕಾರಣವೇನು? ಬಹುಶಃ ಸರ್ಕಾರದವರಿಗೆ ಆಗ ಈ ಮೊಬಲಗನ್ನು ಖರ್ಚುಮಾಡುವುದಕ್ಕೆ ಅವಕಾಶವಿರಲಿಲ್ಲವೆಂದು ಕಾಣುತ್ತದೆ. ಆದಕ್ಕಾಗಿ ಈಗ ಈ ರೀತಿಯ ಒಂದು ದಾರಿಯನ್ನು ಹುಡುಕಿಕೊಂಡು, ಮೊನ್ನೆತಾನೇ ಇವರು ನಡೆಸಿದ ಆ ಭೂದಾನ-ವಿದ್ಯಾದಾನ ಚಳವಳಿಯ ಸಬಂಧದಲ್ಲಿ ಸಹಾಯಮಾಡಿರತಕ್ಕ ಜನಗಳಿಗೆ ಸರ್ಕಾರದವರೇನಾದರೂ ಒಂದು ಪಾರಿತೋಷಕ ಇತ್ಯಾದಿಗಳನ್ನು ಕೊಡುವುದರ ಮೂಲಕ ಈ ಮೊಬಲಗನ್ನು ಶ್ರೀಮನ್ ಮಹಾರಾಜರವರ ಹೆಸರಿನಲ್ಲಿ ಖರ್ಚು ಹಾಕಿಸಿ ಅವರಿಂದ ಆ ರೀತಿ ಕೊಡಿಸಲು ಈ ಒಂದು ಮಾರ್ಗ ಹಾಕಿಕೊಂಡಿದ್ದಾರೋ ಏನೋ. ಅಂತೂ ಈಗ ಈ ರೀತಿ ಮಾಡಿದ್ದಾರೆ. ಆದರೆ ಇದು ಅಷ್ಟು ವಿಶದವಾಗಿಲ್ಲ. 50 ಸಾವಿರ ರೂಪಾಯಿಗಳನ್ನು ಒಂದು ವರ್ಷದಲ್ಲೇ ಖರ್ಚುಮಾಡುವುದು ಬಹಳ ಕಷ್ಟ. ಹಾಗಿರುವಾಗ ನಾಲ್ಕು ವರ್ಷಗಳ ಮೊಬಲಗನ್ನೂ ಒಂದೇ ಗಂಟಿನಲ್ಲಿ ಕೊಡಬೇಕೆಂದು ಕೇಳಿದ್ದಾರೆ. ಅಲ್ಲದೆ ಹಿಂದೆ ಈ ಮೊಬಲಗನ್ನು ಬಡ್ಜೆಟ್ಟಿಗೆ ಸೇರಿಸಿ ಅದೆಲ್ಲವನ್ನೂ ಖರ್ಚುಮಾಡಿಬಿಟ್ಟಿದ್ದಾರೆ. ಆದರೆ ಆ ಎಲ್ಲಾ ಮೊಬಲಗಿನಲ್ಲೂ ಕೇವಲ ಒಂದು ವರ್ಷದ ಹಣವನ್ನು ಸರ್ಕಾರಕ್ಕೆ ಸರಂಡರ್ ಮಾಡಿಕೊಂಡು ಈಗ ಅದರ ಬದಲು ನಾಲ್ಕು ವರ್ಷದ ಮೊಬಲಗನ್ನು ಅದಕ್ಕೆ ಸೇರಿಸಿಕೊಡಬೇಕೆಂದು ಕೇಳಿದ್ದಾರೆಂದು ಹೇಳುತ್ತಿದ್ದಾರೆ. ಆದರೆ ಈ ಸಭೆಗೆ ಸರ್ಕಾರ ಈ ವಿಚಾರವಾಗಿ ಯಾವುದನ್ನೂ ಹೊರಪಡಿಸಿರುವುದಿಲ್ಲ. ಬಹುಶಃ ಅವರಿಗೆ ಆ ರೀತಿ ಮಾಡಲು ಮನಸ್ಸಿಲ್ಲವೆಂದು ಕಾಣುತ್ತದೆ. ಆದರೆ ಇತ್ತೀಚೆಗೆ ಹೂಡಿರುವ ಈ ಭೂದಾನ ಚಳವಳಿಯಲ್ಲಿ ದಾನಮಾಡಿರತಕ್ಕವರಿಗೇನಾದರೂ ಈ ಮೊಬಲಗನ್ನು ಖರ್ಚುಮಾಡಲಾಗುತ್ತದೆಯೆ, ಎನ್ನುವುದನ್ನೆಲ್ಲಾ ವಿಶದಪಡಿಸಬೇಕೆಂದೂ, ಹಾಗೆ ಮಾಡಿದರೆ ಬಹಳ ಅನುಕೂಲವಾಗುತ್ತದೆಂದೂ ಹೇಳುತ್ತೇನೆ.

ಶ್ರೀ ಕೆ. ಪುಟ್ಟಸ್ವಾಮಿ (ಶ್ರೀರಂಗಪಟ್ಟಣ).—Collateral agreement ಯಾವ ತಾರೀಖಿನಲ್ಲಿ

ಆಗಿದೆ ಮತ್ತು ಅದರಲ್ಲಿ ಏನು ಷರತ್ತುಗಳಿವೆ ? ಹಿಂದೆ 1952ನೇ ಇಸವಿಯಲ್ಲಿ ಯಾವ ambiguity ಇದ್ದು ಕೊಡಲಿಲ್ಲ ? ಈಗ ತಕ್ಷಣ unconditional ಆಗಿ ಕೊಡಬೇಕೆಂಬ ಷರತ್ತು ಯಾವ ಪದದಲ್ಲಿ ಇದೆ ? ಅದನ್ನು ಸ್ವಲ್ಪ ಹೇಳಿದರೆ ಅಥವಾ agreement ಕೊಟ್ಟರೆ ಅದನ್ನು ನಾವು ನೋಡಿಕೊಂಡು ಹಣ ಕೊಡುವುದಕ್ಕೆ ಅನುಕೂಲವಾಗುತ್ತದೆ. ಬಾಕಿ ಎಲ್ಲಾ ಫೈಸಲ್ ಮಾಡಬಹುದು.

Sri H. SIDDAVEERAPPA.—It is already 3 o'clock. If you have no objection, we will take it up after lunch. I require a little more time to meet the points raised.

Mr. SPEAKER.—Yes. The House will now rise for lunch and meet at 3-30 P.M.

The House adjourned for Lunch at Three of the Clock and reassembled at Thirty Minutes past Three of the Clock.

[MR. SPEAKER in the Chair].

ಶ್ರೀ ಎನ್. ಸಿ. ನಾಗಯ್ಯರೆಡ್ಡಿ (ಗೌರಿಬಿದನೂರು).—ಸ್ವಾಮಿ, ಒಂದು ಸಂಶಯವಿದೆ. ಅದನ್ನು ನಿವಾರಣೆ ಮಾಡಬೇಕು. ಸರ್ಕಾರದವರು ಮೂರು ವರ್ಷ ಮಹಾರಾಜರಿಗೆ ಗ್ರಾಂಟನ್ನು ಕೊಡದೆ ಯಾವ ಉದ್ದೇಶದಿಂದಲೋ ಏನೋ ಅವರನ್ನು ಬೆದರಿಸಿ ಗರಕಹಳ್ಳಿ ಜಮೀನನ್ನು 50 ಸಾವಿರ ರೂಪಾಯಿಗಳಿಗೆ ಬರೆಸಿಬಿಟ್ಟು ಈ ಗ್ರಾಂಟನ್ನು ತಂದಿದ್ದಾರೆ ಎಂಬುದೇ ನನ್ನ ಸಂಶಯ. ಮಹಾರಾಜರಿಗೆ ಲಂಚ ಕೊಟ್ಟು ಗ್ರಾಂಟು ತೆಗೆದುಕೊಳ್ಳುವುದು, ಅಥವಾ ಮಹಾರಾಜರನ್ನು ಬೆದರಿಸಿ ಅವರ ಹತ್ತಿರ ಗ್ರಾಂಟು ಬರೆಸಿಕೊಳ್ಳುವುದು ತಪ್ಪು. ಅದನ್ನು ಸ್ವಲ್ಪ clarify ಮಾಡಬೇಕು.

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ನಾಳೆ ಅನೇಕರು ಪಿತೃಪಕ್ಷ ಮಾಡುವವರಿದ್ದಾರೆ. ಆದ್ದರಿಂದ ನಾಳೆ ಬೆಳಿಗ್ಗೆ session ಇಟ್ಟುಕೊಂಡರೆ ಮಧ್ಯಾಹ್ನ ಊರಿಗೆ ಹೋಗುವುದಕ್ಕೆ ಅನುಕೂಲವಾಗುತ್ತದೆ.

Mr. SPEAKER.—It is also discussed outside the Legislature ; I was told so. So many Hon'ble Members represented to me that it would be convenient to conduct the business tomorrow morning. Therefore, the House will meet at 8-30 tomorrow morning.

***Sri H. SIDDAVEERAPPA.**—Sir, the points raised by the Hon'ble Members regarding item No. 9 are of sufficient importance that I deem it but right I should explain in great length as to what the position is. I do no know whether I would be right in answering the doubt or what has been stated by the Hon'ble Member, Sri Nagiah Reddy. But I may say at once that if he has a doubt of that nature, that doubt is not well founded and is not warranted by facts. It would be beyond anybody's imagination to surmise that His Highness the Maharaja may be coerced to a course of action by any dubious method as has been suggested. I should say there is no connection between that transaction and the Demand that is now before us. I would request the Hon'ble Member to dispel any doubt that he has in mind so far as this position is concerned. I think that would be sufficient for the purpose.

With regard to some points raised by the Hon'ble Members, a word of explanation is certainly necessary as to why this grant was not disbursed from the year 1952-53. It would be better if we understand the background of this discretionary grant. As the House is aware, Sir, there was an agreement financial and otherwise with His Highness the Rajpramukh prior to 26th January 1950, that is prior to the date of inauguration of our Constitution. It may also be worthwhile to remember that in that agreement this discretionary grant was not found. As to how it arose is a matter the House should know. That is what is called by the compendious name, collateral agreement, which is the point raised by the Hon'ble Members. In a letter addressed to this Government in January 1951, Sri V. P. Menon who was the then Secretary of State that dealt with these matters stated that a discretionary grant of Rs. 50,000 per annum will have to be paid to His Highness and if my memory is correct, as I have not got the letter in original here,—it was stated that the grant will have to be utilised by His Highness in consultation with the Chief Minister for patronising Arts, Literature, Dance, Drama and various other Fine Arts in the State. That was agreed to by the Government. It was paid for one year. The trouble arose this way and it may also be worthwhile to remember that the trouble arose even before this Government came into office. It was as a result of objection

(SRI H. SIDDAVEERAPPA.)

raised by the Accountant General. The Accountant General said : "Here is a discretionary grant; any grant that is chargeable to revenues of the State must be subject to audit. No money should be spent without being subject to audit." That was in essence the objection raised by the Accountant General. After that objection was raised, somewhere in the month of May 1952, the matter was discussed with His Highness. As a result of discussion between His Highness and the Government through the Chief Minister, it was agreed by His Highness voluntarily that this amount may be operated by the Government themselves for purposes specified, namely, for the purpose of promoting Art, Literature, etc. that come under that category. It was in pursuance of that agreement reached between His Highness and the Government that the Government took a decision even in 1952 that, as agreed to by His Highness, this discretionary grant of Rs. 50,000 per annum may be utilised for distributing prizes, etc. in the Raj Sabha for these specified purposes. Afterwards this matter was under correspondence with the Government of India. The Government of India, after a full examination of the problem gave their consent, I believe, just five months back, if I remember correctly, definitely during this year, that this discretionary grant may be utilised for purposes of promoting Art, Literature, etc., in the State ; but, with regard to the suggestion as to how it should be spent, they agreed with our proposal to utilise this amount not for conferring any titles or medals—because the Constitution of India does not admit it nor was it our intention to do anything against the constitutional provision—but for purposes of awarding certificates, sannads, prizes, etc., for these specified purposes. While this question was pending, the Rajpramukh suggested that the entire amount for all these four years might have to be utilised for the purpose for which it was meant. That was the amount that was due to His Highness the Rajpramukh and to be utilised for these specified purposes. This Government never doubted at any itme and they never raised objection at any time nor did the Government of India issue any directive to this Government in that behalf. Afterwards it was thought that this amount would have to be utilised according to rules. If we have to make use of it as a recurring grant every year, so long as that agreement is there, certain rules will have to be formed. The rules are in the process of being framed. After the Government of India agreed, the course suggested by this Government has already been explained by me. Now, it will be readily seen by this House that we did not raise any *takrar* for the payment of this amount. We did not withhold the amount from payment. But it arose as a procedural matter, on an objection raised by the Accountant General. Therefore, I would appeal to the Hon'ble House not to mistake the Government if this amount has not been used all these years yearwise. No doubt a relevant point was raised by Sri Mariappa that we are making a double payment and that we have been spending for this purpose every year. When it was definitely advised to us that it is a matter subject to audit, we thought the appropriate head under which this amount could be spent annually would be under the Education Budget. We did make provision, I believe, from the last three to four years. But I may assure the Hon'ble House that so far as the money is concerned, we have got accounts. I believe only a fraction of the amount has been spent all these years, for purchase of picturs for encouraging painting and various other items. It is the intention of the Government when this amount is sanctioned by this House to see that all the amount spent under this Heading is to be recouped from this item that is now brought for being sanctioned. So far as that position is concerned, I think I have made it clear that it was not due to any wilful desire nor was it due to the lapses of this Government, that this amount was not spent during these years.

Sir, Hon'ble Member Sri V. Venkatappa questioned "how are you going to spend that amount?" Well, that is a matter for which rules will have to be framed now to what to do and whether any fund will have to be created. All these things are receiving the earnest attention of the Government as to how to dispose of the sum if there is any unspent amount and what we should do with it.

Sri V. VENKATAPPA.—You have got to spend all the two lakhs. How can there be any unspent amount?

Sri H. SIDDAVEERAPPA.—What I am suggesting is—every year we are allowing Rs. 50,000. Suppose we spend thirty or forty thousand rupees in a year, what should happen with regard to the other amount that has not been spent during that year?

Sri K. PUTTASWAMY.—I want to know whether this amount will be spent by the Government or whether the Rajpramukh has been given the discretion to spend it.

Sri H. SIDDAVEERAPPA.—His Highness the Rajpramukh has been graciously pleased to vest that discretion with the Government to spend this amount for specified purposes mentioned therein. Even in 1951, there was a meeting with Government officers, namely, the Huzur Secretary, the Accountant General and the Chief Secretary as to the manner and the mode in which this amount will have to be spent, and now the reason as to why we have come forward with this apparently belated supplementary grant is for the reason that the entire amount which will have to be spent for the purposes for which it was given to His Highness has to be spent in the agreed manner.

I think, Sir, I have explained all the points raised by the Hon'ble Members. I think Sri Srinivasa Iyengar raised the question of telephones. There again—all that I can say is we have carried out faithfully both in spirit and in letter the terms of the agreement. If in the course of some of those practices, what is called 'carry-over'—during the transition period prior to 1950 there were such customs or practices, and they ought to have been carried out according to the agreement,—the agreement did not provide for telephone charges being met out of the General Revenues. Therefore His Highness himself has entered into all those things. Now there is perfect agreement as to the procedure and the mode in which some of these items will have to be met. Therefore. Sir, I request the Hon'ble House to be pleased to grant this demand. Now my Hon'ble friend will speak on a point raised by Hon'ble Sri M. Madiah.

Sri Kadidal MANJAPPA (Minister for Revenue).—Sir, it is urged by my friends Sri Madiah and Sri T. Hanumiah that the minor village officers, namely the thotis and talwars, are not being treated well. This is a subject which is coming before this House from a long time. I had assured the Hon'ble Members last time that I am going to consider the question. In accordance with that assurance, we have appointed a Committee under my Chairmanship, a Committee of officers to go into the question. That Committee has met once. We are going to meet again shortly after the conclusion of the session of the Legislature and we are going to take a decision. I cannot say just now what decision we are going to take. The census of land holdings. . . .

ಶ್ರೀ ಎಂ. ಮಾದಯ್ಯ.—ಆ ಸಮಿತಿಯಲ್ಲಿ ರೆವಿನ್ಯೂ ಕಮೀಷನರು, ರೆವಿನ್ಯೂ ಸೆಕ್ರೆಟರಿ ಇಂಥವರಿದ್ದಾರೆಯೋ ಅಥವಾ ಖಾಸಗೀ ಸದಸ್ಯರೂ ಇದ್ದಾರೆಯೋ?

Are any non-officials represented on the committee?

Sri Kadidal MANJAPPA.—There are. There is the Commissioner for Depressed Classes Amelioration. He is there and there are a few other officers.

ಶ್ರೀ ಟಿ. ಹನುಮಯ್ಯ.—ಹಳ್ಳಿಯವರ ಕಷ್ಟ ಅವರಿಗೇನು ಗೊತ್ತಿದೆ?

Sri Kadidal MANJAPPA.—All of of them have served as Deputy Commissioners and all of them know the conditions of these people.

ಶ್ರೀ ಟಿ. ಹನುಮಯ್ಯ.—50 ವರ್ಷಗಳ ಹಿಂದೆ ಮಾಡಿರುವ ರೆವಿನ್ಯೂ ಮ್ಯಾನ್ಯುಯಲ್ ತೋರಿಸುತ್ತಾರೆ. ಪುಗಸಟ್ಟೆ ಕೆಲಸ ಮಾಡಬೇಕೆಂದು ಹೇಳುತ್ತಾರೆ.

Sri Kadidal MANJAPPA.—My friend is making an allegation that we are making these village officers to serve

(SRI KADIDAL MANJAPPA.)

freely without any remuneration. In fact some thotis, talwars and nirgantis. . . .

(*Interruption*)

It is no doubt true that in some cases these village officers are complaining that they have not been paid the usual miras.

A MEMBER.—It is a feudal system.

Sri Kadidal MANJAPPA.—It is not a feudal system. Some of these village officers are enjoying inam lands and in addition they are getting miras. It has been urged many a time. . . .

ಶ್ರೀ ಟಿ. ಹನುಮಯ್ಯ.—ಮಿರಾಸೆ ಎಂದು ಸುಮ್ಮನೆ ಹೇಳುತ್ತೀರಿ; demand, collection and balance ಎಷ್ಟು ಎಂಬುದನ್ನು ತರಿಸಿದರೆ ಗೊತ್ತಾಗುತ್ತದೆ.

Sri S. SRINIVASA IYENGAR.—Miras is not a payment made by Government.

Sri Kadidal MANJAPPA.—Public funds are not my paternal property. If the House so decides after the recommendation of the Committee is received, we have no objection to revise the rules. Let not my friends go away with the impression that the Revenue Minister is responsible for not paying them the salary that you are requesting us to pay. I am generally sympathetic with the poor. Therefore, I may assure the Hon'ble Members that the Government is going to consider this question in a sympathetic manner, of course, taking into account the finances of the State.

Sri M. MADIAH.—Did the Assembly advise the Government to appoint only officers for the Committee? Non-officials of this House could as well have been enlisted on the Committee.

Sri Kadidal MANJAPPA.—I have already answered that point. My friend Sri Srinivasa Iyengar. . . .

ಶ್ರೀ ಟಿ. ಹನುಮಯ್ಯ.—ಬೊಂಬಾಯಿ, ಮದರಾಸು, ಹೈದರಾಬಾದು ಮುಂತಾದ ಕಡೆಗಳಲ್ಲಿ ಹೇಗಿದೆ ಎಂಬುದನ್ನು ತರಿಸಿಕೊಂಡು ನೋಡಿ ಮಾಡಲೆಂದು ನನ್ನ ಪ್ರಾರ್ಥನೆ.

Sri Kadidal MANJAPPA.—My friend Sri Srinivasa Iyengar complained that I had made an assurance on the floor of this Hon'ble House that there would not be any extra expenditure on account of the constitution of the Revenue Board. Sir, I would like to recall to his mind that when the Bill was introduced, I no doubt said that as the Bill stood on that date, the State was not going to be burdened with additional expenditure. My friend may remember that the Bill was referred to the Select Committee and the Select Committee proposed that there should be a District Judge in addition to the officers. Therefore a financial memorandum, if I remember correctly, was attached to the Bill. Therefore, I never said that there is no extra expenditure on account of the Revenue Board. I also did not say that a District Judge will be appointed out of the District Judges already in service and that no fresh appointment will be made. The Revenue Board is functioning since the 29th of last month. I hope the expenditure that we are required to incur on account of the Revenue Board will repay to a very great extent.

Sri Gopala Gowda urged the need for completing the census of land-holdings. I wish to inform him that the census work is almost complete except in one district. I am sure the census will be completed in about a few months. We are also anxious to compile the correct figures. I may assure him that the Government will try their best to secure correct figures.

Mr. SPEAKER.—The question is:

"That a further sum not exceeding Rs. 2,42,700 be granted to the Government to defray the charges which will come in course of payment during the year ending 31st day of March 1956, in respect of 'General Administration (Except sub-major heads B and C)'."

The motion was adopted.

DEMAND No. 16—POLICE.

29. POLICE.

Mr. SPEAKER.—Motion moved:

"That a further sum not exceeding Rs. 100 be granted to the Government to defray the charges which will come in course of payment during the year ending 31st day of March 1956, in respect of 'Police'."

We have already spent much time. Moreover, there is not much to discuss here. So, I will put this to vote. The question is :

" That a further sum not exceeding Rs. 100 be granted to the Government to defray the charges which will come in course of payment during the year ending 31st day of March 1956, in respect of 'Police'."

The motion was adopted.

DEMAND No. 17—SCIENTIFIC DEPARTMENTS.

36. SCIENTIFIC DEPARTMENTS.

Mr. SPEAKER.—The question is :

"That a further sum not exceeding Rs. 18,300 be granted to the Government to defray the charges which will come in course of payment during the year ending 31st day of March 1956, in respect of 'Scientific Departments'."

The motion was adopted.

DEMAND No. 18—EDUCATION.

37. EDUCATION.

Mr. SPEAKER.—Motion moved :

" That a further sum not exceeding Rs. 300 be granted to the Government to defray the charges which will come in course of payment during the year ending 31st day of March 1956, in respect of 'Education'."

The following cut motions are allowed-Nos. 33, 34, 35 and 36.

4 P. M.

*ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ.-ನರಸೀಪುರ).—ಸ್ವಾಮಿ, ಮೈಸೂರು ಸಂಸ್ಥಾನದಲ್ಲಿ ಕೈಕೊಂಡಂಥ ಭೂ-ದಾನ ಚಳವಳಿಯಿಂದ ಸುಮಾರು 40,000 ಎಕರೆಗಳು ಸರ್ಕಾರಕ್ಕೆ ಬಂದಿವೆಯೆಂದು ಮಾನ್ಯ ಮುಖ್ಯ ಮಂತ್ರಿಗಳವರು ಅವರ ಭಾಷಣದಲ್ಲಿ ತಿಳಿಯಪಡಿಸಿದ್ದಾರೆ. ಹಾಗೆ ದಾನವಾಗಿ ಬಂದಂಥ ಜಮೀನನ್ನು ವ್ಯವಸಾಯಮಾಡಬೇಕು, ಅದಕ್ಕಾಗಿ ಸ್ವಲ್ಪ ದುಡ್ಡು ಖರ್ಚಾಗುತ್ತದೆ, ಸುಮಾರು ಎರಡು ಲಕ್ಷ ರೂಪಾಯಿಗಳಾಗಬಹುದು ಎಂದು ಅವರ ಭಾಷಣದಲ್ಲಿ ತಿಳಿಯಪಡಿಸಿದ್ದಾರೆ. ಅದರ ಮೇಲೆ ಈಗ ಸಪ್ಲಿಮೆಂಟರಿ ಡಿಮ್ಯಾಂಡಿನಲ್ಲಿ ಒಂದು token grant ಕೇಳಿದ್ದಾರೆ. ಅದಕ್ಕೆ ಕಾರಣ, ಎಷ್ಟು ಖರ್ಚಾಗುತ್ತದೆಂದು ಈಗಲೇ ಗೊತ್ತಾಗುವುದಿಲ್ಲವೆಂದಲ್ಲ ; ಯಾವುದಾದರೂ, ಬಡ್ಜೆಟ್ಟಿನಲ್ಲಿ ನಮೂದಾಗದಿರುವ, ಹೊಸದಾಗಿ ಖರ್ಚು ಮಾಡತಕ್ಕ ಒಂದು New Service ವಿಷಯ ಬಂದಾಗ token grant ಕೇಳಬೇಕೆಂದಿದೆಯೆಂಬ ತತ್ವದ ಪ್ರಕಾರ ಟೋಕನ್ ಗ್ರ್ಯಾಂಟ್ ಕೇಳಿದ್ದಾರೆ.

Sri M. MADIAH (Nanjangud—Scheduled Castes).—May I know the time fixed for this demand, Sir ? Because there are a number of other demands to be disposed of, I request the Chair to kindly allow more time for this demand.

Mr. SPEAKER.—Fifteen minutes are allowed for the discussion of this demand.

Sri M. LINGANNA (Nanjangud).—Since this demand is a very important one and a new movement is launched by the Government, I would request the concerned Minister to be present, Sir.

Sri M. MADIAH.—I raise a point of order, Sir. The ruling has been given by the Chair fixing the time-limit for this demand. So, it would be questioning the ruling of the Chair.

Sri T. MARIAPPA (Mysore North).—I would only appeal to the Speaker to give more time because it is for the first time that such a demand is coming forward in a concrete form before this House.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಮಾನ್ಯ ಮುಖ್ಯ ಮಂತ್ರಿಗಳು ಸಪ್ಲಿಮೆಂಟರಿ ಎಸ್ಟಿಮೇಟು ಗಳನ್ನು ಸಭೆಯ ಮುಂದೆ ಇಡತಕ್ಕ ಕಾಲದಲ್ಲಿ ಮಾಡಿದ ಭಾಷಣದಲ್ಲಿ ಈ ವಿಚಾರವಾಗಿ ಒಂದೆರಡು ಅಭಿಪ್ರಾಯವನ್ನು ಹೇಳಿದ್ದಾರೆ. ಈ ಜಮೀನುಗಳ ವ್ಯವಸಾಯಕ್ಕೆ ಬೇಕಾದ ಸಲಕರಣೆ ಮುಂತಾದುವುಗಳನ್ನು ಕೊಂಡುಕೊಳ್ಳುವುದಕ್ಕೆ ದುಡ್ಡು ಕೇಳುತ್ತಿಲ್ಲವೆಂದು ಖಚಿತವಾಗಿ ಹೇಳಿದ್ದಾರೆ. ಆದರೆ ಈಗ ಈ ಸಪ್ಲಿಮೆಂಟರಿ ಡಿಮ್ಯಾಂಡ್ ಕೆಳಗೆ ನಮೂದಿಸಿರುವ ಕಾರಣವೇನೆಂದರೆ, ವ್ಯವಸಾಯಕ್ಕೆ ಅತ್ಯಗತ್ಯವಾಗಿ ಬೇಕಾದಂಥ ಸಲಕರಣೆಗಳಿಗಾಗಿ ಈ ವರ್ಷ $1\frac{1}{2}$ ಲಕ್ಷ ರೂಪಾಯಿಗಳು ಖರ್ಚಾಗುತ್ತವೆಂದು ಹೇಳಿದ್ದಾರೆ. ಹೀಗೆ ಒಂದಕ್ಕೊಂದಕ್ಕೆ ವಿರೋಧವಾಗಿದೆ. ವಿದ್ಯಾರ್ಥಿಗಳು ಸ್ಲೇಟು, ಪುಸ್ತಕಗಳನ್ನು ಹೇಗೆ ಸ್ಕೂಲಿಗೆ ತರುತ್ತಾರೋ ಹಾಗೆ ವ್ಯವಸಾಯದ ಸಲಕರಣೆಗಳನ್ನೂ ತಂದು ಸ್ಕೂಲಿನಲ್ಲಿ ವ್ಯವಸಾಯ ಮಾಡಿ ಮನೆಗೆ ಹೋಗುತ್ತಾರೆ ಎಂದು ಹೇಳಿರುವಾಗ ಇನ್ನು ವ್ಯವಸಾಯದ ಸಲಕರಣೆಗಳನ್ನು ಕೊಂಡುಕೊಳ್ಳುವುದಕ್ಕೆ ಹಣ ಕೇಳುವುದರ ಅವಶ್ಯಕತೆ ನನಗೆ ಗೊತ್ತಾಗುವುದಿಲ್ಲ. ಅಲ್ಲದೆ, ನಿರ್ದಿಷ್ಟವಾಗಿ ವ್ಯವಸಾಯ ಸಲಕರಣೆಗಳಿಗೆ ಎಷ್ಟು ಎಂಬುದನ್ನೂ ಕೊಟ್ಟಿಲ್ಲ. ಈ

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್).

ವರ್ಷ 1½ ಲಕ್ಷ ಬೇಕೆಂದು ಮಾತ್ರ ತಿಳಿಸಿದ್ದಾರೆ. ಆದ್ದರಿಂದ ಇವೆರಡರಲ್ಲಿಯಾವುದು ಸರಿಯೆಂಬುದನ್ನು ಹೇಳಬೇಕು.

ಎರಡನೆಯದಾಗಿ, ಗೊಬ್ಬರ, ಬಿತ್ತನೆ ಇವುಗಳನ್ನು ಕೊಂಡುಕೊಳ್ಳುವುದಕ್ಕಾಗಿ ದುಡ್ಡು ಕೇಳಿದ್ದೇವೆಂದು ಹೇಳುತ್ತಾರೆ. ಮುಖ್ಯ ಮಂತ್ರಿಗಳ ಭಾಷಣದಲ್ಲೂ ಅದನ್ನು ಹೇಳಿದ್ದಾರೆ. ಸಪ್ಲಿಮೆಂಟರಿ ಡಿಮ್ಯಾಂಡ್ ಕೆಳಗಿನ Noteನಲ್ಲೂ ಅದನ್ನು ಹೇಳಿದ್ದಾರೆ. ಆದರೆ ಈಗ ಯಾವ ವ್ಯವಸಾಯ ಮಾಡುವುದಕ್ಕೆ ತಾನೆ ಸಾಧ್ಯ? ಬತ್ತ ಬೆಳೆಯುವುದಕ್ಕಾಗುವುದಿಲ್ಲ. ಕಾಲ ಆಗಿ ಹೋಯಿತು. ಜೋಳ ಬಿತ್ತೋಣವೆಂದರೆ ಮೈದಾನದಲ್ಲಿ ಈಗ ಆಗುವುದಿಲ್ಲ; ಬಹುಶಃ ಮಲೆನಾಡಿನಲ್ಲಿ ಈಗ ಆಗಬಹುದು. ರಾಗಿ ಬಿತ್ತುವ ಕಾಲವೂ ಆಗಿಹೋಯಿತು. ಆಗಲೇ ಇದು ಕೊಯ್ಲಿನ ಕಾಲ. ಈಗೇನಿದ್ದರೂ ಬಹುಶಃ ಹಸಿಕಡಲೆ, ಕೊತ್ತುಂಬರಿ, ಹೊಗೆಸೊಪ್ಪು ಇವುಗಳನ್ನು ಬೆಳೆಯಬಹುದು ಅಷ್ಟೆ. ಈ ಮೂರರ ಬಿತ್ತನೆಗಾಗಿ ಎರಡು ಲಕ್ಷ ರೂಪಾಯಿಗಳು ಬೇಕೆಂದು ನಿಮ್ಮ ಅಭಿಪ್ರಾಯವೇ? ಅಥವಾ ಮುಂದಿನ ಬಡ್ಜೆಟ್ ಅಧಿವೇಶನ ಬರುವುದರೊಳಗೇ ಬಿತ್ತನೆಯಕಾಲ ಬರುತ್ತದೆಯೇ ಎಂದರೆ ಅದೂ ಬರುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ (ಒಳಾಡಳಿತ ಶಾಖೆಯ ಮಂತ್ರಿಗಳು).—ನಿಮ್ಮ ಡಿಸ್ಟ್ರಿಕ್ಟಿನಲ್ಲಿ ಜೋಳವನ್ನು ಯಾವಾಗ ಬಿತ್ತುತ್ತಾರೆ?

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.—ಏಪ್ರಿಲ್ ತಿಂಗಳಲ್ಲಿ. ಅಷ್ಟು ಹೊತ್ತಿಗೆ ಬಡ್ಜೆಟ್ ಅಧಿವೇಶನ ಬಂದುಬಿಡುತ್ತದೆ. ಆದ್ದರಿಂದ ಬಿತ್ತನೆ ಕೊಂಡುಕೊಳ್ಳುವುದಕ್ಕೆಂದು ಕೇಳಿರುವ ಹಣವನ್ನು ಯಾವ ಬೆಳೆಯನ್ನು ಬೆಳೆಯುವುದಕ್ಕೆಂದು ಹೇಳದೆ ಕೊಡುವುದಕ್ಕಾಗುವುದಿಲ್ಲ.

ಮೂರನೆಯದಾಗಿ, ಮುಖ್ಯ ಮಂತ್ರಿಗಳು ಇನ್ನೊಂದು ವಿಷಯವನ್ನು ಹೇಳಿದ್ದಾರೆ. ಈ ಹಣವನ್ನು ಖರ್ಚುಮಾಡುವುದಿಲ್ಲ, ವಿದ್ಯಾ ಸಂಸ್ಥೆಗಳಿಗೆ ಅಡ್ವಾನ್ಸಾಗಿ ಕೊಡುತ್ತೇವೆ, ಅವರು ಅದನ್ನು ವಾಪಸು ಕೊಡುತ್ತಾರೆ ಎಂದು ಹೇಳಿದ್ದಾರೆ. ಅಡ್ವಾನ್ಸಾಗಿ ಕೊಡುವುದಕ್ಕೆ ಹೇಗೆ ಸಾಧ್ಯ? ಅಡ್ವಾನ್ಸ್ ಎಂದರೆ ಈ ಡಿಮ್ಯಾಂಡಿನಲ್ಲಿ ಹೇಗೆ ತರುವುದಕ್ಕೆ ಅವಕಾಶವಿದೆ? ಹಾಗೆ ತರಬೇಕಾದರೆ 45ನೆಯ ಡಿಮ್ಯಾಂಡಿನಲ್ಲಿ ತರಬೇಕು ಅಷ್ಟೆ.

ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಇನ್ನೊಂದು ವಿಷಯವನ್ನು ಹೇಳಿದ್ದಾರೆ. ಫಸಲು ಬಂದಿದ್ದನ್ನು ವಿಲೇವಾರಿ ಮಾಡುವುದಕ್ಕೆ ಸರ್ಕಾರಿ ಆರ್ಡರ್ ಆಗಿದೆಯೆಂದು ಹೇಳಿದರು. ಇದನ್ನು ಕೇಳಿ ನಮ್ಮ ಶ್ರೀ ವೈಷ್ಣವ ದೇವಸ್ಥಾನದಲ್ಲಿ ಪ್ರಸಾದವನ್ನು ಹಂಚುವುದಕ್ಕೆ ಒಂದು ಸರ್ಕಾರಿ ಆರ್ಡರಿದೆ. ಒಂದು ಸೇರು ಹುಳಿಯನ್ನದಲ್ಲಿ ಇಂಥಿಂಥವರಿಗೆ ಇಷ್ಟಿಷ್ಟು ಹಂಚಿಕೊಡಬೇಕು ಎಂದು ಗೊತ್ತುಮಾಡಿರುತ್ತಾರೆ. ಆ ರೀತಿಯಾಗಿ ಇದೂ ಏನಾದರೂ ಆಗುತ್ತದೆಯೋ ಎಂದು ನನಗೆ ಯೋಚನೆಯಾಯಿತು.

ಆಮೇಲೆ, ಮಾನ್ಯ ಮುಖ್ಯ ಮಂತ್ರಿಗಳು 40,000 ಎಕರೆ ಜಮೀನುಗಳು ಸ್ವಯಂಪ್ರೇರಿತವಾಗಿ ಸರ್ಕಾರಕ್ಕೆ ದಾನವಾಗಿ ಬಂತು ಎಂದು ಹೇಳಿದರು. ಸ್ವಯಂ ಪ್ರೇರಿತವಾಗಿ ಬಂತೆಂಬುದನ್ನು ನಾನು ನಂಬಲಾರೆ. ಅಮಲ್ದಾರರುಗಳೂ, ಡೆಪ್ಯುಟಿ ಕಮಿಷನರುಗಳೂ ಇನ್ನೂ ಇತರ ಮುಖಂಡರುಗಳೂ ಜೀಪ್‌ನಲ್ಲಿ ಕುಳಿತುಕೊಂಡು ಹಳ್ಳಿಗಳಿಗೆ 10-12 ದಿವಸ ಹೋಗಿ ಜನರನ್ನು ಕೇಳಿ ತೆಗೆದುಕೊಂಡದ್ದು ನಿಜ. ಅಮಲ್ದಾರರುಗಳು, ಇಕ್ಸ್‌ಕಂಟ್ರ್ಯಾಕ್ಟ್ಸ್ ಅಧಿಕಾರಿಗಳು, ಅಧಿಕಾರ ಸ್ಥಾನದಲ್ಲಿರುವವರು ಯಾವಾಗ ಬಂದು ಕೇಳುತ್ತಾರೋ ಆಗ ಕೊಡುವುದು ಸ್ವಯಂ ಪ್ರೇರಿತವೇ ಅಧಿಕಾರಿಗಳ ಒತ್ತಾಯಕ್ಕಾಗಿ ಕೊಟ್ಟಿದ್ದೇ ಎಂಬುದು ಅರ್ಥವಾಗುತ್ತದೆ. ಒಳ್ಳೆಯದು. ಇದರಿಂದಾಗಿ 40,000 ಹೆಚ್ಚಿಗೆ ಎಕರೆಗಳು ಸೇರಿವೆಯೆಂದು ಒಂದು ಕಡೆ ಸಂತೋಷಪಟ್ಟುಕೊಂಡರೂ ಎಂಥ ಜಮೀನುಗಳು ಸೇರಿವೆ? ಬೆಟ್ಟ ಗುಡ್ಡಗಳಲ್ಲಿರುವಂಥವು, ಅನೇಕ ವರ್ಷಗಳಿಂದ ವಾಜ್ಯಕ್ಕೆ ಒಳಗಾಗಿದ್ದಂಥವು. ಕೆಲವು ಇನಾಂ ಗ್ರಾಮಗಳಲ್ಲಿ ಅವರಿಗೆ ಜಮೀನು ಕೊಡುವುದಕ್ಕೆ ಅಧಿಕಾರವಿಲ್ಲದಿದ್ದರೂ ತಮ್ಮಲ್ಲಿರುವ ಗೋಮಾಳವೆಲ್ಲವನ್ನೂ ಕೊಟ್ಟಿದ್ದಾರೆ. ಆದ್ದರಿಂದ ತಮಗೆ ಬಂದಿರತಕ್ಕ ಜಮೀನುಗಳಲ್ಲಿ ವ್ಯವಸಾಯಕ್ಕೆ ಯೋಗ್ಯವಾದುವು ಎಷ್ಟು ಆ ಪೈಕಿ ತರಿ ಎಷ್ಟು, ಖುಷ್ಕಿ ಎಷ್ಟು ಎಂಬುದನ್ನು ತಿಳಿಸಬೇಕು. ಅದನ್ನು ತಿಳಿಯದೆ ದುಡ್ಡನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಬೆಟ್ಟದ ತಪ್ಪಲಿನಲ್ಲಿದ್ದರೆ ಅಂಥ ಜಮೀನುಗಳಿಗಾಗಿ ದುಡ್ಡು ಕೊಡುವುದಕ್ಕಾಗುತ್ತದೆಯೇ?

ಇನ್ನೊಂದು ವಿಷಯ. ಸರ್ಕಾರಕ್ಕೇನೋ 40,000 ಎಕರೆಗಳು ಬಂದವು; ಸಂತೋಷ. ಆದರೆ ಈ ಜಮೀನುಗಳು ಸ್ಕೂಲುಗಳು ಇರುವ ಕಡೆಯೇ ಸಿಕ್ಕಿವೆಯೋ ಅಥವಾ ಜಮೀನಿರುವ ಕಡೆಗೆ ಸ್ಕೂಲುಗಳು ಹೋಗಬೇಕೋ ಎಂಬುದನ್ನು ಬೇರೆ ನೋಡಬೇಕು. ಏಕೆಂದರೆ ಸ್ಕೂಲು ಒಂದು ಕಡೆ ಇದ್ದು, ಜಮೀನು ಒಂದು ಕಡೆ ಇದ್ದರೆ ವ್ಯವಸಾಯ ಮಾಡುವುದಕ್ಕಾಗುವುದಿಲ್ಲ. ಅತ್ತ ಕಡೆ ಬಿತ್ತನೆ ಹಾಕಿ ಬಂದು ಬಿಟ್ಟರೆ, ಮತ್ತೆ ಹೋಗುವುದರೊಳಗೆ ದನಗಳು ಎಲ್ಲವನ್ನೂ ತಿಂದು ಹಾಕಿ ಬಿಟ್ಟಿರುತ್ತವೆ. ವ್ಯವಸಾಯವೆನ್ನುವುದು $2 \times 2 = 4$ ಎಂದು ಗಣಿತದಲ್ಲಿ ಲೆಕ್ಕ ಹಾಕಿದಂತಲ್ಲ, ಮತ್ತು ವ್ಯವಸಾಯದ ವಿಷಯದಲ್ಲಿ ಪೀರಿಯಡ್ ಪ್ರಕಾರ ಲೆಕ್ಕ ಹಾಕಿಕೊಂಡು ಬೆಳೆಯುತ್ತೇವೆಂದರೆ ಆಗುವುದಿಲ್ಲ. ಆದ್ದರಿಂದ ಸ್ಕೂಲು ಒಂದು ಕಡೆ ಇದ್ದು ಆರು ಮೈಲಿ ಆಚೆ ಜಮೀನಿದ್ದರೆ, ಅಂಥ ಜಮೀನಿನ ವ್ಯವಸಾಯಕ್ಕೆ ಬಿತ್ತನೆ ಗೊಬ್ಬರಕ್ಕೆಂದು ದುಡ್ಡು ಕೊಡುವುದು ಸಾಧ್ಯವೇ ಎಂಬುದನ್ನು ನೋಡಬಹುದು. ಆದಕಾರಣ ಸರ್ಕಾರದವರು ಇಂಥ ಡಿಮ್ಯಾಂಡುಗಳನ್ನು ತರುವಾಗ ಇಷ್ಟೊಂದು ಬೇಜವಾಬ್ದಾರಿಯಿಂದ ತರಕೂಡದು. ಸರಿಯಾಗಿ ಅಂಕಿ ಅಂಶಗಳನ್ನು (data) ಕೊಟ್ಟು ನಮ್ಮ ಒಪ್ಪಿಗೆಯನ್ನು ಪಡೆಯಬೇಕು. ನಿಮಗೆ ಕಾಂಗ್ರೆಸ್ ಬಹುಮತವಿದೆ. ಯಾವ ರೀತಿಯಿದ್ದರೂ ಒಪ್ಪಿಗೆ ಪಡೆಯಬಹುದು. ಆದಗೂ ಅದು ಸರಿಯಲ್ಲ.

ಶ್ರೀ ಟಿ. ಸಿ. ಬಸಪ್ಪ (ತರೀಕೆರೆ).—ಸ್ವಾಮಿ, ವಿದ್ಯಾಭ್ಯಾಸದ ಭಾಗದಲ್ಲಿ ಪ್ರೈಮರಿ ಸ್ಕೂಲು ಕಟ್ಟಡಗಳಿಗಾಗಿ ಈ ಡಿಮ್ಯಾಂಡನ್ನು ನಮ್ಮ ಮುಂದಿಡುತ್ತಾ (3) ನೆಯ Explanatory noteನಲ್ಲಿ "Provision for the Construction of Primary School buildings was hithero made under "50 Civil works." It is since decided that construction of buildings may be taken by the Education Department through several agencies" ಎಂದು ಹೇಳಿದ್ದಾರೆ. ಈಗಿನ ಪರಿಸ್ಥಿತಿಯೊಳಗೆ ದೇಶಾಮುಳೆ ಹೆಚ್ಚು ಕಡಮೆ ನೂರರಲ್ಲಿ 50-60 ಪಾಠಶಾಲೆಗಳಿಗೆ ಕಟ್ಟಡಗಳಿಲ್ಲದೆ ಬಹಳ ತೊಂದರೆಯಾಗುತ್ತಿದೆ. ಪಿ. ಡಬ್ಲ್ಯು. ಡಿ. ಯವರು ಆಗಲಿ ಗ್ರಾಮಸ್ಥರಾಗಲಿ ಒಂದು ಸ್ಕೂಲು ಕಟ್ಟಡ ಕಟ್ಟಬೇಕಾದರೆ 10-20 ವರ್ಷಗಳಾದರೂ ಆಗುತ್ತಿಲ್ಲ. ಎಷ್ಟೋ ವೇಳೆ ಸ್ಕೂಲು

ಬಿಲ್ಡಿಂಗ್ ಕೊಟ್ಟರೆ ಅದನ್ನು ರಿಜಿಸ್ಟರ್ ಮಾಡಬೇಕಾದರೂ ಕೂಡ ಸ್ಟಾಂಪ್ ಡ್ಯೂಟಿ ಕೂಡ ಕೊಡಬೇಕಾಗುತ್ತದೆ. ಇದೆಲ್ಲಾ ಕಾರಣಗಳಿಂದ ಸ್ಕೂಲ್ಕು ಬಿಲ್ಡಿಂಗ್ ಕಟ್ಟುವುದು ಬಹಳ ತೊಂದರೆಯಾಗಿದೆ. ಈಗೇನೋ ಹೊಸದಾಗಿ ಭೂದಾನ ಎಂದು ಒಂದು ಹೊಸ ಪ್ರಯತ್ನ ನಡೆಸಿದ್ದಾರೆ. ಇದರಿಂದ ಅನುಕೂಲವಿದೆಯೋ ಇಲ್ಲವೋ ಗೊತ್ತಿಲ್ಲ. ಈಗ several agencies ಮುಂಖಾಂತರ ಕಟ್ಟಡಗಳನ್ನು ಕಟ್ಟಿಸುವುದಾಗಿ ಹೇಳಿದ್ದಾರೆ. ಯಾವ ಯಾವ ಇಲಾಖೆಗಳ ಮುಂಖಾಂತರ ಮಾಡಿಸುತ್ತಾರೆಂಬುದನ್ನು ತಿಳಿಸಬೇಕು. ಬಹುಶಃ ರೆವಿನ್ಯೂ ಡಿಪಾರ್ಟ್‌ಮೆಂಟ್ ಮೂಲಕ, ತಾಲ್ಲೂಕು ಬೋರ್ಡ್‌ಗಳ ಮೂಲಕ ಮಾಡಿಸಬಹುದು. ಈಗಂತೂ ಬಿಲ್ಡಿಂಗ್ ಆಗುವುದು ಬಹಳ ನಿಧಾನವಾಗಿದೆ. ಬೇಗ ಕಟ್ಟಡಗಳನ್ನು ಏರ್ಪಡಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಆದ್ದರಿಂದ, ಇದುವರೆಗೇನಾದರೂ ಪ್ರೈಮರಿ ಸ್ಕೂಲು ಕಟ್ಟುವ ಬಗ್ಗೆ ಹೊಸ ವಿಧಾನದ ಬಗ್ಗೆ ಸರ್ಕಾರಿ ಹುಕುಮು ಹೊರಡಿಸಿದ್ದಾರೆಯೇ, ದಯವಿಟ್ಟು ವಿವರಣೆ ಕೊಡಬೇಕೆಂದು ಹೇಳುತ್ತೇನೆ.

*ಶ್ರೀ ಟಿ. ಮರಿಯಪ್ಪ.—ಸ್ವಾಮಿ, ಈ ಹೊತ್ತು ನಮ್ಮ ಸರ್ಕಾರದವರು ದಾನವಾಗಿ ಪಡೆದಿರತಕ್ಕ ಜಮೀನುಗಳಲ್ಲಿ ವ್ಯವಸಾಯ ಮಾಡಿಸತಕ್ಕ ಬಗ್ಗೆ ಈಗ ಈ ಹಣವನ್ನು ಕೇಳಿದ್ದಾರೆ. ಆದರೆ ಇದೊಂದು ಹೊಸ ಬಾಬು. ಹೊಸದಾಗಿ ಹಣವನ್ನು ಖರ್ಚುಮಾಡಬೇಕಾಗಿದೆ. ಆದುದರಿಂದ ಹೀಗೆ ಈ ಬಾಬಿಗೆ ಹಣವನ್ನು ಕೊಡುವುದಕ್ಕೆ ಮುಂಚೆ ಈ ಸಭೆಯ ಮುಂದೆ ಇದರಲ್ಲಿ ಏನೇನು ಅಂಶಗಳು ಅಡಕವಾಗಿರುತ್ತವೆ, ಇದನ್ನು ಯಾವ ರೀತಿ ಕಾರ್ಯಗತ ಮಾಡುತ್ತಾರೆ, ಇದಕ್ಕೇನಾದರೂ ಒಂದು ನಿರ್ದಿಷ್ಟವಾದ ಯೋಜನೆಯನ್ನು ತಯಾರಿಸಿರುತ್ತಾರೆಯೇ ಎನ್ನತಕ್ಕಂಥ ವಿಷಯಗಳನ್ನೆಲ್ಲಾ ತಿಳಿಸಿ ಈ ಮೊಬಲಗನ್ನು ಕೇಳಿದ್ದರೆ ಚೆನ್ನಾಗಿತ್ತು. ಈಗ ಇದರ ವಿಚಾರಗಳೊಂದೂ ಗೊತ್ತಿಲ್ಲ. ಈ ಜಮೀನುಗಳನ್ನು ಯಾವರೀತಿ ಪಡೆದುಕೊಂಡಿದ್ದಾರೆ; ಯಾವ ರೀತಿಯಲ್ಲಿ ಈ ಭೂಮಿಗಳಲ್ಲಿ ವ್ಯವಸಾಯ ನಡೆಸಬೇಕೆಂದಿದ್ದಾರೆ; ಅಥವಾ ಈ ಜಮೀನುಗಳನ್ನೆಲ್ಲಾ ಗುತ್ತಿಗೆಗೋ ಅಥವಾ ವಾರಕ್ಕೋ ಕೊಡಬೇಕೆಂದಿದ್ದಾರೆಯೇ; ಅಥವಾ ಈ ಜಮೀನುಗಳ ವ್ಯವಸಾಯವನ್ನೆಲ್ಲಾ ಶಾಲೆಗಳ ಉಪಾಧ್ಯಾಯರೇ ನಡೆಸಬೇಕೆಂದು ಮಾಡಿದ್ದಾರೆಯೇ ; ಅಥವಾ ಉಪಾಧ್ಯಾಯರೂ ಹುಡುಗರೂ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆಯೇ, ಏನು ಯೋಜನೆ ಮಾಡಿದ್ದಾರೆ ಎಂಬ ಅಂಶಗಳನ್ನೆಲ್ಲಾ ವಿವರವಾಗಿ ಈ ಸಭೆಗೆ ತಿಳಿಸಿ, ಸಭೆಯ ಅಂಗೀಕಾರ ಪಡೆದು ಅನಂತರ ಈ ಡಿಮ್ಯಾಂಡ್ ಮನವಿಯನ್ನು ನಮ್ಮ ಮುಂದಿಟ್ಟಿದ್ದರೆ ಚೆನ್ನಾಗಿತ್ತೆಂದು ಹೇಳುತ್ತೇನೆ. ಹಾಗಿಲ್ಲದೆ ನಮ್ಮ ಮನಸ್ಸಿನಲ್ಲಿ ಯಾವಾಗ ಏನೋ ಒಂದು ದೈವಪ್ರೇರಣೆ ಆದಕೂಡಲೆ ಜಮೀನುಗಳನ್ನೆಲ್ಲಾ ಸಂಗ್ರಹ ಮಾಡಿ ಹೀಗೆ ಸರ್ಕಾರವೇ ಪೂರ್ತಿಯಾಗಿ ಕೆಲಸ ಕೈಗೊಳ್ಳಬೇಕೆಂದರೆ ಅದು ಬಹಳ ಕಷ್ಟವಾಗುತ್ತದೆ. ಈ ಭೂದಾನ ಚಳವಳಿಯನ್ನು ಮೊಟ್ಟಮೊದಲನೆಯದಾಗಿ ವಿನೋಬ ಭಾವೆಯವರು ಪ್ರಾರಂಭ ಮಾಡಿದರು. ಆದರೆ ಈ ಪದ ಬಹಳ ಪವಿತ್ರವಾದದ್ದು. ಉದ್ದೇಶವೂ ಕೂಡ ಅಷ್ಟೇ ಪವಿತ್ರವಾದದ್ದಾಗಿದೆ. ಇದಕ್ಕೆ ಕಾರಣವಾದರೂ ಇಷ್ಟೆ. ನಮ್ಮ ದೇಶದಲ್ಲಿ ಕೆಲವು ಜನರು ಈ ಜಮೀನುಗಳ ಸಂಪಾದನೆಯ ಆಸೆಗೆ ಪೂರ್ತಿಯಾಗಿ ಅಂಟಿಕೊಂಡಿರುವುದರಿಂದ ಅನೇಕರು ದೇಶದಲ್ಲಿ ಜಮೀನಿಲ್ಲದೆ ನಿರ್ಗತಿಕರಾಗುತ್ತಿರುವುದನ್ನು ತಡೆಗಟ್ಟಿ ಅದನ್ನು ಸರಿಪಡಿಸಬೇಕೆಂಬ ಒಂದು ಘನೋದ್ದೇಶದಿಂದ ವಿನೋಬ ಭಾವೆಯವರು ಈ ಕಾರ್ಯಕ್ಕೆ ಹೊರಟಿದ್ದಾರೆ. ಆದರೆ ಇತ್ತೀಚೆಗೆ ನಮ್ಮ ಮೈಸೂರಿನಲ್ಲೂ ನಮ್ಮ ಮುಖ್ಯಮಂತ್ರಿಗಳು ಭೂದಾನ ಎಂದು ಒಂದು ಕಾರ್ಯಕ್ರಮವನ್ನು ಜಾರಿಗೆ ತಂದಿದ್ದಾರೆ. ಆದರೆ ಈ ದಿವಸ ಜಮೀನಿನಲ್ಲಿ ವ್ಯವಸಾಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದ್ದರೆ ಮೊದಲು ಏನೇನು ಸಿದ್ಧತೆಗಳಿರಬೇಕು, ಹೇಗೆ ನಡೆಸಬೇಕು ಎನ್ನುವುದನ್ನೆಲ್ಲಾ ನಿರ್ಧರ ಮಾಡಿಕೊಳ್ಳಬೇಕು. ಆ ವಿಚಾರಗಳನ್ನೆಲ್ಲಾ ತಿಳಿಸಿದ್ದರೆ ಚೆನ್ನಾಗಿತ್ತು. ಆದರೆ ಈಗ ಐಟಂ ನಂಬರ್ ಒಂದರಲ್ಲಿ ಒಂದೂವರೆ ಲಕ್ಷ ರೂಪಾಯಿಗಳು ವ್ಯವಸಾಯಕ್ಕಾಗಿ ಬೇಕಾಗಿದೆಯೆಂದು ಕೇಳಿದ್ದಾರೆ. ಆದರೆ ನಮ್ಮ ಸಂಸ್ಥಾನದಲ್ಲಿ ಈ ದಿವಸ 15 ಸಾವಿರ ವಿದ್ಯಾ ಸಂಸ್ಥೆಗಳಿರುತ್ತವೆ. ಈ ಮೊಬಲಗನ್ನು ಈ ಎಲ್ಲಾ ಸಂಸ್ಥೆಗಳಿಗೂ ಹಂಚಿದರೆ ಪ್ರತಿಯೊಂದು ಸ್ಕೂಲಿಗೂ 10 ರೂಪಾಯಿಗಳು ದೊರೆಯುತ್ತವೆ. ಈ 10 ರೂಪಾಯಿ ಮೊಬಲಗಿನಲ್ಲಿ ಏನು ವ್ಯವಸಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಸಲಕರಣೆಗಳನ್ನು ಹೇಗೆ ಹೊಂದುವುದು ? ಸಾಮಾನ್ಯವಾಗಿ ಒಂದು ಗುದ್ದಲಿಗೆ 10 ರೂಪಾಯಿಗಳನ್ನು ಕೊಟ್ಟರೂ ಬರುವುದಿಲ್ಲ. ಇನ್ನು ಉಳಿದ ಉಪಕರಣಗಳಿಗೇನು ಮಾಡಬೇಕು ? ಪ್ರತಿಯೊಂದು ವಿದ್ಯಾ ಸಂಸ್ಥೆಯಲ್ಲೂ 50 ಜನಕ್ಕೆ ಕಡಮೆಯಾಗಿ ವಿದ್ಯಾರ್ಥಿಗಳಿರುವುದಿಲ್ಲ. ಈ ಒಂದು ಗುದ್ದಲಿಯನ್ನು ಯಾರು ಯಾರು ಹಂಚಿಕೊಳ್ಳುವುದು ? ಅಥವಾ ಎಲ್ಲರೂ ಒಟ್ಟಾಗಿ ಸೇರಿ ಈ ಒಂದು ಗುದ್ದಲಿಯಿಂದಲೇ ಕೆಲಸ ಮಾಡಬೇಕೇ? ಹೀಗಾದರೆ ಈ ಕೆಲಸ ನಡೆಯುತ್ತದೆಯೇ ? ಒಂದೊಂದು ಸಂಸ್ಥೆಗೂ 10 ರೂಪಾಯಿಗಳ ಪ್ರಕಾರ ಹಂಚಬೇಕಾದರೂ 15 ಸಾವಿರ ಸಂಸ್ಥೆಗಳಿಗೆ ಹಣ ಇನ್ನೂ ಜಾಸ್ತಿಯಾಗಿಯೇ ಬೇಕು. ಆದರೆ ಹೀಗೆ ವ್ಯವಸಾಯಕ್ಕೆ ಪ್ರಾರಂಭಿಸುವಾಗ ಆ ಜಮೀನುಗಳಾದರೂ ಸ್ಕೂಲಿನ ಪಕ್ಕದಲ್ಲೇ ಇದ್ದರೆ ಚೆನ್ನಾಗಿತ್ತು. ಹಾಗಿಲ್ಲದ ಪಕ್ಷದಲ್ಲಿ ವಿದ್ಯಾರ್ಥಿಗಳೂ ಮತ್ತು ಉಪಾಧ್ಯಾಯರುಗಳೂ ವಾಸಮಾಡತಕ್ಕ ಮನೆಗಳು ವ್ಯವಸಾಯ ಮಾಡತಕ್ಕ ಜಮೀನಿಗೆ ಅಕ್ಕಪಕ್ಕದಲ್ಲೇ ಇರಬೇಕಾದದ್ದು ಅತ್ಯಗತ್ಯ. ಹಾಗಿಲ್ಲದಿದ್ದರೆ ಇವರು ಇಟ್ಟ ಬೆಳೆಯನ್ನೆಲ್ಲಾ ಪೋಲಿ ದನಗಳೂ, ಕುರಿಗಳೂ, ಜನಗಳೂ ಕೆಡಿಸುತ್ತಾರೆ ; ಇವರ ಕಾಟ ಜಾಸ್ತಿಯಾಗಿ ಅದು ಕೈಸೇರುವುದಿಲ್ಲ. ಈ ಹೊತ್ತೂ ಸಹ ಗ್ರಾಮಾಂತರ ಪ್ರದೇಶಗಳಲ್ಲಿ ರೈತರ ಹೊಲಗಳಲ್ಲಿ ಅವರೇಕಾಯಿ, ಜೋಳದ ಕಡ್ಡಿ, ಇತ್ಯಾದಿಗಳನ್ನೆಲ್ಲಾ ಕದ್ದುಕೊಂಡು ಹೋಗುತ್ತಿದ್ದಾರೆ.

ಒಬ್ಬ ಸದಸ್ಯರು.—ಕೋತಿಗಳ ಕಾಟವೋ ?

ಶ್ರೀ ಟಿ. ಮರಿಯಪ್ಪ.—ಈ ಕೋತಿಗಳ ಕಾಟವೂ ಬೇರೆಯಿದೆ. ಹೀಗಾಗದೆ ಇರಲು ಆ ಜಮೀನುಗಳಿಗೆಲ್ಲಾ ಬೇಲಿ ಹಾಕಲು ಎಲ್ಲಿ ಹಣವನ್ನು ಒದಗಿಸಿದ್ದಾರೆ? ಇಷ್ಟೇ ಅಲ್ಲದೆ ಈ ವ್ಯವಸಾಯ ಉಪಕರಣಗಳನ್ನು ಇಡುವುದಕ್ಕೆ ಮತ್ತು ಎತ್ತು ಕರುಗಳನ್ನು ಕಟ್ಟುವುದಕ್ಕೆ ಸ್ಥಳವೆಲ್ಲಿದೆ? ಹಳ್ಳಿಗಳಲ್ಲಿ ದೇವಸ್ಥಾನಗಳಿಗೇ ಸರಿಯಾಗಿ ಒಂದು ಬೀಗವಿರುವುದಿಲ್ಲ; ಅಂಥವರಿಂದೇನು ಸಹಾಯ ದೊರಕೀತು ? ಆದುದರಿಂದ ಈ ಬಾಬಿಗೆ ಕನಿಷ್ಠ ಪಕ್ಷ ಒಂದು ಕೋಟಿ ರೂಪಾಯಿಗಳಾದರೂ ಬೇಕು. ಈ ದಿವಸ ಹಾಲಿ ಇರತಕ್ಕಂಥ ಪ್ರತಿಯೊಂದು ಪಾಠಶಾಲೆಗೂ ಒಂದೊಂದು ಬ್ಲಾಕ್ ಬೋರ್ಡ್, ಚಾಕ್ ಪೀಸ್ ಮತ್ತು ಡಸ್ಟರ್ ಇತ್ಯಾದಿ ಸಾಮಾನುಗಳು ಮತ್ತು ಹುಡುಗರು ಕುಳಿತುಕೊಳ್ಳಲು ಹಲಗೆಗಳು ಇಷ್ಟನ್ನೊದಗಿಸಬೇಕಾಗಿದ್ದರೆ ಇದಕ್ಕೆ ಒಂದು ಕೋಟಿ ರೂಪಾಯಿಗಳು ಬೇಕಾಗುತ್ತದೆ. ಕೆಲಕೆಲವು ಸಂಸ್ಥಾನಗಳಲ್ಲಿ ಈ ರೀತಿ ಪಾಠಶಾಲೆಗಳಲ್ಲಿ ವ್ಯವಸಾಯದ ಪದ್ಧತಿ

(ಶ್ರೀ ಟಿ. ಮರಿಯಪ್ಪ.)

ಇರುವುದಾಗಿ ಕೇಳುತ್ತಿದ್ದೇವೆ. ಆದರೆ ನಾನೊಂದಾವರ್ತಿ ಸಂಚಾರ ಹೋಗಿದಾಗ್ಗೆ ಒಂದು ಸಂಸ್ಥಾನದಲ್ಲಿ—ಈಗ ಅದರ ಹೆಸರನ್ನು ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ.—ಎಲ್ಲೆಲ್ಲೂ first class borchureಗಳು. "3,000 Primary Schools have been converted into basic schools. Every school has a patch of land." ಎಂದು ಹೇಳಿ ಹುಡುಗರಿಂದಲೇ ಎಲ್ಲ ವ್ಯವಸಾಯದ ಕೆಲಸಗಳನ್ನೂ ನಡೆಸಿಕೊಂಡು ಬರುತ್ತಿದ್ದೇವೆಂದು ಹೇಳಿದರು. ಆಗ ನಾನೂ ಮತ್ತು ನನ್ನ ಜೊತೆಯಲ್ಲಿದ್ದವರೆಲ್ಲರೂ ಏನೋ ಆ ರಾಷ್ಟ್ರ ಪಿತಾಮಹನ ಮೂಲ ಶಿಕ್ಷಣ ಪದ್ಧತಿಯನ್ನು ಜಾರಿಗೆ ಕೊಟ್ಟಿರುತ್ತಾರೆ; ಹೇಗಿರುತ್ತದೆಯೋ ನೋಡಿಕೊಂಡು ಬರೋಣವೆಂದು ಹೋಗಿ ನೋಡಿದರೆ ಅನೇಕ ಜಿಲ್ಲೆಗಳಲ್ಲಿ ಬೇರೆ ಬೇರೆ ಜನರಿಂದ ಬಹಳ ಕಷ್ಟಪಟ್ಟು ಜಮೀನುಗಳನ್ನೇನೋ ಸಂಪಾದನೆ ಮಾಡಿದ್ದಾರೆ. ಆ ಜಮೀನುಗಳಲ್ಲಿ ಬರಿ ಮುಳ್ಳು ಗಿಡಗಳಿದ್ದವು. ಆ ಪ್ರದೇಶದಲ್ಲಿ ಹಾಗೆ ಪಾಠಶಾಲೆಗಳಿಗೆ ಕೊಡಲಾಗಿದ್ದಂಥ ಜಮೀನೆಲ್ಲ ಪಾಠಶಾಲೆಗಳಿಗೆ ಪಕ್ಕದಲ್ಲೇ ಇದ್ದವು. ಹುಡುಗರ ವಾಸದ ಮನೆಗಳೂ ಸಹ ಹತ್ತಿರದಲ್ಲೇ ಇದ್ದವು. ಇಷ್ಟೆಲ್ಲಾ ಅನುಕೂಲತೆಗಳಿದ್ದರೂ ನೀವೇಕೆ ಈ ಜಮೀನುಗಳನ್ನು ವ್ಯವಸಾಯ ಮಾಡದೆ ಹಾಗೆಯೇ ಬಿಟ್ಟುಬಿಟ್ಟಿದ್ದೀರಿ ಎಂದು ಕೇಳಿದ್ದಕ್ಕೆ ಅವರು ನಾವಿನ್ನೂ ಸರ್ಕಾರಕ್ಕೆ ಸಲಕರಣೆಗಳಿಗಾಗಿ ಬರೆದಿದ್ದೇವೆ, ಅದಕ್ಕೆ ಹಣವಿನ್ನೂ ಮಂಜೂರಾಗಿಲ್ಲ ಎಂದು ಹೇಳಿದರು. ಹಾಗಾದರೆ ಹುಡುಗರೇನು ಮಾಡುತ್ತಾರೆ? ಉಪಾಧ್ಯಾಯರೇನು ಮಾಡುತ್ತಾರೆ? ಎಷ್ಟೋ ಕಡೆ ವ್ಯವಸಾಯ ಮಾಡಲು ಸಲಕರಣೆಗಳೇ ಇಲ್ಲದೆ ಅಲ್ಲಲ್ಲೇ ಕೆಲವು ಕಡೆ ಈ ಕಿಚನ್ ಗಾರ್ಡನ್‌ಗಳನ್ನು ಮಾಡಿದ್ದಾರೆ. ಈ ವಿಚಾರ ಹೀಗಿರುವಾಗ ಇಂಥ ಕೆಲಸಕ್ಕೆ ಕೈಹಾಕುವ ಮೊದಲು ಸರ್ಕಾರ ಆಳವಾಗಿ ಆಲೋಚನೆ ಮಾಡಬೇಕು. ಇದು ಬಹಳ ದೊಡ್ಡ ಸಮಸ್ಯೆ. ಸಾಮಾನ್ಯವಾಗಿ ಆಯಾ ಸ್ಕೂಲು ಪಕ್ಕಗಳಲ್ಲೇ ಜಮೀನನ್ನು ಪಡೆಯುವುದು ಬಹಳ ಅವಶ್ಯಕ. ಹಾಗೆ ಪಡೆದನಂತರ ಆ ಜಮೀನುಗಳ ಪಕ್ಕದಲ್ಲೇ ಹುಡುಗರೂ ಉಪಾಧ್ಯಾಯರೂ ಇರುವುದಕ್ಕೆ ವಾಸದ ಮನೆಗಳ ಏರ್ಪಾಡಾಗಬೇಕು. ಈ ಅಂಶಗಳನ್ನೇ ಶ್ರೀಮಾನ್ ವೀರಣ್ಣಗೌಡರೂ ಹೇಳಿರುತ್ತಾರೆ. ಬರಿ ಹಾಚ್‌ಪಾಚ್ ಕೆಲಸಗಳಿಂದ ಪ್ರಯೋಜನವಿಲ್ಲ. ಈ ಬಾಬಗೆ ಈಗ ಕೇಳಿರತಕ್ಕಂಥ ಒಂದೂವರೆ ಲಕ್ಷ ರೂಪಾಯಿಗಳು ಏತಕ್ಕೂ ಸಾಕಾಗುವುದಿಲ್ಲ. ಈ ಮೊಬಲಗು ಹುಡುಗರು ಕುಳಿತುಕೊಳ್ಳುವ ಹಲಗೆ, ಅವರ ಪಾಠಶಾಲೆಗಳಿಗೆಲ್ಲ ಬೀಗ ಇಷ್ಟಕ್ಕಾದರೆ ಸಾಕು. ಅಷ್ಟಕ್ಕೇ ಒಂದೂವರೆ ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಹೀಗಿರುವಾಗ ಈ ಬಾಬಿನ ಬಗ್ಗೆ ಎಲ್ಲ ವಿಚಾರಗಳನ್ನೂ ಕೂಲಂಕಷವಾಗಿ ಪರಿಶೀಲನೆ ಮಾಡಿ ಒಂದು ಖಚಿತವಾದ ಯೋಜನೆಯನ್ನು ಮಾಡಿಲ್ಲ. ಆ ರೀತಿ ಇದರ ಒಂದು ಪೂರ್ಣ ಚಿತ್ರವನ್ನು ತಯಾರಿಸಿ ಈ ಸಭೆಯ ಮುಂದಿಡಬೇಕಾಗಿತ್ತು. ಇದೊಂದು ಹೊಸ ಸರ್ವಿಸ್. ಇದನ್ನು ಈ ದಿವಸ ಹುರುಪಿನಿಂದ ಪ್ರಾರಂಭಿಸಿಬಿಟ್ಟು ಅನಂತರ ಮಧ್ಯದಲ್ಲಿ ಕೈಬಿಡುವುದಕ್ಕಾಗುವುದಿಲ್ಲ. ದುಡ್ಡು ವ್ಯಥಾ ವ್ಯಯವಾಗುತ್ತದೆ. ಪ್ರಾರಂಭಿಸುವಾಗ ಅರ್ಧ ಮಾಡಿ ಅರ್ಧ ಬಿಡುವುದಕ್ಕೂ ಸಾಧ್ಯವಿಲ್ಲ. ಹೀಗೆ ಎಲ್ಲಾ ಕಡೆಯೂ ಏಕ್‌ದಂ ಪ್ರಾರಂಭಿಸುವುದಕ್ಕೆ ಬದಲಾಗಿ ಮೊದಲು ನಾಲ್ಕು ಸ್ಕೂಲುಗಳಿಗೆ ಅಗತ್ಯವಾಗಿ ಬೇಕಾದ ಎಲ್ಲಾ ಸಲಕರಣೆಗಳನ್ನೂ ಒದಗಿಸಿಕೊಟ್ಟು ಅಲ್ಲಿ ಪ್ರಾರಂಭಿಸುವುದು ಒಳ್ಳೆಯದೆಂದು ಕಾಣುತ್ತದೆ. ಅಂದರೆ ಕೆಲವು ಸ್ಕೂಲುಗಳಲ್ಲಿ ಮಾತ್ರ ಪ್ರಾಯೋಗಿಕವಾಗಿ ಮಾಡತಕ್ಕದ್ದು ಉಚಿತವೆಂದು ಕಾಣುತ್ತದೆ. ಆದರೆ ಈಗ ಯಾವ ಅಂಶಗಳೂ ಕೂಡ ಇದರಿಂದ ನಮಗೆ ಖಚಿತವಾಗಿ ಕಾಣುತ್ತಿಲ್ಲ. ನಮ್ಮ ಕಾಲದಲ್ಲೇ ಅಗ್ರಿಕಲ್ಚರಲ್ ಅಪ್‌ಷನಲ್‌ಗೆ ಸಾಕಷ್ಟು ಉತ್ತೇಜನ ದೊರೆಯದೆ ಇದ್ದ ಕಾರಣ ಇದ್ದ ಮೂರು ನಾಲ್ಕು ವ್ಯವಸಾಯದ ಸ್ಕೂಲುಗಳನ್ನೇ ಮುಚ್ಚಬೇಕಾಗಿ ಬಂತು. ಈ ಬಾಬಿಗೆ ಸರ್ಕಾರದವರು 10 ಲಕ್ಷ ರೂಪಾಯಿಗಳನ್ನು ಬೇಕಾದರೂ ಕೇಳಲಿ, ಅದಕ್ಕೆ ನನ್ನ ಅಭ್ಯಂತರವೇನೂ ಇಲ್ಲ, ಕೊಡೋಣ. ಆದರೆ ಒಂದು ನಿರ್ದಿಷ್ಟವಾದ ಯೋಜನೆಯನ್ನು ನಮ್ಮ ಮುಂದಿಟ್ಟಿಲ್ಲ. ಅಗ್ರಿಕಲ್ಚರಲ್ ಪಾಠಶಾಲೆಗಳೂ ಇದ್ದು ಇದರ ಜೊತೆಗೆ ಮೂಲ ಶಿಕ್ಷಣವೂ ಇದ್ದರೆ ಆಗ ವರ್ಕ್ ಡೂಪ್ಲಿಕೇಟ್ ಆಗಬಹುದು ಆದರೆ ಈಗ ಅವರು ಕೇಳಿರುವ ಪ್ರಕಾರ 'charges for ploughing; purchase of seeds and manure.' ಇಷ್ಟಕ್ಕೆ ಒಂದೂವರೆ ಲಕ್ಷ ರೂಪಾಯಿಗಳು ಬೇಕೆಂದು ಹೇಳಿದ್ದಾರೆ. ಇದರಲ್ಲಿ ಎತ್ತುಗಳಿಗೆ ಹಣವನ್ನೊದಗಿಸಿಲ್ಲ. ಇವುಗಳಿಗೆ ಬದಲಾಗಿ ಆ ಹುಡುಗರನ್ನೇ ನೇಗಿಲಿಗೆ ಕಟ್ಟುತ್ತಾರೇನು? ಆದ್ದರಿಂದ ಉಳುಮೆ ಮಾಡಬೇಕಾಗಿದ್ದರೆ ಎತ್ತುಗಳು ಬೇಕು, ನೊಗ ಬೇಕು, ನೇಗಿಲುಗಳು ಬೇಕು. ಹೀಗೇ ಇನ್ನೂ ಎಷ್ಟೋ ಸಾಮಾನುಗಳು ಬೇಕಾಗುತ್ತವೆ. ಹಾಗೆ ಎತ್ತುಗಳನ್ನು ಕಟ್ಟಬೇಕಾದರೆ ಅವುಗಳಿಗೆ ಕೊಟ್ಟಿಗೆಗಳನ್ನು ಎಲ್ಲಿ ಮಾಡುತ್ತಾರೆ? ಈ ವಿಚಾರಗಳನ್ನೆಲ್ಲಾ ಮೊದಲೇ ಆಲೋಚನೆ ಮಾಡಿರಬೇಕು. ಇದಕ್ಕೆ ಹಣವನ್ನು ಅಪ್ರೋಪ್ರಿಯೇಟ್ ಮಾಡಿಬಿಟ್ಟರಾಯಿತು, ಅಂದರೆ ಕೆಲಸ ಆಗಲಿಲ್ಲ. ನಮಗೆ ಎಷ್ಟು ನುಂಗಲಿಕ್ಕೆ ಸಾಧ್ಯವೋ ಅಷ್ಟನ್ನು ನುಂಗೋಣ. ತಾವು ಮೊದಲು ಐದು ಸ್ಕೂಲುಗಳಲ್ಲಿ ಮಾಡಿ; ಅದಕ್ಕೆ ಒಪ್ಪೋಣ. ಇದನ್ನು ವಿದ್ಯಾ ಇಲಾಖೆಗೆ ವಹಿಸುವಾಗ ಈ ವಿಚಾರಗಳನ್ನೆಲ್ಲಾ ತಾವು ಕೂಲಂಕಷವಾಗಿ ವಿವರಿಸಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

[Mr. DEPUTY SPEAKER in the Chair.]

*ಶ್ರೀ ಎಸ್. ಗೋಪಾಲಗೌಡ (ಹೊಸನಗರ).—ಸ್ವಾಮಿ, ನನ್ನ ಖೋತಾ ನಿರ್ಣಯವು ಈ ರೀತಿಯಾಗಿದೆ:

> "To discuss the practical difficulties of bringing the lands donated by the various donors to the 'Bhoodan Movement' under plough and to show that the scheme would not fit into any Education Plan-frame and further to show that the money spent over this plan would be a waste."

ಕಳೆದ ಆರು ತಿಂಗಳೀಚೆಗೆ ಅಥವಾ ಹೋದ ಅಧಿವೇಶನದಿಂದೀಚೆಗೆ ನಡೆಸಿರತಕ್ಕ ಅನೇಕ ಮುಖ್ಯ ಘಟನೆಗಳಲ್ಲಿ ನಮ್ಮ ಮೈಸೂರು ಸಂಸ್ಥಾನಕ್ಕೆ ಸಂಬಂಧಿಸಿದಂತೆ ಮೊದಲನೆಯದು ಶ್ರೀಯುತ ಎಚ್. ಎಂ. ಚನ್ನಬಸಪ್ಪನವರು ಮಂತ್ರಿಗಳಾದುದು ಒಂದು; ಮತ್ತು ಅವರು ಈ ಭೂದಾನ ಚಳವಳಿಗೆ 30 ಎಕರೆ ಭೂಮಿಯನ್ನು ದಾನ ಕೊಟ್ಟಿದ್ದಾರೆ. ಇನ್ನು ಎರಡನೆಯದಾಗಿ, ನಮ್ಮ ಮೈಸೂರಿನಲ್ಲಿ ನಡೆದಿರತಕ್ಕಂಥ ಮುಖ್ಯ ಘಟನಾವಳಿಗಳಲ್ಲಿ ಈ 'ಭೂದಾನ-ವಿದ್ಯಾದಾನ' ಚಳವಳಿಯೆನ್ನುವುದು ಎರಡನೆಯದು. ಇದ್ದಕ್ಕಿದ್ದ ಹಾಗೆ ನಮ್ಮ

ಮುಖ್ಯ ಮಂತ್ರಿಗಳ ಮನಸ್ಸಿನಲ್ಲಿ ಒಂದು ಬಗೆ ಯೋಚನೆ ಬಂತು. ಆ ಕೂಡಲೇ ಅವರು ತಮ್ಮ ಚಿತ್ತಕ್ಕೆ ಬಂದಂತೆ ಈ ವಿದ್ಯಾದಾನ-ಭೂದಾನ ಚಳವಳಿಯನ್ನು ಪ್ರಾರಂಭಿಸಿರುತ್ತಾರೆ. ಈ ಚಳವಳಿ ಪ್ರಾರಂಭವಾದ ಕಾಲದಲ್ಲಿ ಕೆಲವು ವರ್ತಮಾನ ಪತ್ರಿಕೆಗಳು ಒಂದು ವಿಶೇಷ ಸಂಚಿಕೆಯನ್ನೇ ಈ ಬಗ್ಗೆ ಹೊರಡಿಸಿದ್ದವು. ಈ ಚಳವಳಿ ಯಶಸ್ವಿಯಾಗಿ ನಡೆದುಕೊಂಡು ಬರಲೆಂದು ಅದರಲ್ಲಿ ಬರೆದಿದ್ದರು. ಹೀಗೆ ಅನೇಕರು ಈ ವಿಚಾರದಲ್ಲಿ ಸಹಾಯ-ಸಹಾನುಭೂತಿಗಳನ್ನು ಸೂಚಿಸಿದ್ದಾರೆ. ಈ ಮೂಲ ತತ್ವದ ಬಗ್ಗೆ ಮಹಾತ್ಮ ಗಾಂಧಿಯವರಿಂದ ಮೊದಲು ವಿನೋಬ ಭಾವೆಯವರು ಇನ್ಸ್ಪೈರ್ ಆದರು. ನಮ್ಮ ನಾಡಿನಲ್ಲಿ ಇಂಥ ಆದರ್ಶ ಪ್ರಿಯರಿಗೆ ನಮ್ಮೆಲ್ಲರ ಬೆಂಬಲವನ್ನು ಕೊಡಬೇಕಾದದ್ದು ಅವಶ್ಯಕ ಮತ್ತು ನೀತಿಯುತವಾದದ್ದೂ ಆಗಿದೆ. ಮೊನ್ನೆ ತಾನೆ ವಿದ್ಯಾಸಂಸ್ಥೆಗಳ ವಿಚಾರವಾಗಿ ಮಾತನಾಡುತ್ತಿದ್ದಾಗ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ಜಮೀನುಗಳನ್ನು ದಾನವಾಗಿ ಪಡೆದುಕೊಂಡಿರತಕ್ಕ ವಿಚಾರವಾಗಿ ಭಾಷಣ ಮಾಡುತ್ತಾ ಒಂದು ಉದ್ದವಾದ ವ್ಯಾಖ್ಯಾನವನ್ನೇ ನೀಡಿದ್ದಾರೆ. ಅದಕ್ಕಾಗಿ ಈಗ ಎರಡು ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಕೇಳಿದ್ದಾರೆ. ಈ ಬಗ್ಗೆ ಅವರು ಏನು ಹೇಳಿದ್ದಾರೆ ಅಂದರೆ :

> "Here I am asking only Rs. 2 lakhs by way of advance to the Education Department for purposes of cultivation, seeds, manure, or it may be in the case of some land, some money is required for fencing all round." ಮುಂದೆ ಹೋಗುತ್ತಾ "I was not prepared to grant even this sum, but the Director of Public Instruction made out a very strong case. All that is wanted is only Rs. 2 lakhs, usable only in extreme cases for cultivating nearly 40 thousands and odd acres of land."

ಎಂದು ಹೇಳಿದ್ದಾರೆ. ಇದಕ್ಕೆ ನನ್ನ ಮೊಟ್ಟ ಮೊದಲನೆಯ ವಿರೋಧವೇನೆಂದರೆ—ಇವರಿಗೆ ದಾನ ರೂಪವಾಗಿ ದೊರೆತಿರತಕ್ಕ ಭೂಮಿ ವ್ಯವಸಾಯಕ್ಕೇ ಯೋಗ್ಯವಾದದ್ದಲ್ಲ ಎನ್ನುವುದು. ಇದರ ಜೊತೆಗೆ ಈಗ ಯಾರುಯಾರು ಭೂಮಿಯನ್ನು ದಾನವಾಗಿ ಕೊಟ್ಟಿದ್ದಾರೋ ಆಯಾ ಭೂಮಿ ಆಯಾ ಪಾಠಶಾಲೆಗಳಿಗೆ ಅಕ್ಕಪಕ್ಕದಲ್ಲಿಲ್ಲ. ನೀವೂ ಇನ್ನೂ ಈಗತಾನೆ ಆ ಇನಾಂ ರದ್ದಿಯಾತಿ ಮಸೂದೆಯನ್ನು ಜಾರಿಗೆ ತರುತ್ತಿದ್ದೀರಿ. ಆದರೆ ಅದನ್ನು ಕೂಡ ಇನ್ನೂ ಸಂಪೂರ್ಣವಾಗಿ ಜಾರಿಗೆ ತಂದಿಲ್ಲ. ಆದರೆ ಈ ದಿವಸ ಸರ್ಕಾರದವರು ಮಾಡಿದ್ದೇನೆಂದರೆ, ಈ ವಿಧವಾದದ್ದರಿಂದ ಭೂಮಿಗಳನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡ್ಡದರಿಂದ ಆ ಮೂಲಕ ಸರ್ಕಾರಕ್ಕೆ ಕಂದಾಯ ರೂಪದಲ್ಲಿ ಬರುತ್ತಿದ್ದಂಥ ಉತ್ಪತ್ತಿಗೆ ಖೋತಾ ಬೀಳುವಂತಾಯಿತು. ಇನ್ನು ಮೇಲೆ ಈ ಭೂಮಿಗಳ ಬಗ್ಗೆ ಯಾವ ಕಂದಾಯ-ಸೆಸ್ಸು ಇತ್ಯಾದಿಗಳನ್ನೂ ವಸೂಲ್ಮಾಡುವುದಿಲ್ಲವೆಂದು ತೋರುತ್ತದೆ. ಈಗ ದಾನವಾಗಿ ಕೊಟ್ಟಿರತಕ್ಕಂಥ ಜಮೀನುಗಳನ್ನೆಲ್ಲಾ ಯಾರ ಹೆಸರಿಗೆ ಬರೆದು ರಿಜಿಸ್ಟರು ಮಾಡಿ ಕೊಟ್ಟಿದ್ದಾರೆ ಎನ್ನತಕ್ಕ ಒಂದು ಲೀಗಲ್ ಪ್ರಶ್ನೆ ಬೇರೆ ಇದೆ. ಈಗ ಈ ಬೇಸಿಕ್ ಪ್ಯಾಟ್ರನ್ ರೀತಿ ರಾಮ ಕೃಷ್ಣಾಶ್ರಮ ಎಂದು ಒಂದು ಇದೆ. ಅಲ್ಲಿ ಒಂದು ಸ್ಕೂಲು, ಆಶ್ರಮ ಇತ್ಯಾದಿಗಳನ್ನೆಲ್ಲಾ ಮಾಡಿದ್ದಾರೆ. ಮಹಾತ್ಮ ಗಾಂಧೀಜಿಯವರು ಎಷ್ಟೋ ತತ್ವಗಳನ್ನು ಹೇಳಿದ್ದಾರೆ. ಎಲ್ಲಾ ಸರ್ಕಾರಗಳಿಗಿಂತಲೂ ನಮ್ಮ ಮೈಸೂರು ಸರ್ಕಾರವೇ ಆ ತತ್ವಗಳನ್ನು ಮೊದಲು ಜಾರಿಗೆ ತಂದದ್ದು ಎಂದು ಹೊಗಳಿಸಿಕೊಳ್ಳಬೇಕೆಂದು ಹೀಗೆ ಮಾಡಬಾರದು. ಆ ತತ್ವಗಳನ್ನು ಜಾರಿಗೆ ತರತಕ್ಕಂಥಾದ್ದು ಈ ರೀತಿಯಾಗಿ ಅಲ್ಲ. ಈಗ ಕೆಲವರು ಭೂಮಿಯನ್ನೇನೋ ದಾನಮಾಡಿಬಿಟ್ಟಿದ್ದಾರೆ. ಈಗಲೇ ಅಲ್ಲಿ ಮೊದಲಿಂದಲೂ ಈ ಸರ್ಕಾರಕ್ಕೆ ಹಣದ ಕೊರತೆ ಇದ್ದೇ ಇದೆ. ಭೂಮಿಗೇನೂ ಕೊರತೆಯಿರಲಿಲ್ಲ. ಆದರೆ ಈಗ ದಾನ ಮಾಡಿರತಕ್ಕ ಎಲ್ಲಾ ಜಮೀನುಗಳೂ ಮರಳಗಾಡುಗಳಿದ್ದಂಥ ಪ್ರದೇಶದಲ್ಲಿರುತ್ತವೆ. ಆ ಭೂಮಿಗಳನ್ನು ಇಟ್ಟುಕೊಂಡಿದ್ದರೆ ಅವುಗಳಿಂದೇನೂ ಪ್ರಯೋಜನವಿಲ್ಲ ಎನ್ನುವುದನ್ನು ತಿಳಿದುಕೊಂಡು ಅವರೂ ಸಹ ಸರ್ಕಾರದವರ ಕಾಟಕ್ಕೆ ಅವುಗಳನ್ನು ದಾನವಾಗಿ ಕೊಟ್ಟುಬಿಟ್ಟಿದ್ದಾರೆ. ಅವುಗಳನ್ನು ವ್ಯವಸಾಯ ಮಾಡಲು ಖಂಡಿತ ಆಗುವುದಿಲ್ಲ. ಈಗ ಅಲ್ಲಲ್ಲೇ ಇರತಕ್ಕ ಅಗ್ರಿಕಲ್ಚರಲ್ ಸ್ಕೂಲುಗಳೇ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅಲ್ಲೆಲ್ಲಾ ಅವರಿಗೆ ಸಾಕಾದಷ್ಟು ಶಿಬ್ಬಂದಿ-ಸಲಕರಣೆಗಳಿಲ್ಲದೆ ಪ್ರತಿಯೊಂದು ಪಾಠಶಾಲೆಯಲ್ಲೂ ವರ್ಕ್ ಸಫರ್ ಆಗುತ್ತಾ ಇದೆ. ಇದಕ್ಕಾಗಿ ತಾವು ಒಂದು ಪೂರ್ವಭಾವಿ ಯೋಜನೆಯನ್ನು ಸಿದ್ಧಗೊಳಿಸಬೇಕಾಗಿತ್ತು. ಈಗ ಸಂಪಾದಿಸಿದ ಜಮೀನಿನಲ್ಲಿ ಕಾಲೇಜುಗಳಿಗೆ ಎಷ್ಟಿರಬೇಕು, ಹೈಸ್ಕೂಲುಗಳಿಗೆಷ್ಟಿರಬೇಕು, ಮಿಡಲ್ ಸ್ಕೂಲುಗಳಿಗೆಷ್ಟಿರಬೇಕು ಮತ್ತು ಪ್ರೈಮರಿ ಪಾಠಶಾಲೆಗಳಿಗೆಷ್ಟಿರಬೇಕು ಅಥವಾ ಇದೆಲ್ಲಾ ಕೇವಲ ಕಾಲೇಜು ಮತ್ತು ಹೈಸ್ಕೂಲುಗಳಿಗೇ ಇರತಕ್ಕದ್ದೇ ಎನ್ನುವುದನ್ನೆಲ್ಲಾ ವಿವರವಾಗಿ ತಿಳಿಸಬೇಕಾಗಿತ್ತು. ಈ ಬಗ್ಗೆ ಒಂದು ಡ್ರಾಫ್ಟ್ ಪ್ಲಾನ್ ಕೂಡ ತಯಾರಾಗಿಲ್ಲ. ಹೀಗೆ ಈ ಕಾರ್ಯ ನಡೆಸಲು ಸಾಧ್ಯವೇ - ಇದು ಅಸಾಧ್ಯವೇ ಎನ್ನುವುದೊಂದನ್ನೂ ನೋಡದೆ ಈರೀತಿ ಏಕ್‌ದಂ ಮಾಡಿರತಕ್ಕದ್ದು ಖಂಡಿತ ಸಾಧುವಾದದ್ದಲ್ಲ. ನಮ್ಮ ಈಗಿನ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಶ್ರಮದಾನಕ್ಕೆ ಕೊರತೆಯಿರಬಹುದು. ಅವರು ವಿದ್ಯಾ ಮಂದಿರಗಳಲ್ಲಿ ವಿದ್ಯಾವಂತರಾಗಿ ಹೊರಗಡೆಗೆ ಬಂದಮೇಲೆ ಅವರು ತಮ್ಮ ಜೀವನೋಪಾಯಕ್ಕಾಗಿ ಯಾವುದಾದರೊಂದು ಉದ್ಯೋಗವನ್ನು ಸ್ವತಂತ್ರವಾಗಿ ಅವಲಂಬಿಸುವುದಕ್ಕೆ ಅಸಹಾಯಕರಾಗದಂತಿರಲಿ ಎನ್ನತಕ್ಕದ್ದೇನೋ ಬಹಳ ಸಾಧುವಾದುದ್ದೇ ಹೌದು. ಆದರೆ ಈ ಒಂದು ಏರ್ಪಾಡಿಗಾಗಿಯೇ ಭೂದಾನ ಮಾಡಿ-ವಿದ್ಯಾದಾನ ಮಾಡಿ,

4-30 P. M.

ಎಂದರೆ, ಈ ಸ್ಕೀಮು ಬಹಳ ದೂರ ಮುಂದುವರಿಯಲಾರದು ಮತ್ತು ನಾವು ಅನುಸರಿಸಬೇಕೆಂದಿರತಕ್ಕ ವಿದ್ಯಾಭ್ಯಾಸದ ಸುಧಾರಣೆಗೆ ಹೊಂದಿಕೊಳ್ಳುವುದಿಲ್ಲ. ಈಗ cultivation ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅದಕ್ಕೆ ಎರಡು ಲಕ್ಷ ರೂಪಾಯಿಗಳಷ್ಟು ಬೇಕು. ಅದಕ್ಕಾಗಿ Token grant 300 ರೂಪಾಯಿಗಳನ್ನು ಕೇಳಿದ್ದಾರೆ. ಇಷ್ಟೇ ಆಗುತ್ತದೆ ಎಂದು ಕೇಳಲಿಲ್ಲ. $1\frac{1}{3}$ ಲಕ್ಷ ರೂಪಾಯಿಗಳೆಂದು ಹೇಳುತ್ತಾರೆ. ಅವರ ಭಾಷಣದಲ್ಲಿ ಎರಡು ಲಕ್ಷ ರೂಪಾಯಿಗಳೆಂದು ಹೇಳುತ್ತಾರೆ. ಪೂರ್ತಿ ಖರ್ಚು ಮಾಡುವುದಿಲ್ಲ ಎಂದು ಹೇಳುತ್ತಾರೆ. ಇಷ್ಟು ಅಸಮಂಜಸವಾದ ರೀತಿಯಲ್ಲಿ ಯೋಜನಾಬದ್ಧವಾಗಿ ಕೆಲಸ ಮಾಡುವುದಕ್ಕೆ ನಿಂತಿರತಕ್ಕ ಕಾಲದಲ್ಲಿ ಅವರದೇ ಆದ ಸ್ಕೀಮುಗಳು fancy

(ಶ್ರೀ ಎಸ್. ಗೋಪಾಲಗೌಡ.)

schemes, fad schemeಗಳನ್ನು ಕಾರ್ಯರೂಪಕ್ಕೆ ತರುವುದು ಸರಿಯಲ್ಲ. ನನಗೂ ಅನೇಕ ಸ್ಕೀಮುಗಳು ತಲೆಯಲ್ಲಿದೆ. ಅವಕಾಶ ಸಿಕ್ಕಿದರೆ ಅವನ್ನೆಲ್ಲಾ experiment ಮಾಡುವುದಕ್ಕಾಗುವುದಿಲ್ಲ. At the cost of the poor people, poor country and poor exchequer, we cannot give vent to all our fancies and all our schemes. ಅದನ್ನು ಖಂಡಿತವಾಗಿ ತಿಳಿದುಕೊಂಡಿರಬೇಕು. ಒಂದು ಸಲ rational ಆಗಿ ಮಾಡುತ್ತಾರೆ. ಒಂದು ಸಲ emotional ಆಗಿ ಮಾಡುತ್ತಾರೆ. ಇವೆರಡಕ್ಕೂ ತಾಳ ಮೇಳವಿರಬೇಕು. ಬರೀ ಪ್ರಚಾರಕ್ಕಾಗಿ ಸ್ಕೀಮು ಮಾಡುವುದಾದರೆ ನನ್ನ ಅಭ್ಯಂತರವೇನೂ ಇಲ್ಲ. ಹಣ ಖರ್ಚು ಮಾಡುವುದಕ್ಕೆ ಅವರು ಮುಂದೆ ಹೊಣೆ ಆಗುತ್ತಾರೆ, ನಾಳೆ ಸರಕಾರದವರು ಜವಾಬು ಕೊಡಬೇಕಾಗುತ್ತದೆ, ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಜಿ. ರಾಮಚಂದ್ರರಾವ್ (ನ್ಯಾಯಾಂಗ ಮತ್ತು ವಿದ್ಯಾ ಇಲಾಖೆಯ ಮಂತ್ರಿಗಳು).—

ಸ್ವಾಮಿ, ಯಾವುದೇ ಒಂದು ಹೊಸ ಸ್ಕೀಮಾಗಲಿ ಒಂದು ವಿಧಾನವಾಗಲಿ ನಮ್ಮ ಮುಂದೆ ಬಂದರೆ ಅದು ಅಸ್ಪಷ್ಟವಾಗಿರುವುದರಿಂದ, ಅದರ ಬೆಳವಣಿಗೆ ನಮಗೆ ಕಾಣದೆ ಇರುವುದರಿಂದ, ಅನೇಕವಾಗಿ ಆಕ್ಷೇಪಣೆಗಳು ಬರುವುದು ಸಹಜ. ಈ ಭೂದಾನ ಚಳವಳಿ ಪ್ರಾರಂಭವಾದಾಗ ನಾಲ್ಕು ಸ್ಕೂಲುಗಳಿಗೆ ನಾಲ್ಕು ಎಕರೆ ಜಮೀನು ಬರುತ್ತದೆ ಎಂದು ಎಲ್ಲರೂ ತಿಳಿದುಕೊಂಡಿದ್ದರು. ಈಗ ಬಂದಿರುವಷ್ಟು ಬರುತ್ತದೆ ಎಂದು ನಾನೂ ತಿಳಿದುಕೊಂಡಿರಲಿಲ್ಲ ಎಂದು ಒಪ್ಪಿಕೊಳ್ಳುತ್ತೇನೆ. ಅದನ್ನು ಕಾರ್ಯಕ್ರಮಕ್ಕೆ ತೆಗೆದುಕೊಂಡು ಬಂದ ಮೇಲೆ ನೋಡಿದರೆ ಸುಮಾರು 35 ಸಾವಿರ ಎಕರೆ ಬಂದಿದೆ. ಸಾಮಾನ್ಯವಾಗಿ ಶೇಕಡ 40 ಭಾಗದ ಪ್ರೈಮರಿ, ಮಿಡಲ್, ಮತ್ತು ಹೈಸ್ಕೂಲುಗಳಿಗೆ ಜಮೀನು ಬಂದಿದೆ. ಈಗ ಅಷ್ಟು ಜಮೀನು ಏತಕ್ಕೆ ಬೇಕು ಎಂಬ ಪ್ರಶ್ನೆ ಬಂದಿದೆ. ನಮ್ಮ ದೇಶದಲ್ಲಿ ಈಗಿರತಕ್ಕ ವಿದ್ಯಾ ಪದ್ಧತಿ ಸರಿಯಾಗಿಲ್ಲ. ಮಹಾತ್ಮ ಗಾಂಧಿಯವರು ಹೇಳಿದ ಕ್ರಿಯಾತ್ಮಕ ಪದ್ಧತಿ basic education ಬೇಕು ಎನ್ನುವ ವಿಚಾರವನ್ನು ಚರ್ಚೆಮಾಡಿ ಸ್ಥಳೀಯ ಸರ್ಕಾರದವರೂ, ಕೇಂದ್ರ ಸರ್ಕಾರದವರೂ ಉಭಯತ್ರರೂ ಈ ಪಾಲಿಸಿಯನ್ನು ಒಪ್ಪಿಕೊಂಡುಬಿಟ್ಟಿದ್ದಾರೆ. ಕ್ರಿಯಾತ್ಮಕ ಪದ್ಧತಿಯ ವಿದ್ಯೆಯನ್ನು ದೊಡ್ಡ ದೊಡ್ಡ ಊರುಗಳಲ್ಲಿ ನಾವು ಮಾಡುವುದು ಸಾಧ್ಯವೇ ಎಂದು ನೋಡಬೇಕು. ನಮಗೆ ವ್ಯವಸಾಯವು National Industry ಎಂಬುದನ್ನು ಸರ್ವರೂ ಒಪ್ಪತಕ್ಕದ್ದು. ಅದರ ಸಂಬಂಧ ತಪ್ಪಿ ವಿದ್ಯಾರ್ಥಿಗಳು ಬೆಳೆದು ಕೊನೆಗೆ ಅವರು ಹಳ್ಳಿಗೆ ಹೋಗುವುದು ಬಹಳ ಕಷ್ಟ. ಅದು ಎಲ್ಲರಿಗೂ ಗೊತ್ತಿದೆ. ಅಷ್ಟೇ ಅಲ್ಲದೆ ವ್ಯವಸಾಯವನ್ನು ಪ್ರೋತ್ಸಾಹಿಸದಿದ್ದರೆ, ಸಾಕಾದಷ್ಟು ಬೆಳೆಯದಿದ್ದರೆ, ಅದರಲ್ಲೂ ಕೂಡ ಬಹಳ ಲುಕ್ಸಾನು ಆಗುವುದು ಗೊತ್ತಾಗುತ್ತದೆ. ಅದಕ್ಕೋಸ್ಕರ ನಾವು ಈ ಸಂಬಂಧದಲ್ಲಿ ಸ್ವತಂತ್ರವಾಗಿ ಇರಬೇಕು, ಚೆನ್ನಾಗಿ ಬೆಳೆಯಬೇಕು, ಈ ಭೂಮಿಯ ಪರಿಚಯವಾಗಬೇಕು ಎನ್ನುವ ಕ್ರಿಯಾತ್ಮಕ ವಿದ್ಯೆಯು ನಮ್ಮ ದೇಶದಲ್ಲ ವ್ಯಾಪಕವಾಗಬೇಕು. ಮಹಾತ್ಮ ಗಾಂಧಿಯವರು ಹೇಳಿದ ವಿದ್ಯೆಯ ಕ್ರಮದಲ್ಲಿ ಮುಂದುವರಿಯಬೇಕೆಂದು ಅನೇಕ ವಿದ್ಯಾಪರಿಣತರೂ ಕೇಂದ್ರದ ವಿದ್ಯಾ ಮಂತ್ರಿಗಳೂ ಹೇಳುತ್ತಾರೆ. ನಾವೂ ಕೂಡ ಅದನ್ನು ಸರಿ ಎಂದುಕೊಂಡಿದ್ದೇವೆ. ಆ ದಾರಿಯಲ್ಲಿ ಹೆಜ್ಜೆ ಇಡಬೇಕಾಗಿದೆ. ನಾವು ಈಗ ಭೂದಾನವನ್ನು ಪ್ರಾರಂಭ ಮಾಡಿದೆವು. ಸ್ಕೂಲುಗಳಿಗೆ ಆಯಾ ಸ್ಥಳಗಳಲ್ಲೇ ಜಮೀನು ಸಂಪಾದನೆ ಮಾಡಬೇಕಾಗಿದ್ದರೆ ಎಷ್ಟು ಖರ್ಚಾಗಬೇಕಾಗುತ್ತಿತ್ತು ಎಂಬುದನ್ನು ಆಲೋಚನೆ ಮಾಡಿ. ಕ್ರಿಯಾತ್ಮಕ ವಿದ್ಯೆಯನ್ನು ಒಪ್ಪಿಕೊಂಡ ಮೇಲೆ ಅದಕ್ಕೆ ಬೇಕಾದ ಜಮೀನುಗಳನ್ನು ಸ್ಥಳದಲ್ಲಿ ಒದಗಿಸಲೇಬೇಕು. ಆದ್ದರಿಂದ ಸರಕಾರದಲ್ಲಿ ದುಡ್ಡು ಇಲ್ಲದೇ ಇರುವಾಗ ಕ್ರಿಯಾತ್ಮಕ ವಿದ್ಯೆಯನ್ನು ಹರಡಬೇಕಾಗಿರತಕ್ಕ ಜವಾಬ್ದಾರಿ, ಕರ್ತವ್ಯ ಸರಕಾರದ ಮೇಲಿದ್ದುದರಿಂದ ಇದನ್ನು ಕಾರ್ಯಗತ ಮಾಡಬೇಕಾದರೆ ಸಾರ್ವಜನಿಕರ ಸಹಾಯ ಪಡೆಯುವುದು ಮುಖ್ಯ. ಸಾರ್ವಜನಿಕರು ಕ್ರಿಯಾತ್ಮಕ ವಿದ್ಯೆಯಲ್ಲಿ ಆಸಕ್ತಿ ತೋರಿಸಿದುದು ನ್ಯಾಯವಾದುದು. ಇದು ನಮ್ಮ ದೇಶದಲ್ಲಿ ಆಗಬೇಕಾದುದು ಅಗತ್ಯ. ಮುಂದಿನ ಜನಾಂಗಕ್ಕೆ ಸಮರ್ಪಕವಾಗಿ ವಿದ್ಯೆಯನ್ನು ಕಲಿಸುವುದಕ್ಕೆ ಇದು ಒಂದು ಮುಖ್ಯ ಅಂಗವೆಂದು ಅರಿತು ಮಹಾಜನರು ನಮಗೆ ಸಹಾಯ ಮಾಡಿರುವುದನ್ನು ನಾವು ಮರೆಯಬಾರದು. ನಾವು ಒಪ್ಪಿರತಕ್ಕ educational policyಗೆ ಸಾರ್ವಜನಿಕರು ಕೊಟ್ಟಿರತಕ್ಕ ಬೆಂಬಲಕ್ಕೆ ನಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇವೆ. ಈಗ ಶೇಕಡ 40 ಭಾಗ ಆಗಿದೆ. ಆದರಲ್ಲಿ ಒಂದೆರಡು ಡಿಸ್ಟ್ರಿಕ್ಟುಗಳಲ್ಲಿ ಪ್ರವಾಸ ಮಾಡಿದ್ದೇನೆ. ಕೆಲವು ಕಡೆ ಉಪಯೋಗ ಇಲ್ಲದೇ ಇರುವ ಜಮೀನು ಇರಬಹುದು. ನನ್ನ ಅಂದಾಜಿಗೋಸ್ಕರ ಅಧಿಕಾರಿಗಳ ಜೊತೆಯಲ್ಲಿ ಕುಳಿತು ನೋಡಿದ್ದೇನೆ. ಸುಮಾರು ಶೇಕಡ ಹತ್ತು ಭಾಗ ಉಪಯೋಗವಿಲ್ಲದೆ ಇದ್ದುದೂ ಇರಬಹುದು. ಅತಿ ಹೆಚ್ಚಾಗಿ ಬೆಲೆ ಬಾಳತಕ್ಕದ್ದು ಬಂದಿರುವುದು ಶೇಕಡ 10 ಭಾಗ. ಸರ್ವಸಾಮಾನ್ಯವಾಗಿರುವುದು ಸುಮಾರು ಶೇಕಡ 60 ಅಥವಾ 70 ಭಾಗ ಇದೆ. ಆಯಾ ಅಧಿಕಾರಿಗಳು, ಸಾರ್ವಜನಿಕರು ಕೂತುಕೊಂಡು ನೋಡಿದ್ದರಲ್ಲಿ, ಹಾಸನ ಜಿಲ್ಲೆಯಲ್ಲಿ, ಮಂಡ್ಯ ಜಿಲ್ಲೆಯಲ್ಲಿ ನಾಲ್ಕೈದು ಲಕ್ಷ ರೂಪಾಯಿಗಳು ಬೆಲೆ ಬಾಳತಕ್ಕ ಜಮೀನು ಇದೆ. ಒಟ್ಟಿಗೆ 50-60 ಲಕ್ಷ ರೂಪಾಯಿಗಳು ಬೆಲೆಬಾಳತಕ್ಕ 30 ಸಾವಿರ ಎಕರೆ ಆಸ್ತಿ ಸಾರ್ವಜನಿಕರು ಕ್ರಿಯಾತ್ಮಕ ವಿದ್ಯೆಗೆ ಕೊಟ್ಟಿರತಕ್ಕದ್ದನ್ನು ಮೆಚ್ಚಬೇಕಾಗುತ್ತದೆ. ಇದನ್ನು ರೂಢಿಸಬೇಕು. ಸಾರ್ವಜನಿಕರು ಬಂದು ಬೆಂಬಲ ಕೊಟ್ಟು ಈ ಚಳವಳಿಯನ್ನು ಮುಂದುವರಿಸಿ ಎಂದು ಹೇಳಿದ್ದಾರೆ. ನಾವು ಇದನ್ನು ರೂಢಿಸಬೇಕಾದದ್ದು ನಮ್ಮ ಕರ್ತವ್ಯ. This must be on a self-supporting basis. ನಾವು ಒಂದು ವೇಳೆ ಜಮೀನಿಗೆ ಖರ್ಚು ಮಾಡಿದರೂ ಅದನ್ನು ಭರ್ತಿ ಮಾಡತಕ್ಕ ನೀತಿಗೆ ಹೋಗಬೇಕೇ ಹೊರತು ಅದಕ್ಕೆ ಸರ್ಕಾರದ ಬೊಕ್ಕಸದಿಂದ ಹಣ ಕೊಟ್ಟುಕೊಂಡು ಬರತಕ್ಕದ್ದು ಆಗಬಾರದು ಎಂಬುದೇ ಸರಕಾರದ ನೀತಿ. ಅದನ್ನು ಹೇಗೆ ಮಾಡುತ್ತೇವೆ ಎಂಬ ಪ್ರಶ್ನೆ ಸಹಜವಾದುದು. ಯಾವ ಯಾವ ಮಹನೀಯರು ಗ್ರಾಮದಲ್ಲಿ ಜಮೀನು ಕೊಟ್ಟಿದ್ದಾರೋ ಮತ್ತು ಇದರಲ್ಲಿ ಉಪಾಧ್ಯಾಯರಿಗೆ ಅನುಕೂಲವಾಗತಕ್ಕ ಭಾಗ ಇದೆಯೋ ಅಂತಹ ಉಪಾಧ್ಯಾಯರಿಗೆ ದಾನಿಗಳು ಮತ್ತು ಊರಿನ ಮುಖಂಡರು ಅದರ ಸಾಗುವಳಿಗೆ ಸಹಾಯಮಾಡಬೇಕು ಎಂದು ನಾವು ಈಗಾಗಲೇ ಪ್ರತಿಪಾದನೆ ಮಾಡಿದ್ದೇವೆ. 4 ಅಥವಾ 5 ಎಕರೆಯಮೇಲೆ ನಮ್ಮ ಗ್ರಾಮಸ್ಥರು ಉದಾರಭಾವದಿಂದ ಜಮೀನನ್ನು ಕೊಟ್ಟಿರುವುದಲ್ಲದೆ ಗೊಬ್ಬರ, ಬೀಜ, ಸಲಕರಣೆಗಳನ್ನೂ ಮಾಡಿಕೊಡುತ್ತೇವೆ ಎಂದು ಮುಂದೆ ಬಂದಿರುವ ಅನೇಕರು ಇದ್ದಾರೆ. ಈ ನಿರಾಶೆ ಭಾವನೆ ತಮಗೆ ಏಕೆಯೆಂದು

ಕೇಳುತ್ತೇನೆ. 50 ಲಕ್ಷ ರೂಪಾಯಿಗಳು ಬಂದಿರುವುದು ನಿರಾಶೆಯನ್ನು ಸೂಚಿಸುತ್ತದೆಯೇ ? ನಿರಾಶೆ ಬೇಡ ಎಂದು ಸಾರ್ವಜನಿಕರು ಅಭಯಕೊಟ್ಟಿದ್ದಾರೆ. ದೊಡ್ಡ ಪ್ರಯತ್ನದ ಸಮಯದಲ್ಲಿ ಸಾರ್ವಜನಿಕರು ಇಷ್ಟು ಮುಂದೆ ಬಂದು ಸಹಾಯ ಮಾಡಬೇಕಾಗಿದ್ದರೆ ಅದು ತಮ್ಮ ಮಕ್ಕಳಿಗೋಸ್ಕರ, ಸರಿಯಾದ ವಿದ್ಯೆಗೋಸ್ಕರ. ಅವರು ವಾಗ್ದಾನ ಕೊಟ್ಟಿರುವುದರಲ್ಲಿ ನಾವು ಏತಕ್ಕೆ ಅಪನಂಬಿಕೆ ಪಡಬೇಕು ? ಆದ್ದರಿಂದ ಅದರಲ್ಲಿ ಪೂರ್ಣ ನಂಬಿಕೆಯಿಟ್ಟು ಮುಂದೆ ಹೋಗಬೇಕು. ಸಾಮಾನ್ಯವಾಗಿ ಒಂದು ಗ್ರಾಮದಲ್ಲಿ ಬೇಲಿ ಹಾಕಬೇಕಾದರೆ wire fencing ಇಲ್ಲವೇ green fencing ಹಾಕಬೇಕು. ದೊಡ್ಡ compound ಗೋಡೆ ಕಟ್ಟಬೇಕಾದರೆ ದುಡ್ಡು ಇಲ್ಲ. Wire fencingಗೆ ಹೆಚ್ಚಾಗಿ ಖರ್ಚಾಗುತ್ತದೆ. Green fencing ಹಾಕಿದರೆ ಎರಡು ವರ್ಷದಲ್ಲಿ ಬೆಳೆದು ಬರುತ್ತದೆ ಹುಡುಗರು ಅಲ್ಲೇ ಇರುವಾಗ ಅವರ ಶಾಲೆಗೆ ಸೇರಿರತಕ್ಕ ಜಮೀನಿಗೆ ಈ ವರ್ಷ ಬೇಲಿಹಾಕಿದರೆ ಅದು ಮುಂದಿನ ವರ್ಷ ಬೆಳೆದು ಅದರ ಮುಂದಿನ ವರ್ಷ ಸರಿಹೋಗುತ್ತದೆ. ಆದ್ದರಿಂದ ಆಶಾಭಂಗವಾಗುವ ನಿರೀಕ್ಷಣೆ ಮಾಡುವುದು ಸರಿಯಲ್ಲ. ಇದುವರೆಗೆ ಆಗಿಲ್ಲ. ನಮಗೆ ಪೂರ್ಣವಾದ ಆಶೆ ಮತ್ತು ಭರವಸೆ ಇದೆ. ಅದೇ ರೀತಿ 4 ಎಕರೆ ಜಮೀನಿಗೆ ಭತ್ತ ಹಾಕಬೇಕೆಂದರೆ ಇವೊತ್ತಿನ ಅಂದಾಜಿನಲ್ಲಿ 15-20 ಸೇರು ಭತ್ತ ಸಾಕು. ಅದನ್ನು ಯಾವ ಗ್ರಾಮಸ್ಥರು ಕೊಡುವುದಿಲ್ಲ ? ತಾವು ಹೇಳಿ. ಯಾರಾದರೂ ಕೇಳಿದರೆ ಬೀಜ ಕೊಡುತ್ತಾರೆ ಎಂದ ಹೇಳುತ್ತೇನೆ. ಮುಖ್ಯವಾಗಿ ಒಂದು ವಿಷಯ ತಮ್ಮಲ್ಲಿ ಬಿಚ್ಚಿ ಹೇಳುವುದಾದರೆ, ಯಾವುದೇ ಸ್ಕೂಲಿನ ಜಮೀನು ಸರಿಯಾಗಿ ಬರಬೇಕಾದರೆ ಅದು ಆಸ್ಕೂಲಿನ ಹೆಡ್ ಮಾಸ್ಟರ್ ಮತ್ತು ಉಪಾಧ್ಯಾಯರ ಕೈಯಲ್ಲಿದೆ. ಅವರು ಯೋಗ್ಯರಾಗಿ ಕೆಲಸ ಮಾಡುತ್ತಾರೆಂದು ನಮಗೆ ಭರವಸೆಯಿದೆ. ಅಲ್ಲದೆ ಅವರಿಗೆ ಸ್ವಾರ್ಥವೂ ಸ್ವಲ್ಪ ಇರುವುದರಿಂದ ಚೆನ್ನಾಗಿ ಕೆಲಸ ಮಾಡುತ್ತಾರೆ. ಶಾಲೆಯ ಹೆಡ್‌ಮಾಸ್ಟರಿಗೂ ಪಾಠ ಹೇಳುವ ಬಡ ಉಪಾಧ್ಯಾಯರಿಗೂ ಕೊಡಬೇಕೆಂದು ಕೇಳಿದರೆ ಯಾರೂ ಇಲ್ಲವೆಂದು ಹೇಳುವುದಿಲ್ಲ, ಕೊಡುತ್ತಾರೆ. ಇನ್ನು ಹಣ ಮುಂಗಡವಾಗಿ ಏಕೆ ಬೇಕೆಂಬ ಪ್ರಶ್ನೆ ಬರುತ್ತದೆ. ಅಕಸ್ಮಾತ್ ಏನಾದರೂ ಕೊಂಡುಕೊಳ್ಳಬೇಕಾದರೆ, ಈ ಕೆಲಸ ನಾಲ್ಕಾರು ಸ್ಥಳಗಳಲ್ಲಿ ನಡೆಯುವುದರಿಂದ, ಅನುಕೂಲವಾಗಲೆಂದು ಮುಂಗಡವಾಗಿ ಕೊಟ್ಟಿದ್ದೇವೆ. ಬರತಕ್ಕ ಹಣದಿಂದ ಅದನ್ನು ವಾಪಸು ತೆಗೆದುಕೊಳ್ಳುತ್ತೇವೆ. ಸ್ಕೂಲಿನಲ್ಲಿ ಹಣ ಸಾಲ ಸಿಕ್ಕುವುದಿಲ್ಲವಾದ್ದರಿಂದ ಕ್ಷಿಪ್ರವಾಗಿ ಸ್ವಲ್ಪ ಹಣವಿರಲೆಂದು ಸಾಲವಾಗಿ ಕೊಟ್ಟಿದ್ದೇವೆ. ಪೂರ್ಣವಾಗಿ ಕಾರ್ಯಕ್ರಮ ನಡೆದಿದೆ, ಇದಕ್ಕೆ ಪೂರ್ಣಬೆಂಬಲ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ನಾನು ಇನ್ನು ಹೆಚ್ಚು ಹೇಳಬೇಕಾಗಿಲ್ಲ.

ಪ್ರೈಮರಿ ಸ್ಕೂಲು ಕಟ್ಟಡದ ವಿಷಯ. Cheap designs ಮಾಡಲೆಂದು, ಈಗ ಖರ್ಚಾಗುವುದರ ಅರ್ಧ ಖರ್ಚಿನಲ್ಲಿ ಕಟ್ಟಡವಾಗಬೇಕೆಂದು ಮಾಡಿದ್ದೇವೆ. ಇದರಿಂದ ಅಷ್ಟೇ ಹಣದಲ್ಲಿ ಎರಡರಷ್ಟು ಸ್ಕೂಲು ಕಟ್ಟಡಗಳಾಗುತ್ತವೆ. ಈ ಕೆಲಸ ಕೊನೆಯ ಘಟ್ಟದಲ್ಲಿದೆ. ಈ ಯೋಜನೆಯ ಪ್ರಕಾರ ಹೆಚ್ಚು ಸ್ಕೂಲು ಕಟ್ಟಡಗಳನ್ನು ಮಾಡಬೇಕೆಂಬ ನಿರ್ಧಾರಕ್ಕೆ ಬಂದಿದ್ದಾರೆ. ನ್ಯೂ ಟೈಪ್ ಸ್ಕೂಲುಗಳು ಕಡಮೆ ಖರ್ಚಿನಲ್ಲಿ ಆಗಿದ್ದರೂ ಮೂವತ್ತು ವರ್ಷ ಬರುತ್ತವೆ. ಈಗಿನ ಪೀಳಿಗೆಗೆ ಸಾಕಾಗುತ್ತವೆ. ತ್ವರಿತ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಹೀಗೆ ಸಮರ್ಪಕವಾಗಿ ಕೆಲಸ ನಡೆಯುತ್ತಿರುವುದರಿಂದ ಈ ಖೋತಾ ನಿರ್ಣಯವನ್ನು ವಾಪಸು ಪಡೆಯಬೇಕೆಂದು ಪ್ರಾರ್ಥಿಸುತ್ತೇನೆ.

Mr. DEPUTY SPEAKER.—The question is :

"That a further sum not exceeding Rs. 300 be granted to the Government to defray the charges which will come in course of payment during the year ending 31st day of March 1956, in respect of 'Education'."

The Motion was adopted.

DEMAND No. 20—PUBLIC HEALTH.

39. PUBLIC HEALTH.

Mr. DEPUTY SPEAKER.—The question is :

"That a further sum not exceeding Rs. 5,05,800 be granted to the Government to defray the charges which will come in course of payment during the year ending 31st day of March 1956, in respect of 'Public Health'."

The Motion was adopted.

DEMAND No. 21—AGRICULTURE.

40. AGRICULTURE (EXCEPT BOTANICAL AND OTHER PUBLIC GARDENS).

Mr. DEPUTY SPEAKER.—Motion moved :

"That a further sum not exceeding Rs. 13,00,000 be granted to the Government to defray the charges which will come in course of payment during the year ending 31st day of March 1956, in respect of 'Agriculture (Except Botanical and other Public Gardens)'."

Cut motions Nos. 43, 44, 45, 46 and 47 are allowed.

* ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ. ನರಸೀಪುರ).—ಸ್ವಾಮಿ, 21ನೆಯ ಡಿಮ್ಯಾಂಡಿನಲ್ಲಿ 13ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಸರ್ಕಾರದವರು ಕೇಳಿದ್ದಾರೆ. 'ರೈತರಿಗೆ ಗೊಬ್ಬರವನ್ನು ರಿಯಾಯಿತಿ ದರದಲ್ಲಿ 1943ನೆಯ ಇಸವಿಯಿಂದ ಮಾರಿದ್ದೇವೆ, ಆ ರಿಯಾಯಿತಿ ದರದಲ್ಲಿ ಕೊಟ್ಟಿರತಕ್ಕ ಹಣವನ್ನು ಸರ್ಕಾ

(ಶ್ರೀ ಎಸ್. ಶ್ರೀನಿವಾಸಯ್ಯಂಗಾರ್.)

ರದವರು ಈಗ ಕಟ್ಟಿಕೊಡುವುದಕ್ಕೆ 13ಲಕ್ಷ ರೂಪಾಯಿ ಕೊಡಬೇಕು' ಎಂದು ಕೇಳುತ್ತಾರೆ. ಈ 13 ಲಕ್ಷ ರೂಪಾಯಿ ಖರ್ಚಲ್ಲ. ಇಂಗ್ಲೀಷಿನಲ್ಲಿ ಹೇಳುವುದಾದರೆ, 'This does not involve any cash outgoing and the Public Accounts Committee in their report on the accounts of 1950-51 have recommended that the advance amount must be cleared in respect of subsidies and other concessions' ಎಂದು ಹೇಳಿದ್ದಾರೆ. ಆದರೆ ನಾನೊಂದು ವಿಷಯವನ್ನು ಕೇಳಬೇಕೆಂದಿಚ್ಛಿಸುತ್ತೇನೆ. ಸಹಕಾರ ಸಂಸ್ಥೆಗಳಿಗೆ ಮತ್ತು ವ್ಯವಸಾಯ ಇಲಾಖೆಗೆ ಗೊಬ್ಬರ ವನ್ನ ಸರ್ಕಾರದವರು ಸರಬರಾಯಿ ಮಾಡಿದಾಗ ಈ ಗೊಬ್ಬರದ ಬೆಲೆಯನ್ನು ಇಲಾಖೆಗೆ ಅಡ್ವಾನ್ಸ್ ಎಂದು ಭಾವಿಸಿದ್ದರೆ? ಒಟ್ಟು ಈ ರೀತಿ ಅಡ್ವಾನ್ಸ್ ಬಿಟ್ಟಿರುವುದು ಸುಮಾರು ಎರಡೂವರೆ ಕೋಟಿ ರೂಪಾಯಿ. ಎಂದರೆ, ಆ ಇಲಾಖೆಯಿಂದ ಸರ್ಕಾರಕ್ಕೆ ಸಲ್ಲಬೇಕಾದ ಹಣ ಸುಮಾರು ಎರಡೂವರೆ ಕೋಟಿ ರೂಪಾಯಿ. ಇದು ವ್ಯವಸಾಯ ಇಲಾಖೆ ಮತ್ತು ಇತರ ಇಲಾಖೆಗಳಿಂದ ಬರಬೇಕಾದುದು. ಈಗ್ಗೆ ಮೂರುವರ್ಷಗಳ ಹಿಂದೆ ರೈತರಿಗೆ ಗೊಬ್ಬರವನ್ನು ಸರಬರಾಯಿ ಮಾಡಿರುವುದರಿಂದ ನಷ್ಟ ಸಂಭವಿಸಿತು, ಆದುದರಿಂದ ಐದು ಲಕ್ಷ ರೂಪಾಯಿ ಕೊಡಬೇಕೆಂದು ಕೇಳಿದರು. ಐದು ಲಕ್ಷ ರೂಪಾಯಿ ವಜಾ ಆಯಿತು. ಈ ವರ್ಷ ಒಂದು ಲಕ್ಷದ ಅರವತ್ತು ಸಾವಿರ ರೂಪಾಯಿ ಆದರೆ ಸಾಕು ಈ ನಷ್ಟವನ್ನೆಲ್ಲಾ ಸರಿದೂಗಿಸುತ್ತೇವೆ ಎಂದು ಹೇಳಿದರು ಬಡ್ಜೆಟ್ ಅಧಿವೇಶನದಲ್ಲಿ. ಈಗ ಸಪ್ಲಿಮೆಂಟರಿ ಬಡ್ಜೆಟ್ ಕಾಲದಲ್ಲಿ ಮತ್ತೆ ಹದಿಮೂರು ಲಕ್ಷ ರೂಪಾಯಿ ಬೇಕು ಆ ಬಿಲ್ಲುಗಳನ್ನು ಕೊಡುವುದಕ್ಕೆ ಎಂದು ಹೇಳುತ್ತಿದ್ದಾರೆ. ಹೀಗೆ ಹೇಳಿದಮೇಲೆ, ಒಟ್ಟು ಬಿಲ್ಲುಗಳನ್ನು ಕೊಡಬೇಕಾದುದು ಎಷ್ಟು ಬಾಕಿ ಇದೆ, ರೈತರಿಗೆ ರಿಯಾಯ್ತಿ ದರದಲ್ಲಿ ಕೊಟ್ಟಿರುವುದಕ್ಕೆ ಸಂಬಂಧಪಟ್ಟದ್ದು ಪಾವತಿ ಮಾಡಬೇಕಾದ ಹಣ ಒಟ್ಟು ಎಷ್ಟು ಎಂಬುದನ್ನು ಒಂದೇ ಸಾರಿ ಹೇಳಲಿ. ವರ್ಷವರ್ಷವೂ ಐದುಲಕ್ಷ, ಹತ್ತುಲಕ್ಷ, ಹೀಗೆ ವಜಾ ಮಾಡುತ್ತಾ ಬಂದರೆ ಹೇಗೆ? ರೈತರಿಗೆ ರಿಯಾಯಿತಿಮೇಲೆ ಕೊಟ್ಟ ಗೊಬ್ಬರದಬೆಲೆ ಎಷ್ಟು, ವಜಾಮಾಡಬೇಕಾದ ಮೊತ್ತ ಎಷ್ಟು ಎಂಬುದು ನಮಗೆ ಖಚಿತವಾಗಿ ತಿಳಿಯಬೇಡವೆ? ನನಗನ್ನಿಸುತ್ತದೆ, ಇದು ರೈತರಿಗೆ ತಲಪಿಲ್ಲ. ಯಾರೋ ಪ್ರಭಾವಶಾಲಿಗಳಾದ ವ್ಯಕ್ತಿಗಳು ರೈತರಿಗೆ ರಿಯಾಯಿತಿ ಕೊಟ್ಟಿದ್ದೇವೆಂದು ಹೇಳಿ ಬಿಲ್ಲನ್ನು ಸರ್ಕಾರಕ್ಕೆ ಕೊಟ್ಟು ಹಣ ಪಡೆಯುತ್ತಿದ್ದಾರೋ ಏನೋ ಎಂಬ ಅನುಮಾನವಿದೆ. ಏಕೆಂದರೆ, ಹತ್ತು ಹನ್ನೆರಡು ವರ್ಷಗಳಿಂದ ಬಿಲ್ಲನ್ನು ತೀರ್ಮಾನ ಮಾಡದೇ ಇರುವುದಿಲ್ಲ. 1943ನೆಯ ಇಸವಿಯಿಂದ 1955ರವರೆಗೆ ಬಿಲ್ಲನ್ನು ಪಾವತಿಮಾಡದೆ ಯಾರು ಹಾಗೆಯೇ ಇಟ್ಟಿರುತ್ತಾರೆ? ಈಗ ಈ ರಿಯಾಯಿತಿ ಇಲ್ಲ; ಆದುದರಿಂದ ಈಗ ಸರ್ಕಾರದವರು ಈ 13 ಲಕ್ಷ ರೂಪಾಯಿ ಕ್ಯಾಷ್ ಖರ್ಚಾಗುವುದಿಲ್ಲವೆಂದು ಹೇಳುವುದು ಸರಿಯಲ್ಲ. ನಮಗೆ ಬರಬೇಕಾದ ಹಣ 13 ಲಕ್ಷ ರೂಪಾಯಿ ಹೋಗಿದೆ. ಸಂಪೂರ್ಣವಾಗಿ ಈ ಹಣವನ್ನು ಕಳೆದುಕೊಳ್ಳುತ್ತೇವೆ. ಆದುದರಿಂದ ಸರ್ಕಾರದವರು ನಮಗೆ ವಿವರವಾಗಿ ಹೇಳಬೇಕು. ಇದನ್ನು ಅವರ ಬಾಯಿಂದ ಕೇಳಬೇಕೆಂಬ ಉದ್ದೇಶದಿಂದ ಈ ಕತ್ತರಿ ನಿರ್ಣಯವನ್ನು ಸಭೆಯ ಮುಂದಿಟ್ಟಿದ್ದೇನೆ.

*ಶ್ರೀ ಎಸ್. ಗೋಪಾಲಗೌಡ (ಸಾಗರ-ಹೊಸನಗರ).—ಸ್ವಾಮಿ, ವ್ಯವಸಾಯದ ಇಲಾಖೆ ಮತ್ತು ಆಹಾರ ಇಲಾಖೆಯಲ್ಲಿ ಏನು ವ್ಯವಹಾರ ನಡೆಯಿತೋ ಅದರ ಲೆಖ್ಖಗಳನ್ನು ತನಿಖೆಮಾಡಿ ವ್ಯವಹಾರವನ್ನು ಪೂರ್ತಿಮಾಡುವುದಕ್ಕಾಗಿ ದೊಡ್ಡ ಸಿಬ್ಬಂದಿಯನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಅದೇ ಆಹಾರ ಮತ್ತು ವ್ಯವಸಾಯ ಇಲಾಖೆ ಇದೆ. ಹಿಂದೆ ವ್ಯವಸಾಯ ಇಲಾಖೆಗೆ ಅದೊಂದು ಕಾಲ; ಗ್ರೋಮೋರ್ ಫುಡ್‌ಕಾಲ, ಗೊಬ್ಬರ ಮತ್ತು ಬೀಜವನ್ನು ರಿಯಾಯಿತಿ ದರದಲ್ಲಿ ಕೊಡುವ ಕಾಲವಿತ್ತು. ಅದು ದೇಶಕ್ಕೆ ಅನ್ನ ಕೊಟ್ಟು ರಕ್ಷಣೆ ಮಾಡುವ ಕಾಲವಾಗಿತ್ತು. ಈಗಲೂ ಕೆಲವರಿಗೆ ಆ ಕಾಲ ಹೋದುದು ತಪ್ಪೆಂಬ ಭಾವನೆ ಇರಬಹುದು, ದುಃಖವಿರಬಹುದು! ಸರ್ಕಾರದ ಉತ್ಸಾಹದಿಂದ ಆ ಕೆಲಸ ನಡೆದುಕೊಂಡು ಹೋಗಬೇಕಾಗಿತ್ತು. ಅಂಥ ಸಂದರ್ಭದಲ್ಲಿ ಕೆಲವರು ಆ ಅವಕಾಶವನ್ನು ದುರುಪಯೋಗಪಡಿಸಿಕೊಂಡು ಭಾರಿ ಹಣವನ್ನು ಆ ಇಲಾಖೆಗಳಲ್ಲಿದ್ದವರು ಗಳಿಸಿದರು. ಅಂಥ ಸಮಸ್ಯೆಗಳನ್ನು ಲಂಚ ನಿರೋಧ ಇಲಾಖೆಯವರು ಮತ್ತು ಇತರ ಅಧಿಕಾರಿಗಳು ಹೇಗೆ ಬಗೆಹರಿಸದೆ ಮುಚ್ಚಿಹಾಕಿದ್ದಾರೆಂಬುದೂ ಗೊತ್ತಿದೆ.

5 P.M.

ಅವನ್ನು ಫೈನಲ್ ಮಾಡಲಿಲ್ಲ ಮತ್ತು ಈಗಾಗಲೇ ತಮಗೆ ಗೊತ್ತಿರುವಹಾಗೆ ಹಿಂದೊಂದು ಸಲ 25 ಲಕ್ಷ ರೂಪಾಯಿಗಳನ್ನು Shortage and losses in Food and Agricultural Departments ಎಂದುಹೇಳಿ ಲೆಕ್ಕದಿಂದ ಹೊಡೆದುಹಾಕಿದೆವು. ಈಗ 13 ಲಕ್ಷ ರೂಪಾಯಿಗಳೆಂದು ಮತ್ತೆ ಬಂದಿದೆ. ಹೀಗೆ ಇಷ್ಟು ವರ್ಷಗಳಮೇಲೆ ಹದಿಮೂರು ಲಕ್ಷ ರೂಪಾಯಿ ಲೆಕ್ಕದಲ್ಲಿ ಖೋತಾ ಬಂದಿದೆಯೆಂದರೆ ಯಾರಾರ ಕೈಗೆ ಎಷ್ಟೆಷ್ಟು ಹೋಯಿತೆಂಬುದೇ ಗೊತ್ತಾಗಲಿಲ್ಲ. ಆದ್ದರಿಂದ ಸರ್ಕಾರದವರು ಈ ರೀತಿಯಾಗಿ ವ್ಯಾಪಾರ, ವ್ಯವಹಾರಗಳನ್ನು ಮಾಡಿ ಅನೇಕ ಲಕ್ಷ ರೂಪಾಯಿಗಳ ಖೋತಾ ತಂದು ಕೊನೆಗೆ ವಿಧಾನ ಸಭೆಯಮುಂದೆ ಹಣ ಕೇಳುವುದು ಸರಿಯಲ್ಲವೆಂದು ಹೇಳುತ್ತೇನೆ. ಕ್ರಮವರಿತು ಹಣಕಾಸಿನ ವಿಷಯದಲ್ಲಿ ಸರಿಯಾಗಿ ನಡೆದುಕೊಳ್ಳದೆ ಹೋದರೆ ಕೊನೆಗೆ ಯಾರಮೇಲೆ ಜವಾಬ್ದಾರಿ ಗೊತ್ತುಮಾಡುವುದೇ ಕಷ್ಟವಾಗಿ ಬಿಡುತ್ತದೆ. ಯಾರೋ ಒಬ್ಬರು ಆಫೀಸರು ಕೊಟ್ಟಿರುತ್ತಾರೆ. ಕೆಲವು ದಿನಗಳ ನಂತರ ಅವರು ಹೊರಟು ಹೋಗುತ್ತಾರೆ. ಕೊನೆಗೆ ನಷ್ಟ ಅಥವಾ ಖೋತಾ ಬಂದಿದ್ದರೆ ಯಾರನ್ನು ಕೇಳುವುದು? ಆದ್ದರಿಂದ ಸರ್ಕಾರದವರು ಈಗ ಖರ್ಚುಮಾಡಿರುವ ಮತ್ತು ಖರ್ಚಿಗೆ ಕೇಳುತ್ತಿರುವ ಹಣಕ್ಕೆ ಸರಿಯಾಗಿ ಸಮುಜಾಯಿಷಿ ಕೊಡಬೇಕೆಂದು ಕೇಳುತ್ತೇನೆ.

Mr. DEPUTY SPEAKER.—Now the Minister will reply.

Dr. R. NAGAN GOWDA (Minister for Agriculture).—Mr. Speaker, Sir, as was pointed by Sri S. Srinivasa Iyengar, there is no cash outgoing. This is merely an adjustment. Concessions were given almost ten or twelve years ago; manures and seeds were sold at half the price in some cases, at ¾ of the price in other cases.

The balance of 50 per cent of the cost in the original cost and 25 per cent of the cost in other cases were treated as advances. The question was raised whether the concessions have reached the cultivators. They have certainly reached the cultivators, because these materials were sold in some cases at half the price and in other cases at 75 per cent of the price. At that time the adjustment was not made because the T.A.D. had not sent intimation for the adjustment of these things as they had not been received in the Accountant-General's office. That is why; indeed this is not the only amount previous; to this, the entire amount that was claimed, the total value of the concession that was allowed, was to the extent of Rs. 38,00,00. Adjustments have already been made to the extent of about 25 lakhs of rupees. Now the mobile units have been sent there to look into these accounts and bills have been preferred. Now this is merely an adjustment and so I request that this be allowed.

Mr. DEPUTY SPEAKER.—The question is:

> "That a further sum not exceeding Rs. 1,300,000 be granted to the Government to defray the charges which will come in course of payment during the year ending 31st day of March 1956 in respect of 'Agriculture (Except Botanical and other Public Gardens)'".

The motion was adopted.

DEMAND NO. 23—Agriculture

40-A. Rural Development.

Mr. DEPUTY SPEAKER.—Motion moved:

> "That a further sum not exceeding Rs. 1,90,000 be granted to the Government to defray the charges which will come in course of payment during the year ending 31st day of March 195[illegible] in respect of 'Rural Development'".

ಶ್ರೀ ಎಂ. ಮಾದಯ್ಯ (ನಂಜನಗೂಡು ಅನುಸೂಚಿತ ಜಾತಿಗಳು).—ಸ್ವಾಮಿ, ಡಿಪ್ರೆಸ್ಡ್ ಕ್ಲಾಸ್‌ನವರ ಅಭಿವೃದ್ಧಿಯ ವಿಚಾರದಲ್ಲಿ ಈಗಿನ ಸರ್ಕಾರದ ನೀತಿಯಿಂದ ಬಹಳ ನಿರಾಶೆಯಾಗಿದೆ. ಅವರು ಸಾಧಿಸಿರತಕ್ಕ ಅಭಿವೃದ್ಧಿ ನಮ್ಮ ನಿರೀಕ್ಷೆಗಳಿಗೆ ಬಹಳ ಮಟ್ಟಿಗೆ ವಿರೋಧವಾಗಿದೆ. ಬಹಳ ಆಶೆ ಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದಂಥ ಈ ಸಭೆಯ ಪ್ರತಿನಿಧಿಗಳಿಗೆ ಹೆಚ್ಚಿನ ಅತೃಪ್ತಿಯುಂಟಾಗಿದೆಯೆಂದರೆ ತಪ್ಪಾಗಲಾರದು. ಕಾರಣ ಅವರ ಅಭಿವೃದ್ಧಿಗಾಗಿ ಯಾವುದಾದರೂ ಯೋಜನೆಯನ್ನು ತಯಾರಿಸಿ ಪಾಲಿಸಿ ಕಮಿಟಿಯನ್ನು ಕೇಳಿ ಇಂಡಿಯಾ ಸರ್ಕಾರದವರಿಗೆ ಶಿಫಾರಸು ಮಾಡಿ ಹಣ ಪಡೆಯುವ ಸಂದರ್ಭವಿರುವಾಗ ಅದಕ್ಕೆ ತಾವು ಏರ್ಪಾಡು ಮಾಡಲಿಲ್ಲ. ಇದು ಒಂದು. ಇನ್ನೊಂದು, ಬಡ್ಜೆಟ್ ಅಲಾಟ್‌ಮೆಂಟ್ ಮಾಡಿ, ನಮ್ಮ ಹಣದಿಂದ ಹಾಸ್ಟಲುಗಳನ್ನು ಕಟ್ಟಿ, ನಿಮ್ನ ತರಗತಿಯವರಿಗೆ ಹಾಸ್ಟಲುಗಳನ್ನು ಕೊಟ್ಟಿದ್ದೇವೆಂದು ಹೇಳಿದಂಥಾದ್ದನ್ನು ಈಗ ಜನರಲ್ ಹಾಸ್ಟಲುಗಳಾಗಿ ವಿನಿಯೋಗಮಾಡಿದರೆ ಎಷ್ಟು ಅನ್ಯಾಯಮಾಡಿಂತಾಯಿತು! ಇದು ಖಂಡಿತವಾಗಿ ನಮ್ಮ ಜನರಿಗೆ ಅನ್ಯಾಯವನ್ನೆಸಗಿದಂತಾಯಿತಲ್ಲವೇ?

ಈ ವಿಷಯವನ್ನು ನಾನು ನನ್ನ ಆತ್ಮ ಸಾಕ್ಷಿಯಾಗಿ ಈ ಮಾನ್ಯ ಸಭೆಯ ಮುಂದೆ ಇಡದೆ ಹೋದರೆ ನಾನು ಪ್ರತಿನಿಧಿಸುತ್ತಿರುವ ಜನರಿಗೆಲ್ಲಾ, ದೇಶಕ್ಕೆಲ್ಲಾ ದ್ರೋಹಮಾಡಿದಂತಾಗುತ್ತದೆ. ಪ್ರತಿ ಸಾಲಿನಲ್ಲಿಯೂ 4,000 ರೂಪಾಯಿಗಳನ್ನು ಒಂದು ಫಂಡಿಗೆಂದು ಹಾಕಿದರೂ ಅದನ್ನು ಖರ್ಚುಮಾಡುವ ವಿಷಯದಲ್ಲಿ ಏನೊಂದು ರೀತಿನೀತಿಯನ್ನೂ ಹಾಕಿಕೊಂಡಿಲ್ಲವಲ್ಲ! What was being done in the previous regime is being continued under the present regime, so far as the Depressed Class Amelioration schemes are concerned. In one stroke you will abolish or turn down the recommendations made by the Policy Committee. Therefore, Sir, I am very sorry to say on this occasion that the Government is not treating the problems of the Depressed Classes as a sacred problem.

Mr. DEPUTY SPEAKER.—I will not allow further.

The question is:

> "That a further sum not exceeding Rs. 1,90,000 be granted to the Government to defiay the charges which will come in course of payment during the year ending 31st day of March 1956 in respect of 'Rural Development'".

The motion was adopted.

Mr. DEPUTY SPEAKER.—It is now Five of the Clock. I will put the remaining Demands to vote.

DEMAND NO. 25 CO-OPERATION

42. CO-OPERATION.

Mr. SPEAKER.—The question is:

"That a further sum not exceeding Rs. 1,38,700 be granted to the Government to defray the charges which will come in course of payment during the year ending 31st day of March 1956, in respect of 'Co-operation'."

The motion was adopted.

DEMAND NO. 26 INDUSTRIES AND SUPPLIES.

43. INDUSTRIES AND SUPPLIES (EXCEPT SERICULTURE).

Mr. SPEAKER.—The question is:

"That a further sum not exceeding Rs. 21,30,000 be granted to the Government to defray the charges which will come in course of payment during the year ending 31st day of March 1956, in respect of 'Industries and Supplies (Except Sericulture).'"

The motion was adopted.

DEMAND NO. 28 MISCELLANEOUS DEPARTMENTS.

47. MISCELLANEOUS DEPARTMENTS.

Mr. SPEAKER.—The question is:

"That a further sum not exceeding Rs. 17,900 be granted to the Government to defray the charges which will come in course of payment during the year ending 31st day of March 1956, in respect of 'Miscellaneous Departments'."

The motion was adopted.

DEMAND NO. 29 CIVIL WORKS.

50. CIVIL WORKS.

Mr. SPEAKER.—The question is:

"That a further sum not exceeding Rs. 33,71,000 be granted to the Government to defray the charges which will come in course of payment during the year ending 31st day of March 1956, in respect of 'Civil Works'."

The motion was adopted.

DEMAND NO. 32 SUPERANNUATION ALLOWANCES AND PENSIONS.

55. SUPERANNUATION ALLOWANCES AND PENSIONS.

Mr. SPEAKER.—The question is:

"That a further sum not exceeding Rs. 2,32,000 be granted to the Government to defray the charges which will come in course of payment during the year ending 31st day of March 1956, in respect of 'Superannuation Allowances and pensions.'."

The motion was adopted.

DEMAND NO. 35 EXTRAORDINARY CHARGES.

63. EXTRAORDINARY CHARGES.

Mr. SPEAKER.—The question is:

"That a further sum not exceeding Rs. 1,65,000 be granted to the Government to defray the charges which will come in course of payment during the year ending 31st day of March 1956, in respect of 'Extraordinary Charges'."

The motion was adopted.

DEMAND NO. 39 WORKING EXPENSES—ROAD TRANSPORT SCHEEMS.

XLVI. A. RECEIPTS FROM ROAD TRANSPORT SCHEMES—WORKING EXPENSES.

Mr. SPEAKER.—The question is:

"That a further sum not exceeding Rs. 30,500 be granted to the Government to defray the charges which will come in course of payment during the year ending 31st

day of March 1956, in respect of 'Receipts from Road Transport Schemes—Working Expenses'."

The motion was adopted.

DEMAND NO. 41 INDUSTRIAL DEVELOPMENT.

72. CAPITAL OUTLAY ON INDUSTRIAL DEVELOPMENT.

Mr. SPEAKER.—The question is :

"That a further sum not exceeding Rs. 15,00,000 be granted to the Government to defray the charges which will come in course of payment during the year ending 31st day of March 1956, in respect of 'Capital Outlay on Industrial Development'."

The motion was adopted.

DEMAND NO. 45 ADVANCES AND LOANS.

P. LOANS AND ADVANCES BY THE STATE GOVERNMENT.

Mr. SPEAKER. —The question is :

"That a further sum not exceeding Rs 9,00,000 be granted to the Government to defray the charges which will come in course of payment during the year ending 31st day of March 1956, in respect of 'Loans and Advances by the State Government'."

The motion was adopted.

Mr. SPEAKER.—The House will now rise for the day and meet to-morrow at 8-30 A.M.

The House adjourned at Two Minutes past Five of the Clock to meet again on Friday the 14th October 1955 at Thirty minutes past Eight of the Clock in the morning.

WD 1451—GPB—550—26-12-55